ಆರಿಕೆಯ ಸಾರಾಂಶ.—(i) ಕೆರೆ ಅಂಗಳಗಳಿಗೆ ಲಗತ್ತಾದ ಖರಾಬ್ ಮತ್ತು ಗೋಮಾಳ ಜಮೀನುಗಳನ್ನು ಸಾಗುವಳಿಗೆ ಕೊಟ್ಟರೆ ಕೆರೆಯಲ್ಲಿ ಹೂಳು ತುಂಬುತ್ತಿದೆಯೊದ್ದರಿಂದ ಅವುಗಳನ್ನು ಸಾಗುವಳಿಗೆ ಕೊಡಬಾರದು.

(ii) ಅದೇ ರೀತಿಯಾಗಿ ಕೆರೆ ಅಂಗಳಗಳಿಂದ ಹುಲ್ಲು ತೆಗೆದುಕೊಳ್ಳುವುದೂ ಮೀನು ಹಿಡಿಯುವೆದಕ್ಕಾಗಿ ಕೋಡಿಯ ಹತ್ತಿರ ಗುಂಡಿಗಳನ್ನು ತೆಗೆಯುವುದೂ ಕೆರೆಗೆ ಅಪಾಯವಾದ್ದರಿಂದ ತಪ್ಪುಗಳನ್ನು ಮಾಡದಂತೆ ನಿರೋಧಿಸಬೇಕು.

ವಿಷಯಸಂಖ್ಯೆ 38.

ಅಮೃತಮಹಲ್ ಜಮೀನುಗಳನ್ನು ಸಾಗುವಳಿಗೆ ಕೊಡುವುದು.

ಮಿ॥ ಸಿ. ನಾರಾಯಣಸ್ವಾಮಿಕಟ್ಟು
ಚಿಕ್ಕಬಳ್ಳಾಪುರ ತಾಲ್ಲೂಕು.

ಆರಿಕೆಯ ಸಾರಾಂಶ.—ಸುಮಾರು 4,50,000 ಎಕರೆಗಳಷ್ಟು ಭಾರೀ ವಿಸ್ತೀರ್ಣದ ಜಮೀನನ್ನು ಅಮೃತಮಹಲ್ ಇಲಾಖೆಗೆ ಕೊಟ್ಟಿದೆ. ಇಷ್ಟು ಭಾರೀ ವಿಸ್ತೀರ್ಣಕ್ಕೆ 1000 ರಾಸುಗಳು ಮಾತ್ರ ಇರುತ್ತವೆ. ಈ ಇಲಾಖೆಯಿಂದ ಸಾಲಿಯಾನಾ 7,000 ರೂಪಾಯಿನ ಜುಜವಿ ವರಮಾನ ಬರುತ್ತಾ ಇದೆ. ಆದರೆ ಇದಕ್ಕೆ ಆಗುತ್ತಿರುವ ಖರ್ಚು ಮಾತ್ರ ಬಹಳ ದುಬಾರಿಯಾಗಿದೆ.

ಬ್ರಿಟಿಷ್ ಮಿಲಿಟರಿ ಇಲಾಖೆಗೆ ಎತ್ತುಗಳನ್ನು ಕೊಡುವುದಕ್ಕೋಸ್ಕರ ಈ ಇಲಾಖೆಯನ್ನು ಏರ್ಪಡಿಸಿತ್ತು. ಬ್ರಿಟಿಷ್ ಮಿಲಿಟರಿ ಇಲಾಖೆಯವರು ಎತ್ತುಗಳಿಗೆ ಬದಲಾಗಿ ಬೇಸರುಕತ್ತೆಗಳನ್ನು ಈಚೆಗೆ ಉಸಯೋಗಿಸುತ್ತಾ ಇದ್ದಾರೆ. ಆದಕಾರಣ ಅಷ್ಟು ಭಾರಿ ವಿಸ್ತೀರ್ಣ ಜಮೀನುಗಳನ್ನು ಅನ್ಯತಮೆಹಲ್ ಇಲಾಖೆಯವರಿಗೆ ಕೊಡುವುದು ಅನಾವಶ್ಯಕ. ಆ ಪೈಕಿ ಬಹುಭಾಗದ ಜಮೀನನ್ನು ಹರಾಜುಹಾಕಿಸಿ ಸಾಗುವಳಿಗೆ ಕೊಟ್ಟರೆ ಸುಮಾರು 4 ಕೋಟಿ ರೂಪಾಯಿ ಖರೀದಿ ಬರುವುದಲ್ಲದೆ ವರ್ಷ ಬಂದಕ್ಕೆ ಸುಮಾರು 10 ಲಕ್ಷ ರೂಪಾಯಿ ಕಂದಾಯ ಜಾಸ್ತಿಯಾಗಿ ಬರುತ್ತದೆ.

ವಿಷಯಸಂಖ್ಯೆ 34.
ಸಾಗುವಳಿ ಜಮೀನು ಹಿಡುವಳಿಗಳನ್ನು ಒಟ್ಟುಗೂಡಿಸುವುದು.
ವಿ|| ಸಿ. ವಾಸುದೇವರಾಯುರು, ಚಿಕ್ಕವುಗಳೂರು ತಾಲ್ಲೂಕು.

ಆರಿಕೆಯ ಸಾರಾಂಶ.—ಸಂಸ್ಥಾನದಲ್ಲಿ ಸಾಗುವಳಿ ಹಿಡುವಳಿಗಳು ಚದರಿ ಹೋಗಿ ಇವೆ. ಸಾಗುವಳಿದಾರರು ಜಮೀನುಗಳ ಉಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ಸ್ವತಂತ್ರವಾಗಿ ಹೋಗುವದಕ್ಕೆ ದಾರಿಗಳಿಲ್ಲ. ಜಮೀನುಗಳಿಗೆ ಗೊಬ್ಬರ ತೆಗೆದುಕೊಂಡು ಹೋಗಲು ಮತ್ತು ಜಮೀನುಗಳಿಂದ ಪೈರನ್ನು ತೆಗೆದುಕೊಂಡು ಬರಲೂ ಗಾಡಿ ದಾರಿ ಇಲ್ಲ. ಹಿಡುವಳಿಗಳ ಸುತ್ತಲೂ ಬೇಲಿಗಳನ್ನು ಹಾಕಿ ಬಾಜು ಹಿಡುವಳಿಗಳಿಂದ ಪ್ರತ್ಯೇಕಿಸಿ ಬಂದಂಗಿ ಮಾಡಬೇಕು. ಪುರುವಿನಲ್ಲಿ ಪ್ರತಿ ಡಿಸ್ಟ್ರಿಕ್ಟ್‌ನಲ್ಲಿಯೂ ಬಂದೊಂದು ಸಣ್ಣ ಸಣ್ಣ ಗ್ರಾಮದಲ್ಲಿ ಈ ಕ್ರಮವನ್ನು ಅಜಮಾಯಿಷಿ ಮಾಡಬೇಕು. ವ್ಯವಸಾಯದ ಹಿಡುವಳಿಗಳನ್ನು ಒಟ್ಟುಗೂಡಿಸುವ (ಕನ್ಸಾಲಿಡೇಷನ್ ಆಫ್ ಅಗ್ರಿಕಲ್‌ಚರಲ್ ಹೋಲ್ಡಿಂಗ್ಸ್) ಆಕ್ಟನ್ನು ಈ ಸಂಸ್ಥಾನದಲ್ಲಿ ಜಾರಿಗೆ ತರಬೇಕು. ಪ್ರತಿ ಹಿಡುವಳಿಯೊಳ್ಳಿಯೂ ತರಿ ಜಮೀನಾದರೆ 3 ಎಕರೆಗಿಂತ ಕಡಿಮೆ ಇರಕೂಡದು. ಖುಷ್ಕಿಯಾದರೆ 5 ಎಕರೆಗಿಂತ ಕಡಿಮೆ ಇರಕೂಡದು.

ವಿಷಯಸಂಖ್ಯೆ 35.

ಹಕ್ಕುಗಳನ್ನು ದಾಖಲ್ಮಾಡುವ ಕ್ರಮವನ್ನು ಜಾರಿಗೆ ತರುವುದು.

ವಿ॥ ಎಸ್. ಎಸ್. ನಂಜುಂಡಯ್ಯನವರು,
,, ಎಚ್. ಬೋರಣ್ಣನವರು,
,, ಕೆ. ಮಹದೇವಪ್ಪನವರು.
ಹಾಸನ ತಾಲ್ಲೂಕು.
,, ಎಚ್. ವಿ. ರಂಗಸ್ವಾಮಿಯವರು, ಹಾಸನ ಮ್ಯು॥

ಅರಿಕೆಯ ಸಾರಾಂಶ.—ಹಕ್ಕುಗಳನ್ನು ರಿಕಾರ್ಡ್ ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕು.

ವಿಷಯಸಂಖ್ಯೆ 36.

ಷಿಕ್ಕೆದಾರರ ಹಕ್ಕನ್ನು ಅಂಗೀಕರಿಸುವುದು.

ವಿ॥ ಎಚ್. ಎಸ್. ಗುಂಡಪ್ಪನವರು,
,, ಪಟೇಲ್ ಬಾಲೆಗೌಡರು,
ಕುಣಿಗಲ್ ತಾಲ್ಲೂಕು.
,, ಸಿಂಗ್ರಿ ನಂಜಪ್ಪನವರು,
ತಿಪಟೂರು ಮ್ಯು॥
,, ಗುರುಜಡನ್ನ ಬಸವಯ್ಯನವರು,
ತುಮಕೂರು ಮ್ಯು॥
,, ಜೆ. ಎಸ್. ಮುರಿಗೆಪ್ಪನವರು,
ಗುಬ್ಬಿ ತಾಲ್ಲೂಕು.

ಅರಿಕೆಯ ಸಾರಾಂಶ.—ತಮ್ಮ ಅನುಭವದಲ್ಲಿರುವ ಜಮೀನುಗಳ ಕಂದಾಯವನ್ನು ಕೊಡುವ ಷಿಕ್ಕೆದಾರರ ಹಕ್ಕನ್ನು ಅಂಗೀಕರಿಸಬೇಕು.

ವಿಷಯಸಂಖ್ಯೆ 37.

ಬಂದು ಖಾತೆಯಲ್ಲಿ ನಾನಾ ಜನ ಗಳಿಗೆ ಇರುವ ಹಿಸ್ಸೆಗಳನ್ನೂ ಅವ ರು ಕೊಡಬೇಕಾದ ಕಂದಾಯಗಳ ನ್ನೂ ನಿರ್ಧರಿಸುವುದು.

ವಿ॥ ಜನಳಿ ಹುಚ್ಚಪ್ಪನವರು,
ತ್ಯಾಮಗೊಂಡ್ಲು ಮ್ಯು॥
,, ಹುಚ್ಚೆ ಹನುಮೆಗೌಡರವರು,
ನೆಲಮಂಗಲ ತಾಲ್ಲೂಕು.

ವಿಷಯಸಂಖ್ಯೆ 38.

ಕಾಳು ಜಮೀನುಗಳಲ್ಲಿ ಏಲಕ್ಕಿ ಯನ್ನು ಬೆಳೆಯುವ ವಿಷಯದಲ್ಲಿ ಇ ರುವ ನಿರ್ಬಂಧಗಳನ್ನು ತೆಗೆದುಬಿಡು ವುದು.

ವಿ ಮಳಲಿ ವೆಂಕಟರಾಮಯ್ಯ ನವರು,
ದಕ್ಷಿಣ ಮೈಸೂರು ನೇಟಿವ್ ಪ್ಲಾಂಟರುಗಳ ಸಂಘ,
,, ಡಿ. ಬಸವೇಗೌಡರವರು,
,, ಬಿ. ದ್ಯಾವಪ್ಪಗೌಡರವರು,
,, ಐಗೂರು ಮಲ್ಲೇಗೌಡರವರು,
ಮಂಜರಾಬಾದು ತಾಲ್ಲೂಕು.

ಅರಿಕೆಯ ಸಾರಾಂಶ.—ಬಂದು ಖಾತೆಯಲ್ಲಿ ತಮಗೆ ಸೇರಿರುವ ಭಾಗಗಳಿ ಗಾಗಿ ಅನೇಕರು ಕಂದಾಯಗಳನ್ನು ಕೊಡುತ್ತಾರೆ. ಬಂಡೆಯಂದು ಹಿಸ್ಸೆಗೂ ಇಷ್ಟೆಷ್ಟು ಕಂದಾಯ ಕೊಡಬೇಕೆಂದು ಸ್ಪಷ್ಟವಾಗಿ ಖಾತೆಯಲ್ಲಿ ಕಾಣಿಸಿರುವು ದಿಲ್ಲ. ಕೆಲವು ಸಂದರ್ಭಗಳಲ್ಲಿ ಇದರಿಂದ ರೈತರಿಗೆ ತೊಂದರೆಯುಂಟಾಗು ತ್ತದೆ ಮತ್ತು ಕೆಲವುವೇಳೆ ಅವರು ತಮ್ಮ ಪಕ್ಕುಗಳನ್ನೂ ಕಳದುಕೊಳ್ಳು ತ್ತಾರೆ. ಆದಕಾರಣ ಬಬ್ಬೊಬ್ಬರಿಗೂ ಯಾವ ಹಿಸ್ಸೆ ಇದೆ ಮತ್ತು ಅವರು ಎಷ್ಟೆಷ್ಟು ಕಂದಾಯ ಕೊಡಬೇಕು, ಎಂಬುದನ್ನು ಸರಿಯಾಗಿ ರಿಜಿಸ್ಟರಿನಲ್ಲಿ ತೋರಿಸಬೇಕು.

ಅರಿಕೆಯ ಸಾರಾಂಶ.—ಕಾಫೀ ಜಮೀನುಗಳಲ್ಲಿ ಏಲಕ್ಕಿಯನ್ನು ಬೆಳೆಯು ವ ವಿಷಯದಲ್ಲಿ ಇರುವ ನಿರ್ಬಂಧಗಳನ್ನು ತೆಗೆದುಬಿಡಬೇಕು.

ವಿಷಯಸಂಖ್ಯೆ 39.

ಗ್ರಾಮದ ವಿಸ್ತೀರ್ಣ ಪ್ರಜಾಸಂಖ್ಯೆ ವಗೈರೆ ವಿವರಗಳನ್ನು ಕಾಣಿಸಿ ಅಚ್ಚು ಹಾಕಿದ ಪುಸ್ತಕವನ್ನು ಪತ್ರಿ ಗ್ರಾಮಕ್ಕೂ ಕೊಡುವುದು.

ಎ॥ ಸಿ. ನರಸಿಂಹಯ್ಯನವರು, ಕೆಗ್ಗಡದೇವನಕೊಪ್ಪಲು ತಾಲ್ಲೂಕು.
,, ಎಚ್. ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ ತಾಲ್ಲೂಕು.

ವಿಷಯಸಂಖ್ಯೆ 40.

ಸುಪಾರಿ ಸೆಸ್ಸನ್ನು ರದ್ದುಮಾಡುವುದು,

ಎ॥ ಹೊಸಕೊಪ್ಪ ಕೃಷ್ಣರಾಯರವರು, ಕೊಪ್ಪ ತಾಲ್ಲೂಕು.
,, ಎಚ್. ಎಸ್. ಗಣೇಶರಾಯರು, ತುಲೆನಾಡು ಜಮೀನ್ದಾರರ ಸಂಘ, ಹೊಸಕೊಪ್ಪ.

ವಿಷಯಸಂಖ್ಯೆ 41.

ಇರಿಗೇಷ್ಣ ಸೆಸ್ಸನ್ನು ರದ್ದುಮಾಡುವುದು.

ಎ॥ (a) ನಾಡಿಗ ಲಕ್ಷ್ಮಣರಾಯರವರು,
,, ನಾಡಿಗ ಭಾಷ್ಯಕರರಾಯರವರು,
,, ಬಿ. ಶಿವಾಜಿ ಒಡೆಯರವರು, ಸೊರಬ ತಾಲ್ಲೂಕು.
,, ಕಾಳೆ ಗೌಂಡಪ್ಪನವರು,
,, ಅಂಚೆ ತಿಮ್ಮಪ್ಪನವರು,
,, ವೆಂಕಟಗಿರಿಯಪ್ಪನವರು, ಸಾಗರ ತಾಲ್ಲೂಕು.

ಅರಿಕೆಯ ಸಾರಾಂಶ.—ಪ್ರತಿಂ

ಪಟ್ಟಿ, ಈ ಕೆಳಗೆ ಕಂಡ ವಿವರಗಳನ್ನುಳ್ಳ ಅಚ್ಚು ಹಾಕಿದ ಬಂದು ಪುಸ್ತಕವನ್ನು ಕೊಡಬೇಕೆಂದು ಸಲಹೆ ಮಾಡಿದೆ :—

(1) ಗ್ರಾಮದ ಚರಿತ್ರೆ.

(2) ವಿಸ್ತೀರ್ಣ, ಪ್ರಜಾಸಂಖ್ಯೆ ಮತ್ತು ಉದ್ಯೋಗ ;

(3) ಹಿಡುವಳಿದಾರರು, ಜಂಟಿ ಹಿಡುವಳಿದಾರರು, ಜಮೀನುಗಳನ್ನು ಪರಭಾರೆ ಮಾಡಿಕೊಂಡಿರುವವರು ಮತ್ತು ಹಿಡುವಳಿಯ ಸ್ವಭಾವ.

ಅರಿಕೆಯ ಸಾರಾಂಶ.—ಸುಪಾರಿ ಸೆಸ್ಸು ಜನಗಳಿಗೆ ಅನವಶ್ಯಕವಾದ ತೆರಿಗೆಯಾಗಿರುವುದರಿಂದಲೂ, ಅದನ್ನು ಹಾಕುವುದಕ್ಕೆ ಸರಿಯಾದ ಕಾರಣವೂ ಇಲ್ಲದಿರುವುದರಿಂದಲೂ, ಈ ಸೆಸ್ಸನ್ನು ರದ್ದು ಮಾಡಬೇಕು.

ಅರಿಕೆಯ ಸಾರಾಂಶ.—(a) ನೀರಿನ ಆಸರೆ ಇಲ್ಲದಿರುವ ಜಮೀನುಗಳ ಮೇಲೆ ಇರಿಗೇಷ್ಣ ಸೆಸ್ಸು ವಸೂಲಾಗುತ್ತಿರುವುದನ್ನು ರದ್ದು ಮಾಡಬೇಕು. ಅಲ್ಲದೆ, ತರೀ ಮತ್ತು ಬಾಗಾಯತು ಜಮೀನುಗಳ ಕಂದಾಯದಲ್ಲಿ ಈ ಸೆಸ್ಸು ಮೊದಲೇ ಸೇರಿರುವುದರಿಂದ ಪ್ರತ್ಯೇಕವಾಗಿ ಸೆಸ್ಸನ್ನು ವಸೂಲಾಗುತ್ತಿರಬಾರದು.

(b) ಮಿ॥ ವೈ. ರಾಮರಾಯರವರು,
,, ಬಿ. ಗೋಪಾಲಾಚಾರ್ಯರು, ತೀರ್ಥಹಳ್ಳಿ ತಾಲ್ಲೂಕು.
(c) ,, ಹೊಸಕೊಪ್ಪ ಕೃಷ್ಣರಾಯರವರು, ಕೊಪ್ಪ ತಾಲ್ಲೂಕು.
,, ಎಚ್. ಎಸ್. ಗಣೇಶರಾಯರವರು, ಮಲೆನಾಡು ಜಮೀನ್ದಾರರ ಸಂಘ, ಹೊಸಕೊಪ್ಪ.
(d) ,, ರಂಗಸ್ವಾಮಿ ಕಟ್ಟರವರು ಮಾಗಡಿ ಮ್ಯುನಿಸಿಪಾಲಿಟಿ
,, ಜವಳಿ ಹುಚ್ಚಪ್ಪನವರು, ತ್ಯಾವಣಿಗೊಂಡ್ಲು ಮ್ಯುನಿಸಿಪಾಲಿಟಿ.
,, ಹುಚ್ಚಜ್ಜ ಜನುಮೇಗೌಡರವರು,
,, ಸಿ. ನರಹರಯ್ಯನವರು, ನೆಲಮಂಗಲ ತಾಲ್ಲೂಕು.
,, ಮುನಿಸ್ವಾಮಿ ಗೌಡರವರು
,, ವೀರೇಗೌಡರವರು, ದೊಡ್ಡಬಳ್ಳಾಪುರ ತಾಲ್ಲೂಕು.

(b) ಮಲೆನಾಡಿನಲ್ಲಿರುವ ತರೀ ಜಮೀನುಗಳ ಒಟ್ಟು ವಿಸ್ತೀರ್ಣದ ಪೈಕಿ $\frac{1}{16}$ ನೆಯ ಭಾಗ ಸಹಾ ಕೆರೆಗಳ ಯಾ ನಾಲಾಗಳ ಆಸರೆಯಲ್ಲಿರುವೆದಿಲ್ಲ. ಅಲ್ಲಿಯೂ ಇರಿಗೇಷ್ಣ ಸೆಸ್ಸನ್ನು ವಸೂಲ್ಮಾಡುತ್ತಿದೆ. ಕೆರೆಗಳಿಂದ ನೀರು ಹಾಯುವ ಜಮೀನುಗಳ ಮೇಲೆ ಮಾತ್ರ ಈ ಸೆಸ್ಸನ್ನು ವಸೂಲ್ಮಾಡಬೇಕು. ಅಂಥಾ ಕೆರೆಗಳ ದುರಸ್ತಿಗಾಗಿ ರೈತರಿಂದ ಕಂಟ್ರಿಬ್ಯೂಷ್ಣ ವಸೂಲ್ಮಾಡ ಕೂಡದು.

(c) ಮಲೆನಾಡಿನ ತರೀ ಜಮೀನುಗಳಿಗೆಲ್ಲಾ ಮೇಯೇ ಆಧಾರವಾಗಿರುವುದರಿಂದ ರೀಸೆಟ್ಲ್ಮೆಂಟ್ ಜಾರೀಗೆ ಬಂದ ನಂತರವೂ ಇರಿಗೇಷ್ಣ ಸೆಸ್ಸನ್ನು ವಸೂಲ್ಮಾಡುವುದು ನ್ಯಾಯವಲ್ಲ. ಆದಕಾರಣ ಅದನ್ನು ವಜಾ ಮಾಡಬೇಕು.

(d) ಬಾವಡಿ ಆಸರೆಯಿಂದಲೂ ಮಳೆಯ ನೀರಿನಿಂದಲೂ ಸಾಗುವಳಿಯಾಗುವ ಜಮೀನುಗಳ ಮೇಲೂ ಇರಿಗೇಷ್ಣ ಸೆಸ್ಸನ್ನು ವಸೂಲ್ಮಾಡುತ್ತಿದೆ. ಸರ್ಕಾರೀ ಕೆರೆಗಳಿಂದ ಅಥವಾ ನದಿಗಳಿಂದ ಸಾಗುವಳಿಯಾಗುವ ಜಮೀನುಗಳ ಮೇಲೆ ಈ ಸೆಸ್ಸನ್ನು ವಸೂಲ್ಮಾಡುವುದು ನ್ಯಾಯವಾಗಿರುತ್ತದೆ. ಆದರೆ ಬಾವಿಗಳಿಂದಲೂ ಮಳೆಯಿಂದಲೂ ಸಾಗುವಳಿಯಾಗುವ ಜಮೀನುಗಳ ಮೇಲೆ ಈ ಸೆಸ್ಸನ್ನು ವಸೂಲ್ಮಾಡಕೂಡದು.

ವಿಷಯಸಂಖ್ಯೆ 42.

ಪಂಚಮ ದರಖಾಸ್ತುದಾರರಿಗೆ ತಕಾವಿ ಸಾಲಗಳನ್ನು ಕೊಡುವುದು

ಮಿ॥ ಟಿ. ಮುರುಗೇಶಂ ಪಿಳ್ಳೈಯವರು
ಆದಿದ್ರಾವಿಡ ಅಭಿವೃದ್ಧಿ
ಸಂಘ, ಬೆಂಗಳೂರು.

ಅರಿಕೆಯ ಸಾರಾಂಶ.—ಪಂಚಮ ದರಖಾಸ್ತುದಾರರಿಗೆ ದನಗಳು, ಬೀಜ, ಮತ್ತು ಮುಟ್ಟುಗಳನ್ನು ಕೊಳ್ಳುವುದಕ್ಕಾಗಿಯೂ ವಾಸಮಾಡುವ ಬಗ್ಗೆ ಒಕ್ಕಲ ಮನೆಗಳನ್ನು ಕಟ್ಟುವುದಕ್ಕಾಗಿಯೂ ಸರ್ಕಾರದವರು ನಯವಿಟ್ಟು ತಕಾವಿ ಸಾಲಗಳನ್ನು ಕೊಡಬೇಕು. ಈ ಸಾಲಗಳಿಗೆ ಮೊದಲನೆಯ ವರ್ಷ ಬಡ್ಡಿಯಿಲ್ಲದೆಯೂ ಎರಡನೆಯ ವರ್ಷದಿಂದ ಪೂರಾ ಬಡ್ಡಿಯೂ ಕೂಡಬೇಕಲ್ಲದೆ ಐದು ವರ್ಷಗಳೊಳಗಾಗಿ ಈ ಸಾಲಗಳನ್ನು ತೀರಿಸಬೇಕು.

ವಿಷಯ ಸಂಖ್ಯೆ 43.

ಇಪ್ಪತ್ತೈದು ರೂಪಾಯಿಯವರೆಗೆ ರೀಫಂಡುಗಳನ್ನು ಮುಂಜೂರ್ಮಾಡಲು ಅಮಲ್ದಾರರಿಗೆ ಅಧಿಕಾರ ಕೊಡುವುದು ಅಥವಾ ರೆವೆನ್ಯೂ ಡಿಪಾಜಿಟ್ಟು ಪದ್ಧತಿಯನ್ನು ಪುನಃ ಜಾರಿಗೆ ತರುವುದು.

ಮಿ॥ ಎ. ಶ್ರೀಕಂಠಪ್ಪನವರು,
ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡು.
,, ಸಿ. ನರಹರಯ್ಯನವರು,
ನೆಲಮಂಗಲ ತಾಲ್ಲೂಕು.

ಅರಿಕೆಯ ಸಾರಾಂಶ.—ಪೂರ್ವದಲ್ಲಿ ರೆವಿನ್ಯೂ ಡಿಪಾಜಿಟ್ಟುಗಳ ಬಾಬಿಗೆ ಸೇರಿಸಿ ಕೊಡಲ್ಪಡುತ್ತಿದ್ದ ಕೆಲವು ರೆವಿನ್ಯೂ ಬಾಬುಗಳನ್ನು ಈಗ ಸರಿಯಾದ ಬಾಬಿಗೆ ಜಮೆ ಕಟ್ಟುತ್ತಿದೆ. ಆಸಾಮಿಗಳು ಮೊಬಲಗನ್ನು ವಾಪಸು ತೆಗೆದುಕೊಳ್ಳಬೇಕಾಗಿರುವ ಸಂದರ್ಭಗಳಲ್ಲಿ, ಅವರು ವಿಶೇಷ ತೊಂದರೆಗೆ ಗುರಿಯಾಗಬೇಕಾಗುತ್ತದೆ; ಏಕೆಂದರೆ, ರೀಫಂಡು ಬಿಲ್ಲುಗಳನ್ನು ತಯಾರ್ಮಾಡಿ ಸರಿಯಾದ ಮುಂಜೂರಾತಿಯ ನಂತರ ಹಣವನ್ನು ಪಾವತಿ ಮಾಡಬೇಕಾಗುತ್ತದೆ ಮತ್ತು ಇದಕ್ಕೆ ಬಹುಕಾಲ ಹಿಡಿಯುವುದು. ಆದಕಾರಣ ಕನಿಷ್ಠ ಪಕ್ಷ 25 ರೂಪಾಯಿಗಳವರೆಗಾದರೂ ರೀಫಂಡುಗಳನ್ನು ಮುಂಜೂರ್ಮಾಡುವುದಕ್ಕೆ ಅಮಲ್ದಾರರಿಗೆ ಅಧಿಕಾರ ಕೊಡಬೇಕು; ಇಲ್ಲವಾದರೆ ಮೊದಲಿನ ಡಿಪಾಜಿಟ್ಟು ಪದ್ಧತಿಯನ್ನೇ ಪುನಃ ಜಾರಿಗೆ ತರಬೇಕು.

ವಿಷಯಸಂಖ್ಯೆ 44.

ಗ್ರಾಮಾಭಿವೃದ್ಧಿ ಕಾಮಗಾರಿಗಳಿಗೆ ಕೆಲಸ ಮಾಡುವ ಬಗ್ಗೆ ನಿರ್ಬಂಧವಪಡಿಸುವುದು.

ಮಿ॥ ವೆಂಕಟಕಾಮೇಗೌಡರವರು,
ಮಾಲೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಗ್ರಾಮಾಭಿವೃದ್ಧಿ ಏರ್ಪಾಡಿಗೆ ಸಂಬಂಧಪಟ್ಟ ಕಾಮಗಾರಿಗಾಗಿ ವಾರಕ್ಕೆ ಅರ್ಧದಿನದಂತೆ ಪ್ರತಿಯೊಬ್ಬರೂ ಕೆಲಸ ಮಾಡಬೇಕಾಗಿದೆ. ಆದರೆ ಯಾರಾದರೂ ಕೆಲಸಕ್ಕೆ ಹಾಜರಾಗದಿದ್ದರೆ ಆ ತಪ್ಪಿತಕ್ಕಾಗಿ ಅವರನ್ನು ಶಿಕ್ಷಿಸಲು ಯಾವ ಕಾನೂನೂ ಇರುವುದಿಲ್ಲ. ಆದಕಾರಣ ಗ್ರಾಮಾಭಿವೃದ್ಧಿ ಕಾಮಗಾರಿಗಳಿಗಾಗಿ ಗ್ರಾಮಸ್ಥರನ್ನು ಬಲಾತ್ಕಾರವಾಗಿ ಹಾಜರಾಗುವಂತೆ ಮಾಡಲು ತಪ್ಪಿತಸ್ಥರ ವಿಷಯದಲ್ಲಿ ಒಂದು ಗೊತ್ತಾದ ದಂಡನೆಯನ್ನು ವಿಧಿಸಿ ಹುಕುಮುಗಳನ್ನು ಸಾದರ್ಪಡಿಸಬೇಕೆಂದು ಪ್ರಾರ್ಥಿಸಿದೆ.

ವಿಷಯಸಂಖ್ಯೆ 45.

ಗ್ರಾಮಗಳಲ್ಲಿರುವ ಕಟ್ಟಡ ನಿವೇಶನಗಳ ಅಳತೆಯನ್ನು ಖಾನೇಷುಮಾರಿ ಲೆಕ್ಕಗಳಲ್ಲಿ ನಮೂದಿಸುವುದು.

ಮಿ॥ ಜಿ. ರಾಮರೆಡ್ಡಿಯವರು,
ಬೌರಿಂಗಪೇಟೆ ತಾಲ್ಲೂಕು.

ಅರಿಕೆಯ ಸಾರಾಂಶ.—ಪ್ರಕೃತದಲ್ಲಿ ಗ್ರಾಮಗಳಲ್ಲಿರುವ ಖಾಲೀ ಕಟ್ಟಡ ನಿವೇಶನಗಳನ್ನು ಸರಿಯಾಗಿ ಅಳತೆಮಾಡಿ ಗ್ರಾಮದ ಖಾನೇಷುಮಾರಿ ಲೆಕ್ಕಗಳಲ್ಲಿ ತೋರಿಸುತ್ತಿಲ್ಲ. ಆದಕಾರಣ ಖಾಲೀ ನಿವೇಶನಗಳಲ್ಲಿ ಬತ್ತುವರಿಗೆ ಅವಕಾಶವಿದೆ. ಆದ್ದರಿಂದ ಎಲ್ಲಾ ಗ್ರಾಮಗಳಲ್ಲಿಯೂ ಸರ್ಕಾರೀ ಕಟ್ಟಡ ನಿವೇಶನಗಳನ್ನು ಸರಿಯಾಗಿ ಅಳತೆ ಮಾಡಿ ಆಯಾ ಗ್ರಾಮದ ಖಾನೇಷುಮಾರಿ ಲೆಕ್ಕಗಳಲ್ಲಿ ತೋರಿಸುವಂತೆ ಹುಕುಂ ಮಾಡಬೇಕು.

ವಿಷಯಸಂಖ್ಯೆ 46.

ಸಾಲಗಳಿಗಾಗಿ ಬರುವ ದರಖಾಸ್ತುಗಳ ವಿಲೇವಾರಿಗೆ ಕಾಲಪರಿಮಿತಿ

ಮಿ॥ ಸುರನಗಿ ಸಿದ್ದಬಸಪ್ಪನವರು,
ಷಿಕಾರಿಪುರ ತಾಲ್ಲೂಕು.

ಅರಿಕೆಯ ಸಾರಾಂಶ.—ಸಾಲಗಳಿಗಾಗಿ ಬರುವ ದರಖಾಸ್ತುಗಳು ಬಹಳ ಸುಸ್ತಿಯಾಗುತ್ತದೆ. ವಿಲೇವಾರಿಯಾಗುವುದರಲ್ಲಿ ಅದರಿಂದ ರೈತರಿಗೆ ಬಹು ಅನಾನುಕೂಲವೂ ತೊಂದರೆಯೂ ಆಗುತ್ತಿದೆ. ಅಂಥಾ ದರಖಾಸ್ತುಗಳ ವಿಲೇವಾರಿಗೆ ಒಂದು ಕಾಲ ಪರಿಮಿತಿಯನ್ನು ಗೊತ್ತುಮಾಡಬೇಕು.

ರೆವಿನ್ಯೂ.—(ರೆವಿನ್ಯೂ ಸರ್ವೇ ಮತ್ತು ಸೆಟ್ಲ್‌ಮೆಂಟ್)

(ವಿಷಯಸಂಖ್ಯೆ 47ರಿಂದ 48ರ ವರೆಗೆ.)

ವಿಷಯಸಂಖ್ಯೆ 47.

ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂ ಟಿನಲ್ಲಿ ಕಂದಾಯಗಳ ದರಗಳನ್ನು ವಿಸ್ತರಿಸುವುದು.

೨॥ ಬಿ. ರಂಗರಾಜಯ್ಯನವರು, ಮೂಡಿಗೆರೆ ತಾಲ್ಲೂಕು.
,, ಜಾವಳಿ ಗಣೇಶರಾಯರವರು, ಕಡೂರು ಡಿಸ್ಟ್ರಿಕ್ಟ್ ಬೋರ್ಡ್.

ಆರಿಕೆಯ ಸಾರಾಂಶ.—ಮೊದಲಿನ ದರಗಳನ್ನೇ ಇಟ್ಟುಕೊಳ್ಳುವುದು ಸಾಧ್ಯವಿಲ್ಲದಿದ್ದರೆ ರೆವಿನ್ಯೂ ಸರ್ವೇ ಮತ್ತು ಸೆಟ್ಲ್‌ಮೆಂಟಿನಲ್ಲಿ ಕಂದಾಯದ ದರಗಳನ್ನು ಅರ್ಧಪಾಲಿನಷ್ಟಾದರೂ ಕಮ್ಮಿ ಮಾಡಬೇಕೆಂದು ಪ್ರಾರ್ಥಿಸಿದೆ; ಏಕೆಂದರೆ, ಸಕಾಲದಲ್ಲಿ ಸಾಕಾವಷ್ಟು ಮಳೆಯಿಲ್ಲದಿರುವುದು, ನೀರಾವರಿಯ ಸೌಕರ್ಯಗಳ ಅಭಾವ ಮತ್ತು ಜೀವನದ ಖರ್ಚು ಹೆಚ್ಚಿರುವುದು, ಈ ಕಾರಣಗಳ ದೆಸೆಯಿಂದ ಜನಗಳ ಉಪಪತ್ತಿಯು ಕಮ್ಮಿಯಾಗಿದೆ.

ವಿಷಯಸಂಖ್ಯೆ 48.

ನೀರಾವರಿಯ ಸೀಳುನಾಲೆಗಳನ್ನು ತೋರಿಸತಕ್ಕ ನಕಾಶೆಗಳನ್ನು ತಯಾರಿಸುವುದು.

a) ವಿ॥ ಎಲ್. ವೇಮಾರೆಡ್ಡಿಯವರು ಮೂಲೂರು ಮ್ಯುನಿಸಿಪಾಲಿಟಿ,

b) ,, ಪಟೇಲ್ ವಿರೂಪಣ್ಣನವರು ಚಳ್ಳಕೆರೆ ತಾಲ್ಲೂಕು.

ಆರಿಕೆಯ ಸಾರಾಂಶ.—(a) ಅನೇಕ ಸಂದರ್ಭಗಳಲ್ಲಿ ರೈತರು ನೀರಾವರಿಯ ಸೀಳು ನಾಲೆಗಳನ್ನು ಅಡ್ಡಗಟ್ಟಿ ಪಕ್ಕದಲ್ಲಿರುವ ಜಮೀನುಗಳಿಗೆ ಧಾರಾಳವಾಗಿ ನೀರು ಹರಿಯದಂತೆ ಮಾಡಿ ಸಮೀಪದ ಖಾತೇದಾರರ ಬೆಳೆಗಳನ್ನು ಕೆಡಿಸುತ್ತಾರೆ. ಗ್ರಾಮನಕಾಶೆಯಲ್ಲಿ ಸೀಳು ನಾಲೆಗಳನ್ನು ತೋರಿಸುವುದಿಲ್ಲವಾಗಿ ವಿವಾದಗಳನ್ನು ಫೈಸಲ್ಮಾಡುವುದು ಅಸಾಧ್ಯವಾಗಿದೆ. ನೀರು ಸರಬರಾಯಿ ಮಾಡುವ ಮುಖ್ಯ ನಾಲೆಯೊಂದಿಗೆ ಪ್ರತಿ ಸರ್ವೆ ನಂಬರಿಗೂ ಇರುವ ಸರಿಯಾದ ಸಂಬಂಧವನ್ನು ತೋರಿಸುವ ಟ್ಯಾಂಕ್‌ವಾರ್ ಪಟ್ಟಿಯೊಂದನ್ನು ತಯಾರ್ಮಾಡಿ ತಾಲ್ಲೂಕು ಕಚೇರಿಯಲ್ಲಿ ಇರಿಸತಕ್ಕದ್ದೆಂದು ಪ್ರಾರ್ಥಿಸಿದೆ.

(b) ಮೇಜರ್ ಮತ್ತು ಮೈನರ್ ಕೆರೆಗಳ ಕೆಳಗಣ ಜಮೀನುಗಳ ರೈತರು ಕೆಲವು ಸಂದರ್ಭಗಳಲ್ಲಿ ಹಾಲೀ ಇರತಕ್ಕ ತೂಬು ಕಾಲಿವೆಗಳ

ನ್ನೂ ಸೀಳು ಕಾಲಿವೆಗಳನ್ನೂ ಪೂರ್ತಿಯಾಗಿ ಅಡ್ಡಗಟ್ಟಿ ಅಥವಾ ಮುಚ್ಚಿ ಬಿಟ್ಟು ತಮ್ಮ ಅನುಕೂಲಕ್ಕಾಗಿ ಹೊಸ ಸೀಳು ಕಾಲಿವೆಗಳನ್ನು ತೆಗೆಯು ತ್ತಾರೆ. ಇದರಿಂದ ಕೆಲವು ರೈತರಿಗೆ ಅವರ ಜಮೀನುಗಳಿಗೆ ನೀರು ದೊರೆಯು ವುದಿಲ್ಲವಾಗಿ ಕೆರೆಯ ಕೆಳಗಣ ಜಮೀನುಗಳ ರೈತರಲ್ಲಿ ಪದೇಪದೇ ಜಗಳಗಳು ಹುಟ್ಟುತ್ತವೆ. ಈ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಪ್ರತಿ ಕೆರೆಯ ಕೆಳಗೂ ಇರುವ ತೂಬು ಕಾಲಿವೆಯ ಮೆತ್ತು ಸೀಳು ಕಾಲಿವೆಗಳ ಸ್ಥಾನ ವೆನ್ನು ತೋರಿಸತಕ್ಕ ನಕಾಶೆಯನ್ನು ತಯಾರಿಸಿಡಿ ಅದನ್ನು ಗ್ರಾಮಪಂಚಾಯಿ ತರು ದೃಢಪಡಿಸಿದ ತರುವಾಯ ಸರ್ಕಾರೀ ರಿಕಾರ್ಡುಗಳಲ್ಲಿ ಇರಿಸಿರಬೇಕೆಂದು ಪ್ರಾರ್ಥಿಸಿದೆ. ಹೀಗೆ ಮಾಡುವುದರಿಂದ ಹಾಲೀ ನಾಲೆಗಳನ್ನು ಮುಚ್ಚುವುದ ರಿಂದಲೇ ಆಗಲೀ ಹೊಸ ನಾಲೆಗಳನ್ನೂ ಕೆಗೆಯುವುದರಿಂದಲೇ ಆಗಲೀ ಉಂಟಾ ಗಬಹುದಾದ ವಿವಾದಗಳನ್ನು ವ್ಯವಸ್ಥೆ ಮಾಡುವುದು ಸುಲಭವಾಗುವುದು.

ರೆವಿನ್ಯೂ—(ಫಾರೆಸ್ಟ್).

(ವಿಷಯಸಂಖ್ಯೆ 49—61).

ವಿಷಯಸಂಖ್ಯೆ 49.

ಡಿಸ್ಟ್ರಿಕ್ಟುಗಳಲ್ಲಿನ ಫಾರೆಸ್ಟ್ ಸಂಬಂಧವಾದ ಅಡಳಿತಗಳ ಮೇಲಣ ಹತೋಟಿ.

ವಿ॥ ಎನ್. ಗುರುಲಿಂಗಪ್ಪನವರು,
,, ಕೆ. ಬಸವಿಂಗೈಯ್ಯನವರು,
ಹೊನ್ನಾಳಿ ತಾಲ್ಲೂಕು, ಮತ್ತು
,, ಸೈ. ಕೆ. ವಿರೂಪಯ್ಯನವರು,
ನ್ಯಾಮತಿ ಮುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಡಿಸ್ಟ್ರಿಕ್ಟುಗಳಲ್ಲಿ ಫಾರೆಸ್ಟ್ ಸಂಬಂಧವಾದ ಅಡಳಿತಗಳ ಮೇಲೆ ಹತೋಟಿಯನ್ನು ಡೆಪ್ಯುಟಿ ಕಮಿಷನರವರಿಗೆ ತಪ್ಪಿಸಿ ಬಿಟ್ಟು ಇರುವುದರಿಂದ ರೈತಾಪಿ ಜನರಿಗೆ ಬಹು ತೊಂದರೆಯಾಗಿದೆ. ಆದ್ದರಿಂದ ಡಿಸ್ಟ್ರಿಕ್ಟುಗಳಲ್ಲಿನ ಫಾರೆಸ್ಟ್ ಸಂಬಂಧವಾದ ಅಡಳಿತಗಳನ್ನು ಡೆಪ್ಯುಟಿ ಕಮಿಷನರಿಗೆ ವಹಿಸುತ್ತಿದ್ದ ಪೂರ್ವ ಪದ್ಧತಿಯನ್ನು ಸರ್ಕಾರದವರು ಜಯವಿಟ್ಟು ಪುನಃ ಜಾರಿಗೆ ತರಬೇಕು.

ವಿಷಯಸಂಖ್ಯೆ 50.

ಮನ್ನಾ ಜಂಗಲಿಗಳಿಂದ ಮರವನ್ನು ವ್ಯವಸಾಯದ ಮುಟ್ಟುವಗೈರೆಗಳಿಗಾಗಿ ಕೊಡುವುದು.

ವಿ॥ ಎಲ್. ಗುಮಲಿಂಗಪ್ಪನವರು,
,, ಕೆ. ಬಸಲಿಂಗಯ್ಯನವರು,
ಹೊನ್ನಾಳಿ ತಾಲ್ಲೂಕು ಮತ್ತು
,, ವಿರೂಪಯ್ಯನವರು,
ನ್ಯಾಮತಿ ಮ್ಯುನಿಸಿಪಾಲಿಟಿ.

ಆರ್ಜಿಯ ಸಾರಾಂಶ.—ವ್ಯವಸಾಯದ ಮುಟ್ಟುಗಳಿಗೆ ಉಪಯೋಗಿಸುವುದಕ್ಕೆ ಲಾಯಖಾದ ಮರವು ಡಿಸ್ಟ್ರಿಕ್ಟು ಜಂಗಲುಗಳಲ್ಲಿ ಸಿಕ್ಕದೆ ಇರುವುದರಿಂದ ಇದಕ್ಕಾಗಿ ಮನ್ನಾ ಜಂಗಲಿಗಳಿಂದ ಮರವನ್ನು ರೈತರು ತೆಗೆದುಕೊಳ್ಳುವುದಕ್ಕೆ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥನೆ.

ವಿಷಯಸಂಖ್ಯೆ 51.

ಮಲೆನಾಡಿನಲ್ಲಿ ಮನ್ನಾ ಜಂಗಲಿಗಳ ಸರಹದ್ದುಗಳನ್ನು ವಾಸದ ಮನೆಗಳಿಗೆ ದೂರವಾಗಿರುವಂತೆ ಏರ್ಪಡಿಸುವುದು.

ವಿ॥ ಹೊಸಕೊಪ್ಪ ಕೃಷ್ಣರಾಯರು,
ಕೊಪ್ಪ ತಾಲ್ಲೂಕು ಮತ್ತು
,, ಎಚ್. ಎಸ್. ಗಣೇಶರಾಯರು,
ಮಲೆನಾಡು ಜಮೀನುದಾರರ ಸಂಘ,
ಹೊಸಕೊಪ್ಪ.

ಆರ್ಜಿಯ ಸಾರಾಂಶ.—ಮಲೆನಾಡಿನಲ್ಲಿ ಮನ್ನಾ ಜಂಗಲಿಗಳ ಸರಹದ್ದುಗಳನ್ನು ವಾಸದ ಮನೆಗಳಿಗೆ ದೂರವಾಗಿರುವಂತೆ ಏರ್ಪಡಿಸಬೇಕೆಂದು ಪ್ರಾರ್ಥಿಸುತ್ತೇವೆ. ಏಕೆಂದರೆ, ಅವುಗಳು ಸಮೀಪದಲ್ಲಿರುವುದರಿಂದ ರೈತರು ಬಾಗಾಯಿತು ವ್ಯವಸಾಯ ಮಾಡುವುದಕ್ಕೆ ಅನೇಕ ತೊಂದರೆಗಳುಂಟಾಗುತ್ತವೆ.

ವಿಷಯಸಂಖ್ಯೆ 52.

ಫಾರೆಸ್ಟ್ ಇಲಾಖೆಯವರು ಮರಗಳನ್ನು ಸಾಗಿಸುವದಕ್ಕೆ ಉಪಯೋಗಿಸುತ್ತಿರುವ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕೆ ಸಾಕಾಷ್ಟು ಹಣವನ್ನು ಹಂಚಿಕೆಮಾಡಿಡುವುದು.

ವಿ॥ ದೊರೆಸ್ವಾಮ್ಯಯ್ಯಂಗಾರ್ಯರು,
ಚಾಮರಾಜನಗರದ ತಾಲ್ಲೂಕು.

ಅರಿಕೆಯ ಸಾರಾಂಶ.—ಫಾರೆಸ್ಟ್ ಇಲಾಖೆಯವರು ಭಾರೀ ನಾಟುಗಳನ್ನು ಸಾಗಿಸುವುದರಿಂದ ರಸ್ತೆಗಳ ಸ್ಥಿತಿಯು ಬಹು ಮಟ್ಟಿಗೆ ಕೆಟ್ಟುಹೋಗುತ್ತಿದೆ. ಆದ್ದರಿಂದ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕೆ ಸಾಕಾದಷ್ಟು ಹಣವನ್ನು ಹಂಚಿಕೆ ಮಾಡಿ ಅದರ ಪೈಕಿ ಅರ್ಧ ಹಿಸ್ಸೆಯನ್ನು ಫಾರೆಸ್ಟ್ ಇಲಾಖೆಯವರಿಂದ ವಸೂಲ್ಮಾಡಿಕೊಳ್ಳಬೇಕೆಂದು ಪ್ರಾರ್ಥನೆ.

ವಿಷಯಸಂಖ್ಯೆ 53.

ಮನ್ನಾ ಜಂಗಲಿಗಳಿಂದ ಸೌದೆಯನ್ನು ಮುಫತ್ತಾಗಿ ರೈತರು ತೆಗೆಕೊಂಡು ಹೋಗುವುದಕ್ಕೆ ಅಪ್ಪಣೆಯನ್ನು ಕೊಡುವುದು.

ವಿ॥ ಷಣ್ಮುಖಪ್ಪನವರು,
ಹೊಳಲ್ಕೆರೆ ತಾಲ್ಲೂಕು.

ಅರಿಕೆಯ ಸಾರಾಂಶ.—ರೈತರು ವಾಸ್ತವವಾಗಿ ತಮ್ಮ ಗೃಹಕೃತ್ಯಕ್ಕೆ ಬೇಕಾಗುವಷ್ಟು ಕಟ್ಟಿಗೆಯನ್ನು ಮುಫತ್ತಾಗಿ ರಿಸ್ಟ್ರಿಕ್ಟ್ ಜಂಗಲಿಗಳಿಂದ ತೆಗೆದುಕೊಂಡು ಹೋಗಬಹುದೆಂದು ಹಾಲೀ ಇರುವ ರೂಲ್ಸಿನಲ್ಲಿ ವಿಧಾಯಕವಾಗಿದೆ. ಈಚಿಗೆ ರಿಸ್ಟ್ರಿಕ್ಟ್ ಜಂಗಲಿಗಳನ್ನು ಹುಲ್ಲು ಬೆಳೆಸುವ್ರದಕ್ಕೆ ಇಟ್ಟುಕೊಂಡಿರುವ್ರದರಿಂದ, ರೈತರಿಗೆ ಬೇಕಾದಷ್ಟು ಕಟ್ಟಿಗೆಯು ಅವುಗಳಲ್ಲಿ ಸಿಕ್ಕುವುದು ಕಷ್ಟವಾಗಿದೆ. ಆದ್ದರಿಂದ ರೈತರು ಪೂರ್ವದಲ್ಲಿ ರಿಸ್ಟ್ರಿಕ್ಟ್ ಜಂಗಲಿಗಳಾಗಿದ್ದ ಮನ್ನಾಜಂಗಲಿಗಳಿಂದ ತಮಗೆ ಬೇಕಾದ ಕಟ್ಟಿಗೆಯನ್ನು ಮುಫತ್ತಾಗಿ ತೆಗೆದುಕೊಂಡು ಹೋಗಬಹುದೆಂದು ಅಪ್ಪಣೆ ಕೊಡಿಸಬೇಕು.

ವಿಷಯಸಂಖ್ಯೆ 54.

ಒಣಗಿಹೋದ ಬಗನೀ ಮರಗಳನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸಗಳಿಗೆ ಉಪಯೋಗಿಸುವುದಕ್ಕಾಗಿ ಮುಫತ್ತಾಗಿ ಕೊಡುವದು.

ಮಿ॥ ನಾಡಿಗ ಲಕ್ಷ್ಮಣರಾಯರು,
,, ನಾಡಿಗ ಭಾಸ್ಕರರಾಯರು,
,, ಶಿವಾಜಿ ಒಡೆಯರು,
ಸೂರಬ ತಾಲ್ಲೂಕು.

ಅರಿಕೆಯ ಸಾರಾಂಶ.—ಸರ್ಕಾರಿ ಮತ್ತು ಹಿಡುವಳಿ ಕಾನುಗಳಲ್ಲಿರತಕ್ಕ ಒಣಗಿಹೋದ ಬಗನೀ ಮರಗಳನ್ನು ರೈತರು ವ್ಯವಸಾಯದ ಕೆಲಸಕ್ಕೆ ಉಪಯೋಗಿಸುವುದಕ್ಕಾಗಿ ಮುಫತ್ತಾಗಿ ಕೊಡಿಸಬೇಕೆಂದು ಪ್ರಾರ್ಥನೆ.

ವಿಷಯ ಸಂಖ್ಯೆ 55.

ಗ್ರಾಮಗಳ ಅಮಲಾಯಿ ಏಲೆವಾರಿ.

ಮಿ॥ ಬದ್ರಪ್ಪನವರು, ಮತ್ತು
,, ಕೆ. ರಾಮಣ್ಣನವರು,
ಶಿಡ್ಲಘಟ್ಟದ ತಾಲ್ಲೂಕು. ಮತ್ತು
,, ವೆಂಕಟರಾಯಪ್ಪನವರು,
ಕೋಲಾರದ ಡಿ॥ ಬೋ॥

ಅರಿಕೆಯ ಸಾರಾಂಶ.—ಪೂರ್ವದಲ್ಲಿ ಒಂದು ಗ್ರಾಮದ ಅಮರಾಯಿಯನ್ನು ಅದೇ ಗ್ರಾಮಸ್ಥರಿಗೆ 5 ವರ್ಷಗಳ ಫಸಲಿನ ಅಂದಾಜಾ ಮೇಲೆ ಮಾರುತ್ತಿದ್ದರು. ಆ ರೀತಿ ಮಾಡುತ್ತಿದ್ದದ್ದರಿಂದ ಅಮರಾಯಿ ಮರಗಳು ನಾಶವಾಗುತ್ತಿರಲಿಲ್ಲ. ಆದರೆ ಈಗ ಫಸಲು ಬಹಿರಂಗವಾದ ಹರಾಜಿನಲ್ಲಿ ಮಾರಲ್ಪಡುತ್ತಿ ಮತ್ತು ಖರೀದಿಗೆ ಪಡೆದವರು ಸಾಧಾರಣವಾಗಿ ಬೇರೆ ಗ್ರಾಮಸ್ಥರಾಗಿರುತ್ತಾರೆ. ಅವರು ಅನೇಕ ಸಂದರ್ಭಗಳಲ್ಲಿ ಮರಗಳಿಗೆ ಬಹಳ ಅಪಾಯವನ್ನುಂಟುಮಾಡುತ್ತಾರೆ. ಆದ್ದರಿಂದ ಹಳೇ ಪದ್ಧತಿಯನ್ನು ಜಾರಿಗೆ ತರಬೇಕು.

ವಿಷಯಸಂಖ್ಯೆ 56

ಹೊಂಗೆ ಎಲಗಳ ಏಲೆವಾರಿ.

ಮಿ॥ (a) ಬದ್ರಪ್ಪನವರು, ಮತ್ತು
,, ಕೆ. ರಾಮಣ್ಣನವರು,
ಶಿಡ್ಲಘಟ್ಟ ತಾಲ್ಲೂಕು.
,, ಡಿ. ವೆಂಕಟರಾಯಪ್ಪನವರು,
ಕೋಲಾರದ ಡಿ॥ ಬೋ॥

ಅರಿಕೆಯ ಸಾರಾಂಶ.—(a) ಈಚಿಗೆ ಕೆಲವು ವರ್ಷಗಳಿಂದ ಅನೇಕ ಹಳ್ಳಿಗಳಲ್ಲಿ ಹೊಂಗೆ ಎಲೆಗಳನ್ನು ಮತ್ತು ಬೀಜಗಳನ್ನು ಹರಾಜಿನಲ್ಲಿ ಕ್ರಯಕ್ಕೆ ಪಡೆದುಕೊಂಡವು ಆ ಹೊಂಗೇ ಮರಗಳನ್ನು ನಾಶಮಾಡಿದ್ದಾರೆ. ರೈತಾಪಿಜನರ ಕ್ಷೇಮಕ್ಕೋಸ್ಕರಲೂ ಮತ್ತು ಸರ್ಕಾರಕ್ಕೆ ಆದಾಯವುಂಟಾಗುವುದಕ್ಕೂ ಸಹ ಹೊಂಗೆ ಮರಗಳನ್ನು ತರೀ ಜವಿಾನುಗಳ ಹಿಡುವಳಿದಾರರಾದ ರೈತರಿಗೆ ಕೇಕಡಾ ಒಂದಕ್ಕೆ 1 ರೂಪಾಯಿ 12 ಆಣೆಯಂತೆ ಗೊತ್ತುಮಾಡಿ ಗುತ್ತಿಗೆಗೆ ಕೊಡಬೇಕು.

ವಿ॥ (b) ಜಿ ರಾಮರೆಡ್ಡಿಯವರು,
ಬೌರಿಂಗಪೇಟೆ ತಾಲ್ಲೂಕು.
,, (c) ತಾಟೆರೆಡ್ಡಿಯವರು,
ಮತ್ತು
,, ಚಿಕ್ಕರೆಡ್ಡಿಯವರು,
ಚಿಂತಾಮಣಿ ತಾಲ್ಲೂಕು.

(b) ಈಗ ಹೊಂಗೇ ಎಲೆಗಳು ಹರಾಜಿನಲ್ಲಿ ಕೂಡಸುವಾಲುದಾರರಿಗೆ ವಿಕ್ರಯಿಸಲ್ಪಡುತ್ತೆ. ಇದರಿಂದ ಹಳ್ಳಿಗಳಲ್ಲಿನ ಬಡ ರೈತರಿಗೆ ಕಷ್ಟವುಂಟಾಗುತ್ತೆ. ಹೊಂಗೇಮರಗಳು ಯಾವ ಹಳ್ಳಿಗಳಲ್ಲಿವೆಯೊ ಆ ಹಳ್ಳಿಗಳ ರೈತಾಪಿ ಜನರಿಗೆ ಹೊಂಗೆ ಎಲೆಗಳನ್ನು ಗೊಬ್ಬರಕ್ಕಾಗಿ ಮಾರುತ್ತಿದ್ದ ಹಿಂದಿನ ಪದ್ಧತಿಯನ್ನು ಪುನಃ ಜಾರಿಗೆ ತರಬೇಕು.

(c) ಹಳ್ಳಿಗಳ ಅಮೆರಾಯಿ ಜೊತೆಯಲ್ಲಿ ಹೊಂಗೆ ಎಲೆಗಳನ್ನು ಮಾರುವ ಈಗಿನ ಪದ್ಧತಿಯಿಂದ ರೈತರಿಗೆ ತೊಂದರೆಯಾಗಿದೆ ಹೆಚ್ಚಾಗಿ ಅನುಕೂಲವಾಗಿಯೂ ನ್ಯಾಯವಾಗಿಯೂ ಇದ್ದ ಹಳೇ ಹಂಚಿಕೆಪಟ್ಟಿಯ ಪದ್ಧತಿಯನ್ನು ಪುನಃ ಜಾರಿಗೆ ತರಬೇಕು.

ವಿಷಯಸಂಖ್ಯೆ 57.

ಮನ್ನಾ ಜಂಗಲಿಗಳಲ್ಲಿ ದನಕರುಗಳನ್ನು ಮೇಯಿಸುವ ಕಾಲಾವಧಿಯನ್ನು ಹೆಚ್ಚಿಸುವುದು.

ವಿ॥ (a) ಆಂಜನೇಯ ಸೆಟ್ಟರು,
,, ಬಿ. ವಾಸುದೇವರಾಯರು,
ಪಾವಗಡ ತಾಲ್ಲೂಕು.
,, (b) ವೆಂಕಟಪ್ಪಗೌಡರು,
ಮತ್ತು ನಾರಾಯಣಗೌಡರು,
ಕಾನಕಾನಹಳ್ಳಿ ತಾಲ್ಲೂಕು.

ಅರಿಕೆಯ ಸಾರಾಂಶ.—(a) ಮನ್ನಾಜಂಗಲಿಗಳಲ್ಲಿ ದನಕರುಗಳನ್ನು ಮೇಯಿಸುವ ಕಾಲಾವಧಿಯು ಆರು ತಿಂಗಳವರೆಗಿದೆ. ಇದು ಸಾಲದು. ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುವಂತೆ ಈ ಅವಧಿಯನ್ನು ಒಂದು ವರ್ಷದ ಪರ್ಯಂತ ಹೆಚ್ಚಿಸಬೇಕು.

(b) ಮನ್ನಾಜಂಗಲಿಗಳಲ್ಲಿ ವರ್ಷವೆಲ್ಲಾ ದನಕರುಗಳನ್ನು ಮೇಯಿಸುವುದಕ್ಕೆ ಅವಕಾಶವನ್ನು ಕೊಡಬೇಕು ಮತ್ತು ಆರು ತಿಂಗಳವರೆಗೆ ವಸೂಲ್ ಮಾಡುವುದಕ್ಕೆ ಬದಲಾಗಿ ಬ್ರಿಟಿಷ್ ಆಧಿಪತ್ಯದಲ್ಲಿರುವಂತೆ 12 ತಿಂಗಳು ಕಾಲದ ವರಿಗೆ ರುಸುಮನ್ನು ವಸೂಲ್ಮಾಡಬೇಕು.

ವಿಷಯ ಸಂಖ್ಯೆ 58.

(a) ಮೆನ್ನಾ ಜಂಗಲಿಗಳಲ್ಲಿ ದನಕರುಗಳನ್ನು ಮೇಯಿಸುವ ಬಗ್ಗೆ ಜಾರಿಯಲ್ಲಿರುವ ರುಸುಂಗಳ ದರಗಳನ್ನು ಕಡಿಮೆಮಾಡುವುದು.

(b) ಮೆನ್ನಾ ಜಂಗಲಿಗಳಲ್ಲಿ ದನಕರುಗಳನ್ನು ಮೇಯಿಸುವ ಬಗ್ಗೆ ಜಾರಿಯಲ್ಲಿರುವ ರುಸುಂಗಳನ್ನು ವಜಾ ಮಾಡುವುದು.

(a) ಮಿ|| ಎಸ್. ಗುರುಲಿಂಗಪ್ಪನವರು.
,, ಕೆ. ಬಸಲಿಂಗೈಯ್ಯನವರು, ಹೊನ್ನಾಳಿ ತಾಲ್ಲೂಕು.
,, ವಿರೂಪಯ್ಯನವರು, ನ್ಯಾಯಾತಿ ಮುನ್ಸೀಸಿಬಿವಾಲಿಟ್.

(b) ,, ಎ. ವೆಂಕಟರಾಮಯ್ಯನವರು, ಮತ್ತು
,, ಪಟೇಲ್ ಶಂಕರಪ್ಪನವರು, ತರೀಕೆರೆ ತಾಲ್ಲೂಕು.

D. G. S.

ಅರಿಕೆಯ ಸಾರಾಂಶ.—(a) ಮೆನ್ನಾ ಜಂಗಲಿಗಳಲ್ಲಿರುವ ಹುಲ್ಲನ್ನು ಸರ್ಕಾರವರು ಉಪಯೋಗಿಸುವದಿಲ್ಲ ಆದರೆ ಅದು ಬೇಸಿಗೆ ಕಾಲದಲ್ಲಿ ಬೆಂಕಿಯಿಂದ ನಾಶವಾಗುತ್ತಿದೆ. ಈ ಜಂಗಲಿಗಳಿಗೆ ದನಕರುಗಳನ್ನು ಮುಖತ್ತಾಗಿ ಮೆಳಗಾಲದಲ್ಲಿ ಮೇಯಿಸುವದಕ್ಕೆ ಬಿಟ್ಟರೆ ಕಾಡ್ಗಿಚ್ಚುಗಳುಂಟಾಗುವ ಸಂಭವವೂ ಮತ್ತು ತನ್ಮೂಲಕ ಸಂಭವಿಸುವ ಉಪಯೋಗಕರವಾದ ಮರಗಳ ನಾಶದಿಂದುಂಟಾಗುವ ನಷ್ಟವೂ ಸಹ ಕಡಿಮೆಯಾಗುತ್ತೆ. ಆದ್ದರಿಂದ ರೈತರು ತಮ್ಮ ದನಕರುಗಳನ್ನು ಮುಖತ್ತಾಗಿ ಮೇಯಿಸುವದಕ್ಕೆ ಅವಕಾಶ ಕೊಡಬೇಕು ಅಥವಾ ಅವಶ್ಯ ಬಿದ್ದರೆ ಪ್ರತಿ ರಾಸಿಗೂ ಬಂದಾಣಿ ಮೇರೆ ರುಸುಮೆನ್ನು ವಸೂಲ್ಮಾಡಬಹುದು. ಹಾಲಿ ಮೇಯಿಸುವ ಬಗ್ಗೆ ಹಾಕಿರುವ ರುಸುಂಗಳ ದರಗಳು ಬಹಳ ಮಜಬೂರಿಯಾಗಿರುವುದರಿಂದ ಅವುಗಳನ್ನು ಕೊಡುವದು ರೈತರಿಗೆ ತುಂಬಾ ಕಷ್ಟವಾಗುತ್ತೆ.

(b) ಮೆನ್ನಾ ಜಂಗಲಿಗಳಲ್ಲಿ ದನಕರುಗಳನ್ನು ಮೇಯಿಸುವ ಬಗ್ಗೆ ರುಸುಮೆನ್ನು ವಸೂಲ್ಮಾಡುವ ಪದ್ಧತಿಯನ್ನು ವಜಾ ಮಾಡಬೇಕು.

ವಿಷಯ ಸಂಖ್ಯೆ 59.

ಇದ್ದಲಿನ ಮೇಲೆ ಹಾಕಿರುವ ರುಸುಮನ್ನು ವಜಾ ಮಾಡುವುದು.

ಮಿ|| ಕೆ. ಬಸಲಿಂಗಯ್ಯನವರು,
,, ಎನ್. ಗುರುಲಿಂಗಪ್ಪನವರು.
ಹೊನ್ನಾಳಿ ತಾಲ್ಲೂಕು.
ಮತ್ತು
,, ವಿರೂಪಯ್ಯನವರು,
ನ್ಯಾಮತಿ ಮುನ್ಸೀಸಿಪಾಲಿಟಿ.

ಅರಿಕೆಯ ಸಾರಾಂಶ.—ಇದ್ದಲು ಮಾಡುವದನ್ನು ಪ್ರೋತ್ಸಾಹಿಸುವದಕ್ಕಾಗಿ ಪೂರ್ವದಲ್ಲಿ ಬಣಗಿ ಹೋದ ಬೊಂಬುಗಳಿಂದ ತಯಾರ್ಮಾಡುತ್ತಿದ್ದ ಇದ್ದಲಿನ ಮೇಲೆ ರುಸುಮನ್ನು ಹಾಕಿರಲಿಲ್ಲ. ಇದ್ದಲಿನ ಬಂದೊಂದು ಭರ್ತಿ ಗಾಡಿಗೂ 2-8-0 ರೂಪಾಯಿಗಳ ದರದ ಮೇರೆ ಹಾಲಿ ಜಾರಿಯಲ್ಲಿರುವ ರುಸುಮನ್ನು ತೆರುವದು ಬಹಳ ಕಷ್ಟವಾಗಿದೆ. ರುಸುಮಿನ ದರವು ಜುಬಾರಿಯಾಗಿರುವದರಿಂದ ಜನಗಳು ಇದ್ದಲಿನ ತಯಾರಿಯನ್ನು ಬಿಡಬೇಕಾಗಿ ಬಂದಿದೆ. ಆದ್ದರಿಂದ ಈ ಕಸಬನ್ನು ಪ್ರೋತ್ಸಾಹಿಸುವದಕ್ಕೆ ರುಸುಮನ್ನು ವಜಾ ಮಾಡಿ ಈ ಕಸಬಿನಿಂದ ಜೀವನ ಮಾಡುತ್ತಿರುವ ಕೂಲಿ ಜನಗಳಿಗೆ ಸಹಾಯವನ್ನುಂಟು ಮಾಡಬೇಕು.

ವಿಷಯಸಂಖ್ಯೆ 60.

ಶೀಬು ಮುಂತಾದ್ದನ್ನು ಸಾಗಿಸುವದಕ್ಕೆ ಮೂರು ಲೈಸೆನ್ಸುಗಳನ್ನು ಕೊಡುವ ಅಧಿಕಾರವನ್ನು ಗ್ರಾಮದ ಪಟೇಲರಿಗೆ ಅಥವಾ ಠೇಕದಾರರಿಗೆ ವಹಿಸುವದು.

ಮಿ|| ಏ. ವೆಂಕಟರಾಮಯ್ಯನವರು.
ಮತ್ತು
,, ಪಟೇಲ ಶಂಕರಪ್ಪನವರು,
ತರೀಕೆರೆ ತಾಲ್ಲೂಕು.

ಅರಿಕೆಯ ಸಾರಾಂಶ.—ಶೀಬು, ಸೌದೆ ಮತ್ತು ವ್ಯವಸಾಯದ ಮುಟ್ಟುಗಳಿಗೆ ಬೇಕಾದ ಕಾಡುಮರ ಇವುಗಳನ್ನು ಸಾಗಿಸುವುದಕ್ಕೆ ಅಪ್ಪಣೆ ಚೀಟಿಗಳನ್ನು ಕೊಡುವ ಅಧಿಕಾರವು ಈಗ ಫಾರೆಸ್ಟ್ ಇಲಾಖೆಯ ಆಫೀಸರಿಗೆ ಮಾತ್ರ ಉಂಟು. ಇದರಿಂದ ರೈತಾಪಿ ಜನರಿಗೆ ಬಹಳ ಅನಾನುಕೂಲವಾಗಿದೆ. ಆದ್ದರಿಂದ ಗ್ರಾಮದ ಪಟೇಲರಿಗಾಗಲೀ ಅಥವಾ ಠೇಕದಾರರಿಗಾಗಲೀ ಮೂಫೀ ಲೈಸೆನ್ಸುಗಳನ್ನು ಕೊಡುವ ಅಧಿಕಾರವನ್ನು ವಹಿಸಬೇಕು.

ವಿಷಯಸಂಖ್ಯೆ 61.

ಮಲೆನಾಡು ರೈತರ ಹಕ್ಕಿನ ವಿಷಯಕವಾದ ನಿಯಮಗಳಲ್ಲಿನ ರಿಯಾಯಿತಿಗಳನ್ನು ಟವನುಗಳಲ್ಲಿರುವ ಜನಗಳಿಗೂ ಅನ್ವಯಿಸುವಂತೆ ಮಾಡುವುದು.

ಎ॥ ಎ. ಅನಂತಯ್ಯನವರು,
,, ಸಿ. ಸುಬ್ಬರಾಯರು,
ಮತ್ತು
,, ಪಿ. ವೆಂಕಪ್ಪಯ್ಯನವರು,
ಶಿವಮೊಗ್ಗಾ ತಾಲ್ಲೂಕು.

ಅರಿಕೆಯ ಸಾರಾಂಶ —ಮಲೆನಾಡು ರೈತರ ಹಕ್ಕಿನ ವಿಷಯಕವಾದ ನಿಯಮಗಳಲ್ಲಿರುವ ರಿಯಾಯಿತಿಗಳನ್ನು ರೈತರಿಗೆ ತೋರಿಸುತ್ತಿರುವಂತೆಯೇ ಮಲೆನಾಡು ಡಿಸ್ಟ್ರಿಕ್ಟ್ಗಳಿಗೆ ಸೇರಿದ ಟವನುಗಳಲ್ಲಿ ವಾಸಮಾಡುವ ಖಾತೇದಾರರಿಗೂ ಅನ್ವಯಿಸುವಂತೆ ಮಾಡಬೇಕು.

ರೆವಿನ್ಯೂ.—(ಎಕ್ಸ್ಸೈಜ್).

(ವಿಷಯಸಂಖ್ಯೆ 62ರಿಂದ 63ರ ವರೆಗೆ)

ವಿಷಯಸಂಖ್ಯೆ 62.

ಸಂಸ್ಥಾನಾವಳಿ ಮದ್ಯಪಾನವನ್ನು ಕಡಿಮೆ ಮಾಡುವುದು.

ವಿ॥ ಜೆ. ಆರ್. ಐಸಕ್ಕರವರು,
ಹಿಂದೂ ದೇಶೀಯ ಕ್ರಿಸ್ತರ
ಸಂಘ, ಬೆಂಗಳೂರು.

ಅರಿಕೆಯ ಸಾರಾಂಶ.—ಸಂಸ್ಥಾನದಲ್ಲಿ ಮದ್ಯಪಾನವನ್ನು ಕಮ್ಮಿ ಮಾಡುವುದಕ್ಕೆ, ಅದನ್ನು ನಿಷೇಧಿಸುವ ಅಧಿಕಾರವನ್ನು ಸ್ಥಳೀಕರ ಇಚ್ಛಾನುಸಾರ ಕೊಡುವುದೇ ಮುಂತಾದ ಏರ್ಪಾಡುಗಳನ್ನು ಮಾಡಬೇಕು.

ವಿಷಯಸಂಖ್ಯೆ 63.

ಕೇಂದೀ ಕಂಟ್ರಾಕ್ಟ್ದಾರನು ಕೇಂದೀ ಮರಗಳಿಗೆ ದರಖಾಸ್ತು ಕೊಡುವವೇಳೆ ಆತನಿಂದ ಮರದ ತೆರಿಗೆಯನ್ನು ಪೂರ್ತಿ ವಸೂಲ್ಮಾಡುವುದು.

ವಿ॥ ಎಚ್. ಎಸ್. ಚಿಕ್ಕಣ್ಣಗೌಡರು,
ಬೇಲೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಕೇಂದಿ ಇಳಿಸುವ ಬಗ್ಗೆ ಕೇಂದೀ ಕಂಟ್ರಾಕ್ಟ್ದಾರನಿಗೆ ಕೊಡುವ ಪ್ರತಿಯೊಂದು ಕೇಂದೀ ಗಿಡಕ್ಕೂ ಸದರೀ ಗಿಡವಿರುವ ಜಮೀನಿನ ಮೂಲೀಕನಿಗೆ ನಾಲ್ಕು ಆಣೆಯಂತೆ ಪ್ರತಿಫಲವು ಸಲ್ಲುತ್ತದೆ. ಕಂಟ್ರಾಕ್ಟ್ದಾರನು ಮರದ ತೆರಿಗೆಯ ಎಷ್ಟನೇ ಕಂತನ್ನು ಕೊಡುವುದಕ್ಕೆ ತಪ್ಪಿದರೆ ಅದಕ್ಕೆ ಖಾತೇದಾರನೇ ಗುರಿಯಾಗುತ್ತಾನೆ. ಆದರೆ ಪೂರಾ ಮೊಬಲಗು ಪಾವತಿಯಾಗಿದೆಯೋ ಇಲ್ಲವೋ ಎಂಬ ವಿಷಯವು ಖಾತೇದಾರನಿಗೆ ತಿಳಿಯಲು ಸಾಧ್ಯವಿಲ್ಲ. ಕಂಟ್ರಾಕ್ಟ್ದಾರನು ಕೇಂದೀ ಮರಗಳಿಗೆ ದರಖಾಸ್ತು ಕೊಡುವ ವೇಳೆ ಆತನಿಂದ ಪೂರಾ ಮೊಬಲಗನ್ನು ವಸೂಲ್ಮಾಡಿಕೊಳ್ಳಬೇಕು ಹಾಗಿಲ್ಲದೆ ಹೋದರೆ ತೆರಿಗೆಯ ಎಷ್ಟನೇ ಕಂತಿಗೆ ಖಾತೇದಾರರನ್ನು ಜವಾಬ್ದಾರನನ್ನಾಗಿ ಮಾಡಕೂಡದು. ಕೇಂದಿ ಮರದ ತೆರಿಗೆಯನ್ನು ಹೆಚ್ಚಿಸಿರುವುದರಿಂದ ಖಾತೇದಾರನಿಗೆ ಕೊಡುವ ಪ್ರತಿಫಲವನ್ನೂ ಜಾಸ್ತಿಮಾಡಬೇಕು.

ರೆವಿನ್ಯೂ—(ವರಮಾನದ ತೆರಿಗೆ).

(ವಿಷಯಸಂಖ್ಯೆ 64ರಿಂದ 67ರ ವರೆಗೆ.)

ವಿಷಯಸಂಖ್ಯೆ 64.

ಜಾಯಿಂಟ್‌ಸ್ಟಾಕ್ ಕಂಪೆನಿಗಳಿಂದ ವಸೂಲ್ಮಾಡುವ ವರಮಾನದ ತೆರಿಗೆಯ ದರವನ್ನು ಕಡಿಮೆಮಾಡುವುದು.

ವಿ॥ ವಿ. ಕೆ. ಸಂಜೀವಯ್ಯನವರು,
ಗುಂಡ್ಲುಪೇಟೆ ಮ್ಯುನಿಸಿಪಾಲಿಟಿ;
,, ಕೆ. ಎಸ್. ಚೆನ್ನಬಸಪ್ಪನವರು
,, ಜಿ. ವೆಂಕಟೇಶಯ್ಯನವರು,
ಗುಂಡ್ಲುಪೇಟೆ ತಾಲ್ಲೂಕು.

ಅರಿಕೆಯ ಸಾರಾಂಶ.—ಖಾಸಗೀ ಜನಗಳಿಂದ ರೂಪಾಯಿಗೆ ಮೂರು ಕಾಸಿನಂತೆ ವರಮಾನದ ತೆರಿಗೆಯು ವಸೂಲಾಗುತ್ತಿದೆ. ಆದರೆ ಜಾಯಿಂಟ್‌ಸ್ಟಾಕ್ ಕಂಪೆನಿಗಳ ವರಮಾನದ ಮೇಲೆ ರೂಪಾಯಿಗೆ ಒಂದಾಣೆಯಂತೆ ಈ ತೆರಿಗೆಯು ಬಿದ್ದಿದೆ. ಈ ದರವು ತುಂಬಾ ದುಬಾರಿಯಾದ್ದರಿಂದ ಕಡಿಮೆಯಾಗಬೇಕು.

ವಿಷಯಸಂಖ್ಯೆ 65.

ಇಕಮಿಟ್ಯಾಕ್ಸ್ (ವರಮಾನದ ತೆರಿಗೆಯು) ಕಲೆಕ್ಟರುಗಳು ಮಾಡಿದ ಹುಕುಮುಗಳ ಮೇಲೆ ಅಪ್ಪೀಲು ಮಾಡುವ ಅವಧಿಯನ್ನು ಹೆಚ್ಚಿಸುವುದು.

ಮಿ॥ ಸೂರಪ್ಪನವರು,
,, ನರಸಿಂಹ್ಯೆಯ್ಯನವರು,
ಸೀರಾ ತಾಲ್ಲೂಕು;
ಮತ್ತು
,, ಎಸ್. ನಾರಣಪ್ಪನವರು,
ಸೀರಾ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಇಕಮಿಟ್ಯಾಕ್ಸ್ ಕಲೆಕ್ಟರುಗಳು ಮಾಡಿದ ಹುಕುಮುಗಳ ಮೇಲೆ ತರುವ ಅಪ್ಪೀಲಿಗೆ ಗೊತ್ತು ಮಾಡಿರುವ ಅವಧಿಯನ್ನು ಮೂರು ತಿಂಗಳವರಿಗೆ ಹೆಚ್ಚಿಸಬೇಕು.

ವಿಷಯಸಂಖ್ಯೆ 66.

ಕಸಬುದಾರಿ ತೆರಿಗೆಯನ್ನು ಕೊಡುವವರನ್ನು ವರಮಾನದ ತೆರಿಗೆಯಿಂದ ಬಿಡುಗಡೆ ಮಾಡುವುದು.

ಮಿ॥ ಎಚ್. ಪಿ. ಗೋಪಾಲಯ್ಯನವರು,
ಹೊಳಲ್ಕೆರೆ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಮ್ಯುನಿಸಿಪಾಲಿಟಿಗಳಲ್ಲಿ ಕಸಬುದಾರಿ ತೆರಿಗೆಯು ಜತೆಗೆ ವರಮಾನದ ತೆರಿಗೆಯು ಪಾವತಿಯಾಗುವುದು ತೆರಿಗೆಯನ್ನು ಎರಡು ದಫಾ ಕೊಟ್ಟಹಾಗೆ ಆಗುವುದರಿಂದಲೂ ಮತ್ತು ಹೀಗೆ ತೆರುವುದು ಕಷ್ಟತರವಾಗಿರುವುದರಿಂದಲೂ ಕಸುಬುದಾರಿ ತೆರಿಗೆಯನ್ನು ಕೊಡತಕ್ಕವರನ್ನು ವರಮಾನದ ತೆರಿಗೆಯಿಂದ ಬಿಡುಗಡೆ ಮಾಡಬೇಕು.

ವಿಷಯಸಂಖ್ಯೆ 67.

(a) ಪ್ರತಿಯೊಬ್ಬನ ಜಮಾಖರ್ಚು ಲೆಕ್ಕ ನೋಡಿ ಆತನು ಕೊಡಬೇಕಾದ ವರಮಾನದ ತೆರಿಗೆಯನ್ನು ನಿರ್ಧರಿಸುವದಕ್ಕೆ ಒಂದು ಕಮಿಟಿಯನ್ನು ಏರ್ಪಡಿಸುವದು.

(b) ವರಮಾನದ ತೆರಿಗೆಯ ರೆಗ್ಯುಲೇಷನ್ನಿನ ಮೇರೆ ಜಮಾಖರ್ಚು ಲೆಕ್ಕದ ವಿಷಯದಲ್ಲಿ ಏರ್ಪಡಿಸಿರುವ ನಿಯಮಗಳ ನಿರ್ಬಂಧಗಳನ್ನು ಕಡಿಮೆ ಮಾಡುವದು.

(a) ಮಿ|| ಬಸವಣ್ಣಪ್ಪನವರು,
ದಾವಣಗೆರೆ ತಾಲ್ಲೂಕು;

(b) ,, ಸಿ. ನರಸಿಂಹ್ಯಯ್ಯನವರು,
ಹೆಗ್ಗಡದೇವನಕೋಟೆ ತಾಲ್ಲೂಕು;
ಮತ್ತು
,, ಎಚ್. ಕೃಷ್ಣಶಾಸ್ತ್ರಿಗಳು,
ಕೃಷ್ಣರಾಜಪೇಟೆ ತಾಲ್ಲೂಕು.

ಅರಿಕೆಯ ಸಾರಾಂಶ.—(a) ಸರ್ಕಾರೀ ನೌಕರರು ಜಮಾಖರ್ಚು ಲೆಕ್ಕಗಳನ್ನು ನೋಡಿ ವರಮಾನದ ತೆರಿಗೆಯನ್ನು ಹಾಕುವ ಈಗಿನ ಪದ್ಧತಿಯು ಜನರಿಗೆ ತುಂಬಾ ಅನಾನುಕೂಲವನ್ನುಂಟುಮಾಡುತ್ತಿದೆ. ಪ್ರತಿಯೊಂದು ಸ್ಥಳದ ಜಮಾಖರ್ಚು ಲೆಕ್ಕಾಚಾರಗಳನ್ನು ತನಿಖೆ ಮಾಡಲು ಪ್ರಮುಖರ ಕಮಿಟಿಯೊಂದನ್ನು ಏರ್ಪಡಿಸಬೇಕೆಂದೂ ಮತ್ತು ಅವರಿಂದ ನಿರ್ಧರಿಸಲ್ಪಟ್ಟ ತೆರಿಗೆಯನ್ನು ವಸೂಲ್ಮಾಡಬೇಕೆಂದೂ ಪ್ರಾರ್ಥಿಸಲಾಗಿದೆ.

(b) ವರಮಾನದ ತೆರಿಗೆಯ ರೆಗ್ಯುಲೇಷನ್ನಿನ ಮೇರೆ ಮುಖ್ಯವಾಗಿ ಜಮಾಖರ್ಚುಗಳ ವಿಷಯದಲ್ಲಿ ಆಗಿರುವ ನಿಯಮಗಳು ಬಹಳ ಕಠಿಣವಾಗಿವೆ. ಎಗ್ಜಿಕ್ಯುಟಿವ್ ಶಿಬ್ಬಂದಿಗಳು ಅವಲಂಬಿಸುವ ಕಾರ್ಯ ಮತ್ತು ಗಣನಾಕ್ರಮಗಳು ಬಹಳ ಜಾಗುಸ್ಪಿಕರವಾಗಿಯೂ ಮತ್ತು ಕೆಲವು ವೇಳೆ ನಿರಂಕುಶವಾಗಿಯೂ ಇರುತ್ತವೆ. ಅವುಗಳನ್ನು ಸರಿಪಡಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕು.

ರೆವಿನ್ಯೂ—(ರಿಜಿಸ್ಟ್ರೇಷ್ನ್).

(ವಿಷಯಸಂಖ್ಯೆ 68ರಿಂದ 74ರ ವರೆಗೆ).

ವಿಷಯಸಂಖ್ಯೆ 68.

ದಸ್ತೈಜುಗಳ ರಿಜಿಸ್ಟರ್ ಬಗ್ಗೆ ಸಬ್ ರಿಜಿಸ್ಟ್ರಾರುಗಳಿಗೆ ಬದಲಾಗಿ ಒಂದು ಕಮಿಟಿಯನ್ನು ನಿರ್ಮಿಸುವದು.

ಮಿ॥ ಟಿ. ಎಂ. ಓಂಕಾರಪ್ಪನವರು, ದಾವಣಗೆರೆ ತಾಲ್ಲೂಕು.

ಅರಿಕೆಯ ಸಾರಾಂಶ.—ಸಬ್ ರಿಜಿಸ್ಟ್ರಾರ್ರುಗಳ ಉದ್ಯೋಗಗಳನ್ನು ವಜಾ ಮಾಡಬೇಕು ಮತ್ತು ಅವರು ಈಗ ಮಾಡುತ್ತಿರುವ ಕೆಲಸವನ್ನು ಒಂದು ಕಮಿಟಿಯ ಮೂಲಕ ನಡಿಸುವುದಕ್ಕೆ ಏರ್ಪಾಡು ಮಾಡಬೇಕು. ಹೀಗೆ ಏರ್ಪಾಡು ಮಾಡುವುದರಿಂದ ರಿಜಿಸ್ಟ್ರೇಷ್ನ್ ಇಲಾಖೆಗೆ ಲಾಭಕರವಾಗುವುದಲ್ಲದೆ ಜನ ಸಾಮಾನ್ಯಕ್ಕೂ ಅನುಕೂಲವಾಗುತ್ತದೆ.

ವಿಷಯಸಂಖ್ಯೆ 69.

ಸಬ್ ರಿಜಿಸ್ಟ್ರಾ ಆಫೀಸುಗಳಲ್ಲಿ ಕೆಲಸ ಮಾಡತಕ್ಕ ಕಾಲವನ್ನು ಬದಲಾಯಿಸುವದು.

ಮಿ॥ ಅಬ್ದುಲ್ ನಬೀಸಾಹೇಬ ರವರು, ತುಮಕೂರು ಮ್ಯು॥

ಅರಿಕೆಯ ಸಾರಾಂಶ.—ಸಬ್ ರಿಜಿಸ್ಟ್ರಾ ಆಫೀಸುಗಳು ಕೆಲಸದ ಬಗ್ಗೆ ಹಾಲಿ ಬೆಳಿಗ್ಗೆ 11 ಘಂಟೆಯಿಂದ ಮಧ್ಯಾಹ್ನ 3-30 ಘಂಟೆಯವರೆಗೂ ತೆಗೆದಿರುವುವು. ರಿಜಿಸ್ಟರ್ ಮಾಡತಕ್ಕ ಬಗ್ಗೆ ಬೆಳಿಗ್ಗೆ 11-30 ಘಂಟೆ ಲಾಗಾಯಿತು ಸಾಯಂಕಾಲ 5 ಘಂಟೆವರೆವಿಗೆ ತರಲ್ಪಟ್ಟ ದಸ್ತೈವೇಜುಗಳನ್ನು ಅಂಗೀಕರಿಸುವಂತೆ ಹುಕುಂ ಕೊಡಬೇಕು.

ವಿಷಯಸಂಖ್ಯೆ 70.

ರಿಜಿಸ್ಟ್ರೇಷನ್ನಿನ ರುಸುಂಗಳನ್ನು ಹೆಚ್ಚಿಸಿದ ಸರ್ಕಾರಿ ಹುಕುಂಗಳನ್ನು ರದ್ದು ಮಾಡುವದು.

ಮಿ॥ ಶ್ರೀನಿವಾಸ ರೀಕ್ಷೆತರು, ಶಿವಮೊಗ್ಗಾ ಡಿಸ್ಟ್ರಿಕ್ಟ್ ಬೋರ್ಡು.

ಅರಿಕೆಯ ಸಾರಾಂಶ.—1922ನೇ ಆಗಸ್ಟ್ 1ನೇ ತಾರೀಖಿನ ಲಾಗಾಯಿತು ಹೆಚ್ಚಿಸಿದ ರಿಜಿಸ್ಟ್ರೇಷ್ನ್ ರುಸುಂಗಳನ್ನು ವಸೂಲ್ಮಾಡಬೇಕೆಂದು ಕೊಟ್ಟಿರುವ ಸರ್ಕಾರೀ ಹುಕುಂ ಜನಗಳಿಗೆ ಬಹಳ ಕಷ್ಟವನ್ನುಂಟುಮಾಡುತ್ತದೆ. ಈ ಹುಕುಮನ್ನು ಜಾರಿಗೆ ತರಕೂಡದೆಂದು ಪ್ರಾರ್ಥಿಸಿದೆ. ಅವಶ್ಯಕತೆ ತೋರಿದರೆ ಕೆಲವು ಸಬ್ ರಿಜಿಸ್ಟ್ರಾ ಆಫೀಸುಗಳನ್ನು ವಜಾ ಮಾಡಬಹುದು.

ವಿಷಯಸಂಖ್ಯೆ 71.

ರಿಜಿಸ್ಟ್ರೇಷನ್ ರುಸುಂಗಳನ್ನು ನಗದಿಗೆ ಬದಲಾಗಿ ಸ್ಟ್ಯಾಂಪುಗಳ ಮೂಲಕ ವಸೂಲ್ಮಾಡುವದು.

ಮಿ॥ ಜೆ. ರಾಮುಪ್ಪನವರು, ಶ್ರೀನಿವಾಸಪುರ ತಾಲ್ಲೂಕು.

ಅರಿಕೆಯ ಸಾರಾಂಶ.—ರಿಜಿಸ್ಟ್ರೇಷನ್ ರುಸುಂಗಳನ್ನು ನಗದಾಗಿ ಕೊಡುವುದಕ್ಕೆ ಬದಲಾಗಿ ತಕ್ಕ ಬೆಲೆಯ ಸ್ಟ್ಯಾಂಪುಗಳನ್ನು ಹಚ್ಚುವುದರ ಮೂಲಕ ಕೊಡುವಂತೆ ಮಾಡಬೇಕು.

ವಿಷಯಸಂಖ್ಯೆ 72.

ಹ್ಯೂಟಿ ಮತ್ತು ಪೆನಲ್ಟಿಯನ್ನು ಹಾಕುವ ಅಧಿಕಾರವನ್ನು ಸಬ್ ರಿಜಿಸ್ಟ್ರಾರುಗಳಿಗೆ ಕೊಡುವದು.

ಮಿ॥ ಸಿಂಗ್ರಿ ನಂಜಪ್ಪನವರು, ತಿಪಟೂರು ಮುನ್ಸಿಪಾಲಿಟಿ.

ಅರಿಕೆಯ ಸಾರಾಂಶ.—ಡ್ಯೂಟಿ ಮತ್ತು ಪೆನಲ್ಟಿಯನ್ನು ಹಾಕುವ ವಿಷಯದಲ್ಲಿ ಈಗ ಬಹು ಸಾವಕಾಶವಾಗುತ್ತಿರುವುದರಿಂದ ಈ ಅಧಿಕಾರವನ್ನು ಸಬ್ ರಿಜಿಸ್ಟ್ರಾರುಗಳಿಗೆ ಮಿಂಸಬೇಕು.

ವಿಷಯಸಂಖ್ಯೆ 73.

ರಿಜಿಸ್ಟ್ರೇಷನ್ ಅಪ್ಪೀಲು ದಾವೆಗಳನ್ನು ವಿಚಾರಣೆ ಮಾಡಿ ವ್ಯವಸ್ಥೆ ಮಾಡುವುದಕ್ಕಾಗಿ ಅಸಿಸ್ಟೆಂಟು ಕಮಿಷನರುಗಳಿಗೆ ಅಧಿಕಾರವನ್ನು ಕೊಡುವುದು.

ಮಿ॥ ಎಸ್. ಕೃಷ್ಣಸ್ವಾಮಿಐಯರವರು, ಮೈಸೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಡಿಸ್ಟ್ರಿಕ್ಟು ರಿಜಿಸ್ಟ್ರಾರ್‌ರವರೇ ರಿಜಿಸ್ಟ್ರೇಷನ್ ಅಪ್ಪೀಲು ದಾವೆಗಳನ್ನು ವಿಚಾರಣೆ ಮಾಡತಕ್ಕದ್ದೆಂದು ನಿಬಂಧನೆಗಳಲ್ಲಿ ವಿಧಾಯಕವಾಗಿರುತ್ತದೆ. ಆ ಆಫೀಸರಿಗೆ ಅನೇಕ ಕೆಲಸಗಳಿರುವುದರಿಂದ ಗೊತ್ತಾದ ತಾರೀಖಿನ ದಿವಸ ದಾವೆಗಳನ್ನು ವಿಚಾರಣೆ ಮಾಡುವುದಕ್ಕೆ ಅವರಿಗೆ ಪುರಸತ್ತಿರುವುದಿಲ್ಲ. ಆದಕ್ಕಾಗಿ ಅವುಗಳನ್ನು ಪದೇಪದೇ ಅಡ್‌ಜರ್ನ್ ಮಾಡುತ್ತಾರೆ. ದೂರ ಪ್ರಾಸಲೆಯಿಂದ ಬರುವ ಅನೇಕ ಕಕ್ಷಿಗಳಿಗೂ ಸಾಕ್ಷಿಗಳಿಗೂ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಅಂತಹ ದಾವೆಗಳನ್ನು ವಿಚಾರಣೆ ಮಾಡಿ ವ್ಯವಸ್ಥೆ ಮಾಡುವ ಬಗ್ಗೆ ಡಿವಿಜ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರುಗಳಿಗೆ ಅಧಿಕಾರ ಕೊಡತಕ್ಕದ್ದೆಂದೂ ಡೆಪ್ಯುಟಿ ಕಮಿಷನರುಗಳಿಗೆ ರಿವಿಜ್ ಅಧಿಕಾರಗಳಿರತಕ್ಕದ್ದೆಂದೂ ಅದಕ್ಕೆ ಅನುಸಾರವಾಗಿ ಕಾನೂನನ್ನು ತಿದ್ದಪಡಿಮಾಡಬೇಕೆಂದೂ ಸೂಚಿಸಿದೆ.

ವಿಷಯಸಂಖ್ಯೆ 74.

ವಿಧಾಯಕಮಾಡಿರುವ ಫೀಜನ್ನು ಕೊಟ್ಟರೆ ಪೂರ್ವಾಧಿ ಸಾಲಗಳ ಬಗ್ಗೆ ಸರ್ಟಿಫಿಕೇಟನ್ನು ಕೊಡುವುದು.

ಮಿ|| ಎಸ್. ವಿ. ನಾರಾಯಣಮೂರ್ತಿಗಳು, ಆರ್ಯವೈಶ್ಯ ಮಹಾಸಭಾ, ಬೆಂಗಳೂರು ಸಿಟಿ,

ಅರಕೆಯ ಸಾರಾಂಶ.—ಮೇಧ್ರಾಸಾಧಿಪತ್ಯವಲ್ಲಿರುವಂತೆ, ವಿಧಾಯಕವಾಗುವ ಫೀಜನ್ನು ಕೊಟ್ಟರೆ ಪೂರ್ವಾಧಿ ಸಾಲಗಳ ಬಗ್ಗೆ ಸರ್ಟಿಫಿಕೇಟನ್ನು ರಿಜಿಸ್ಟ್ರೇಷನ್ ಆಫೀಸರುಗಳು ಕೊಡಲು ಅವಕಾಶ ಕೊಡಬೇಕು.

ಕೆವಿನ್ಯೂ—(ಮುಜರಾಯಿ).

(ವಿಷಯಸಂಖ್ಯೆ 75ರಿಂದ 77ರ ವರೆಗೆ).

ವಿಷಯಸಂಖ್ಯೆ 75.

ಮೇಜರ್ ಮುಜರಾಯಿ ದೇವಸ್ಥಾನಗಳ ಕಮಿಟಿ ಮೆಂಬರುಗಳಿಗೆ ಕೆಲವು ಅಧಿಕಾರಗಳನ್ನು ಕೊಡುವುದು.

ಮಿ|| ಟಿ. ರಾಮಚಂದ್ರರಾಯನು, ಮೊಗಡಿ ತಾಲ್ಲೂಕು.

ಅರಕೆಯ ಸಾರಾಂಶ.—ಮೇಜರ್ ಮುಜರಾಯಿ ದೇವಸ್ಥಾನಗಳ ಆಡಳಿತವನ್ನು ನೋಡತಕ್ಕ ಬಗ್ಗೆ ಧರ್ಮದರ್ಶಿಗಳನ್ನೊಳಗೊಂಡ ಒಂದು ಕಮಿಟಿಯು ಏರ್ಪಾಡಾಗಿದೆ. ಕಮಿಟಿಯವರಿಗೆ ಕೊತ್ತಾದ ಅಧಿಕಾರಗಳಿಲ್ಲವಾದ್ದರಿಂದ ಮೇಲ್ವಿಚಾರಣೆಯು ತೃಪ್ತಿಕರವಾಗಿ ಜರುಗಲಾರದು. ಆದರಿಂದ ಕಮಿಟಿಯವರಿಗೆ ಇವರಣಿ ಕಂಡ ಅಧಿಕಾರಗಳನ್ನು ಕೊಡತಕ್ಕದ್ದು :—

(a) ದೇವಸ್ಥಾನಗಳಿಂದ ಉತ್ಪತ್ತಿಯಾಗುವ ವರಮಾನವನ್ನು ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟಿನಲ್ಲಿಡುವುದು.

(b) ಜರೂರಾದ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರವರ ಮುಂಜೂರಾತಿಯ ನಿರೀಕ್ಷಣೆಯ ಮೇಲೆ 50 ರೂಪಾಯಿಗೆ ಹೆಚ್ಚದಂತೆ ಖರ್ಚನ್ನು ಮಂಜೂರ್ಮಾಡುವುದು.

(c) ಕಮಿಟಿಯವರು ತೀರ್ಮಾನಮಾಡಿದ ಕೆಲಸವನ್ನು ಮಾಡುವುದಕ್ಕೆ 10 ರೂಪಾಯಿಗೆ ಹೆಚ್ಚದಂತೆ ಸಿಬ್ಬಂದಿಯನ್ನೂ ಸಾದಿಲ್ವಾರಿ ಚಾರ್ಜುಗಳನ್ನೂ ಮಂಜೂರ್ಮಾಡುವುದು.

(d) ನೌಕರಮಾನೆಗೆ ರಜಾಕೊಡುವುದು, ಬದಲಿ ನೇಮಕಮಾಡುವುದು ಮತ್ತು ನಾಲ್ಕಾಣೆವರೆಗೆ ಜುಲ್ಮಾನೆ ಹಾಕುವುದು. 10

ವಿಷಯಸಂಖ್ಯೆ 76.

ಮುಜರಾಯಿ ಕಾಂಗಾರಿಗಳ ಬಗ್ಗೆ 500 ರೂಪಾಯಿಯವರೆಗೆ ಅಂದಾಜಾಗಳನ್ನು ಮುಂಜೂರ್ ಮಾಡುವುದಕ್ಕೆ ಡೆಪ್ಯುಟಿ ಕಮಿಷನರುಗಳಿಗೆ ಅಧಿಕಾರ ಕೊಡುವುದು.

ವಿ-ll ಪಾಪಣ್ಣನವರು,
ನಂಜನಗೂಡು ತಾಲ್ಲೂಕು.

ವಿಷಯಸಂಖ್ಯೆ 77.

ವೀರಶೈವ ವಿದ್ಯಾರ್ಥಿಗಳನ್ನು ಸಂಸ್ಥಾನದ ಸಂಸ್ಕೃತ ಕಾಲೇಜುಗಳಿಗೆ ಸೇರಿಸುವುದು.

ವಿ॥ ಮುರುಳಿಸಿದ್ದಪ್ಪನವರು,
,, ಎಚ್. ರುದ್ರಪ್ಪನವರು,
ಅರಸೀಕೆರೆ ತಾಲ್ಲೂಕು;
,, ಎಂ. ಚನ್ನಬಸಪ್ಪನವರು,
ಅರಸೀಕೆರೆ ಮ್ಯುನಿಸಿಪಾಲಿಟಿ;
,, ಡಿ. ಎಸ್. ಮಲ್ಲಪ್ಪನವರು,
,, ಚಿಕ್ಕತಿಮ್ಮೈಗೌಡರು,
ತಿಪಟೂರು ತಾಲ್ಲೂಕು;
,, ಕೆ. ಬಸಲಿಂಗಯ್ಯನವರು,
,, ಎನ್. ಗುರುಲಿಂಗಪ್ಪನವರು,
ಹೊಸನಗರ ತಾಲ್ಲೂಕು ಮತ್ತು
,, ಬ್ಯೆ. ಕೆ. ವಿರೂಪಯ್ಯನವರು,
ಸ್ಯಾವಂತಿ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಮುಜರಾಯಿ ಕಾಂಗಾರಿಗಳ ಬಗ್ಗೆ 500 ರೂಪಾಯಿಯವರೆಗೆ ಅಂದಾಜಾಗಳನ್ನು ಮುಂಜೂರ್ ಮಾಡುವುದಕ್ಕೆ ಡೆಪ್ಯುಟಿ ಕಮಿಷನರುಗಳಿಗೆ ಅಧಿಕಾರ ಕೊಡಬೇಕು.

ಅರಿಕೆಯ ಸಾರಾಂಶ.—ಸರ್ಕಾರೀ ಖರ್ಚಿನಿಂದ ನಡಿಸಿಕೊಂಡು ಬರುವ ಸಂಸ್ಕೃತ ಕಾಲೇಜುಗಳಿಗೆ ವೀರಶೈವ ವಿದ್ಯಾರ್ಥಿಗಳನ್ನು ಸೇರಿಸಿ ಕೊಳ್ಳಬೇಕು.

ರಕ್ಷಣೆ—(ಕಾನೂನು).

(ವಿಷಯಸಂಖ್ಯೆ 78 ರಿಂದ 88ರ ವರೆಗೆ).

ವಿಷಯಸಂಖ್ಯೆ 78.

ನ್ಯಾಯವಿಧಾಯಕ ಸಭೆಯನ್ನು ಬಡಾಯಿಸುವುದು.

ಮಿ॥ (1) ಸಿ. ಕೃಷ್ಣಮೂರ್ತಿಯವರು, ಲಾ ಅಸೋಸಿಯೇಷನ್ ಬೆಂಗಳೂರು

,, (2) ಗಿರಿಯಾಜಿರಾಯರವರು, ಕೋಲಾರ ತಾಲ್ಲೂಕು.

ವಿಷಯಸಂಖ್ಯೆ 79.

ಡಿಸ್ಟ್ರಿಕ್ಟ್ ಬೋರ್ಡುಗಳು, ನ್ಯಾಯವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿಸಭೆ ವಗೈರೆಗಳ ಚುನಾವಣೆಯ ನಿಯಮಗಳ ತಿದ್ದುಪಾಟು.

ಮಿ॥ ಟಿ. ಶ್ರೀನಿವಾಸಾಚಾರ್ಯರವರು,

,, ಗಿರಿಯಾಜಿರಾಯರವರು, ಕೋಲಾರ ತಾಲ್ಲೂಕು.

,, (b) ಸಂಪಂಗಿ ರಾಮಯ್ಯನವರು, ಮಾಲೂರು ತಾಲ್ಲೂಕು ಮತ್ತು

,, (c) ಜೆ. ಸುಬ್ಬರಾಯರು, ಚಿತ್ರದುರ್ಗ ಡಿ॥ ಬೋ॥

ಅಂಕೆಯ ಸಂಖ್ಯೆ.—(1) ಓಟರುಗಳ ಸಂಖ್ಯೆಯನ್ನು ಹೆಚ್ಚಿಸಿ ಮೈಸೂರು ನ್ಯಾಯವಿಧಾಯಕ ಸಭೆಯನ್ನು ಬಡಾಯಿಸಬೇಕು.

(2) ನ್ಯಾಯವಿಧಾಯಕ ಸಭೆಗೆ ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿಯೂ ಚುನಾಯಿಸಲ್ಪಡುವ ಮೆಂಬರುಗಳ ಸಂಖ್ಯೆಯನ್ನು ಒಂದರಿಂದ ಮೂರಕ್ಕೆ ಹೆಚ್ಚಿಸಬೇಕು.

ಅಂಕೆಯ ಸಂಖ್ಯೆ.—(a) ಡಿಸ್ಟ್ರಿಕ್ಟ್ ಬೋರ್ಡುಗಳು, ನ್ಯಾಯವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆ, ಇವೇ ಮುಂತಾದ ಎಲ್ಲಾ ಚುನಾಯಿತ ಸಂಸ್ಥೆಗಳ ಚುನಾವಣೆ ನಿಯಮಗಳನ್ನು ಅಂತಹ ಸಂಸ್ಥೆಗಳಿಗೆ ಚುನಾವಣೆಗೆ ವಿರುದ್ಧವಾದ ಇತರ ಮಾರ್ಗಗಳಿಂದ ಮೆಂಬರುಗಳನ್ನು ಕಳುಹಿಸುವವನ್ನಾ ವೇಜಾ ಆಗುವಂತೆ ತಿದ್ದುಪಡಿ ಮಾಡಬೇಕು.

(b) (1) ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ತಾಲ್ಲೂಕು ಬೋರ್ಡುಗಳಿಂದಲೂ ಕೆಲವು ಮ್ಯುನಿಸಿಪಲ್ ಕೌನ್ಸಿಲುಗಳಿಂದಲೂ (ii) ನ್ಯಾಯವಿಧಾಯಕ ಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದಲೂ (iii) ಪ್ರಜಾಪ್ರತಿನಿಧಿ ಸಭೆಗೆ ಡಿಸ್ಟ್ರಿಕ್ಟ್ ಬೋರ್ಡುಗಳಿಂದಲೂ ಕೆಲವು ಆರಿಸಿದ ಮ್ಯುನಿಸಿಪಾಲಿಟಿಗಳಿಂದಲೂ ಮೆಂಬರುಗಳನ್ನು ಚುನಾಯಿಸುವುದು ಕ್ರಮವಾದದ್ದಲ್ಲವೆ. ಅವನ್ನು ನಿಜವಾದ ಪ್ರತಿನಿಧಿ ಸ್ವಭಾವವುಳ್ಳದ್ದನ್ನಾಗಿ ಹೇಳಲಾಗುವುದಿಲ್ಲ. ತಾಲ್ಲೂಕು ಮತ್ತು ಮ್ಯುನಿಸಿಪಲ್ ಎಲೆಕ್ಟರೇಟುಗಳಿಂದ (ಚುನಾವಣೆಯ ಸ್ಥಾನಗಳಿಂದ) ಚುನಾಯಿಸುವುದು ಪ್ರತಿನಿಧಿ ಸ್ವಭಾವವುಳ್ಳದ್ದಾಗಿಯೂ ಯುಕ್ತವಾಗಿಯೂ ಇರುವುದು

(c) ಹಾಲಿ ನ್ಯಾಯವಿಧಾಯಕ ಸಭೆಗೆ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳು (ಮೈಸೂರಲ್ಲಿ ನೇರಿದವರು) ಮೆಂಬರುಗಳನ್ನು ಚುನಾವಣೆ ಮಾಡುತ್ತಾರೆ. ಈ ಏಪರ್ಾಡಿನಲ್ಲಿ (ಕೆಲವುವೇಳೆ) ಚುನಾಯಿಸಲ್ಪಟ್ಟ ಮೆಂಬರುಗಳೆಲ್ಲರೂ ಒಂದೇ ಡಿಸ್ಟ್ರಿಕ್ಟಿಗೆ ನೇರಿದವರಾಗಿರುವ ಸಂಭವವುಂಟು. ನ್ಯಾಯವಿಧಾಯಕ ಸಭೆಗೆ ಪ್ರತಿಯೊಂದು ಡಿಸ್ಟ್ರಿಕ್ಟಿನಿಂದಲೂ ಒಬ್ಬ ಮೆಂಬರನ್ನು ಕಳುಹಿಸುವುದಕ್ಕೋಸ್ಕರ ಪ್ರತಿಯೊಂದು ಡಿಸ್ಟ್ರಿಕ್ಟಿನ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪ್ರತಿಯೊಂದು ಡಿಸ್ಟ್ರಿಕ್ಟು ಕಸಬೆಯಲ್ಲಿಯೂ ತವ್ಮೊಳಗೆ ಒಬ್ಬ ಮೆಂಬರನ್ನು ನ್ಯಾಯವಿಧಾಯಕ ಸಭೆಗೆ ಚುನಾಯಿಸಬೇಕೆಂದು ಹುಕುಂ ಆಗಬೇಕು.

ವಿಷಯಸಂಖ್ಯೆ 80.

ಮೈಸೂರು, ಬೆಂಗಳೂರು ಮತ್ತು ಶಿವಮೊಗ್ಗ ಬಾರ್ ಅಸೋಸಿಯೇಷನ್ನುಗಳಿಗೆ ಪ್ರತಿಯೊಂದಕ್ಕೂ ನ್ಯಾಯವಿಧಾಯಕ ಸಭೆಗೆ ಒಬ್ಬೊಬ್ಬ ಮೆಂಬರನ್ನು ಕಳುಹಿಸುವ ಹಕ್ಕನ್ನು ಕೊಡುವುದು.

ಮಿಃ ಕೆ. ಕೃಷ್ಣಸ್ವಾಮಿರಾಯರವರು, ಬಾರ್ ಅಸೋಸಿಯೇಷನ್, ಮೈಸೂರು.

ಅರಿಕೆಯ ಸಾರಾಂಶ.—ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯು ಹೆಚ್ಚು ದಕ್ಷತೆಯಿಂದ ಕೆಲಸ ಮಾಡುವ ಬಗ್ಗೆ ಲಾಯರುಗಳು ಅಲ್ಲಿಗೆ ಕ್ರಮವಾಗಿ ಅವರ ಪ್ರತಿನಿಧಿಗಳನ್ನು ಕಳುಹಿಸುವುದು ಅವಶ್ಯಕವಾಗಿದೆ. ಆದ್ದರಿಂದ ಮೈಸೂರು, ಬೆಂಗಳೂರು ಮತ್ತು ಶಿವಮೊಗ್ಗ ಬಾರ್ ಅಸೋಸಿಯೇಷನ್ನುಗಳಿಗೆ ನ್ಯಾಯವಿಧಾಯಕಸಭೆಗೆ ಪ್ರತಿಯೊಂದರಿಂದಲೂ ಚುನಾವಣೆಯ ಮೂಲಕ ಒಬ್ಬೊಬ್ಬ ಮೆಂಬರನ್ನು ಕಳುಹಿಸುವ ಹಕ್ಕನ್ನು ಕೂಡ ಬೇಕೆಂದು ಪ್ರಾರ್ಥಿಸಲಾಗಿದೆ.

ವಿಷಯಸಂಖ್ಯೆ 81.

ಪ್ರೆಸ್ ಕಾನೂನನ್ನು ರದ್ದುಮಾಡುವುದು.

ಮಿ|| ಕರ್ಣಿಕ ಕೃಷ್ಣಮೂರ್ತಿರಾಯರವರು, ಮುಗಡಿ ತಾಲ್ಲೂಕು;
,, ಸಿ. ಕೃಷ್ಣಮೂರ್ತಿಯವರು, ಲಾ ಅಸೋಸಿಯೇರ್ಸ್ ಬೆಂಗಳೂರು;
,, ಸಿ. ನರಸಿಂಹಯ್ಯನವರು, ಹೆಗ್ಗಡದೇವನಕೋಟೆ ತಾಲ್ಲೂಕು;
,, ಎಜ್. ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ ತಾಲ್ಲೂಕು;
,, ಕೆ. ಸುಬ್ಬರಾಯರು, ಮದ್ದಗಿರಿ ಮುನ್ಸೀ|| ಮತ್ತು
,, ಸಿ. ಕೃಷ್ಣರಾಯರು ತುಮಕೂರು ಜಿ|| ಬೋ||

ಅರಿಕೆಯ ಸಾರಾಂಶ.—ಪ್ರೆಸ್ ಕಾನೂನನ್ನು ರದ್ದುಪಡಿಸಬೇಕು.

ವಿಷಯಸಂಖ್ಯೆ 82.

ಕರಾರು ಉಲ್ಲಂಘನೆಯ ಅಕ್ಟನ್ನು ರದ್ದುಪಡಿಸುವುದು.

ಮಿ|| ಬಿ. ಎ. ವೀರೇಗೌಡರು, ಉತ್ತರ ಮೈಸೂರು ವೀಕೇಯುಪ್ಲಾಂಟರುಗಳ ಸಂಘ, ಚಿಕ್ಕಮಗಳೂರು.

ಅರಿಕೆಯ ಸಾರಾಂಶ.—ಪ್ರಸ್ತುತ ನ್ಯಾಯವಿಧಾಯಕ ಸಭೆಯ ಮುಂದೆ ಇರುವ ಕರಾರು ಉಲ್ಲಂಘನೆಯ ಅಕ್ಟನ್ನು ತಿದ್ದುಪಡಿ ಮಾಡುವ ಮಸೂದಾ ಬಿಲ್ಲಿನಲ್ಲಿ ಒಬ್ಬ ಕೂಲಿಗೆ 300 ರೂಪಾಯಿ ಮೊಂಗಡ ಕೊಡಬಹುದೆಂದು ಇರುತ್ತದೆ. ಒಬ್ಬ ಕೂಲಿಗೆ 25 ರೂಪಾಯಿಗಿಂತ ಹೆಚ್ಚಾಗಿ ಮೊಂಗಡವನ್ನು ಕೊಡಕೂಡದು. ಅವನು ಅದನ್ನು ಐದು ವರುಷದೊಳಗೆ ಹೆಚ್ಚು ತೊಂದರೆಯಿಲ್ಲದೆ ತೀರಿಸಲಾರನು. ಹೆಚ್ಚು ಮಂದಿ ಕೆಲಸಗಾರರನ್ನಾಗಲೀ ಕೂಲಿಯವರನ್ನಾಗಲೀ ಕರತರುವ

ಮೇಸ್ತ್ರಿಗೆ ಮೊತ್ತ 300 ರೂಪಾಯಿಯಿಂದ 1,000 ರೂಪಾಯಿವರೆಗೂ ಮುಂಗಡ ಕೊಡಬಹುದು. ಮೇಸ್ತ್ರಿಗೂ ಸಾಧಾರಣ ಕೂಲೀ ಯಾ ಕೆಲಸಗಾರನಿಗೂ ಇರುವ ವ್ಯತ್ಯಾಸವನ್ನು ಅಂಗೀಕರಿಸುವುದು ಅತ್ಯವಶ್ಯವಾದ್ದರಿಂದಲೂ ಮುಂಗಡದ ಪರಿಮಿತಿಯನ್ನು ಹೆಚ್ಚಿಸುವುದರಿಂದ ಕೂಲಿಯವನ ಬಾಳು ಗುಲಾಂಗಿರಿಗೆ ಬರುವ ಸಂಭವವಿರುವುದರಿಂದಲೂ ಈಗ ಸೂಚನೆ ಮಾಡಿರುವಂತೆ ಮುಂಗಡದ ಪರಿಮಿತಿಯನ್ನು ಹೆಚ್ಚಿಸಕೂಡದೆಂದು ಪ್ರಾರ್ಥಿಸಲಾಗಿದೆ.

ವಿಷಯಸಂಖ್ಯೆ 83

1859ನೆಯ ಇಸವಿ XIIIನೆ ನಂಬರ್ ಕರಾರು ಉಲ್ಲಂಘನೆಯ ಆಕ್ಟಿನ 2ನೆ ಪ್ರಕರಣವನ್ನು ತಿದ್ದುಪಡಿ ಮಾಡುವುದು.

ಮಿ॥ ಮಳಲಿ ವೆಂಕಟರಾಮಯ್ಯನವರು,
ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘ.

ಆರಿಕೆಯ ಸಾರಾಂಶ.—1859ನೆಯ ಇಸವಿ XIIIನೆಯ ನಂಬರಿನ ಕರಾರು ಉಲ್ಲಂಘನೆ ಆಕ್ಟಿನ 2ನೇ ಪ್ರಕರಣವನ್ನು ಇವರಡಿ ಕಂಡಂತೆ ತಿದ್ದುಪಡಿ ಮಾಡಬೇಕು.—

(a) ಕೂಲಿಗಳಿಗೆ ಕೊಡುವ ಮುಂಗಡವನ್ನು ತಲೆಯೊಂದಕ್ಕೆ 25 ರೂಪಾಯಿಗಿಂತ ಹೆಚ್ಚಿಸಕೂಡದು.

(b) ಆದರೆ ಮೇಸ್ತ್ರಿಗಳಿಗಾದರೆ ಮುಂಗಡದ ಮೊಬಲಗಿನ ವಿಚಾರದಲ್ಲಿ ಯಾವುದೊಂದು ಪರಿಮಿತಿಯನ್ನೂ ಕ್ಲುಪ್ತಮಾಡಕೂಡದು.

(c) ಮೈಸೂರು ಕೋರ್ಟುಗಳಿಂದ ಸಾದರಾದ ವಾರಂಟುಗಳನ್ನು ಬ್ರಿಟಿಷ್ ಇಂಡಿಯಾದಲ್ಲಿ ಜಾರೀ ಮಾಡುವುದಕ್ಕೆ ಏರ್ಪಾಡು ಮಾಡಬೇಕಾ ಮೆತ್ತು ಮೇಸ್ತ್ರಿಗಳೂ ಪ್ಲಾಂಟರುಗಳೂ ಮತ್ತು ಬೇಸಾಯಗಾರರೂ ಈಗ ಪಡುತ್ತಿರುವ ತೊಂದರೆಗಳನ್ನು ನಿವಾರಣೆ ಮಾಡಬೇಕು.

ವಿಷಯಸಂಖ್ಯೆ 84.

ಅಸಲು ಮೇಲೆ ವಸೂಲಾಗಬೇಕಾದ ಅತ್ಯಧಿಕ ಬಡ್ಡಿಯ ಮೊಬಲಗು ವಿಷಯದಲ್ಲಿ ಬ್ರಿಟಿಷ್ ಇಂಡಿಯಾ ಕಾನೂನ್ನನುಸರಿಸಿ ಮೈಸೂರು ಸಿವಿಲ್ ಲಾವನ್ನು ತಿದ್ದುಪಡಿಮಾಡುವುದು

ಮಿ|| ಎಸ್. ಕೃಷ್ಣಸ್ವಾಮಿರಾಯರು, ಮೈಸೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಅಸಲಿಗಿಂತಲೂ ಹೆಚ್ಚಾದ ಬಡ್ಡಿಯನ್ನು ವೆಸೂಲ್ ಮಾಡುವುದಕ್ಕೆ ಮೈಸೂರಲ್ಲಿ ಜಾರಿಯಿರುವ ಕಾನೂನಿನಿಂದ ವಾದಿಗೆ ಅಧಿಕಾರ ಬರುವುದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ದಾವೆ ಮಾಡಲ್ ಆದಾಗ ಬರಬೇಕಾದ ಬಡ್ಡಿಯು ಅಸಲಿಗಿಂತ ಹೆಚ್ಚಾಗಿನಕೂಡದೆಂಬ ಅಭಿಪ್ರಾಯಕ್ಕೆ ತೀರ್ಮಾನಗಳು ಕೊಡಲ್ಪಟ್ಟಿವೆ. ದಾವೇ ತೀರ್ಮಾನವಾದಾಗ ಅಸಲಿಗಿಂತ ಹೆಚ್ಚಾಗಿ ಬಡ್ಡಿಯು ಮೊಬಲಗನ್ನು ಪಡೆಯುವುದಕ್ಕೆ ವಾದಿಗೆ ಅಧಿಕಾರವಿಲ್ಲವೆಂಬ ಅಭಿಪ್ರಾಯಕ್ಕೆ ಮೈಸೂರಲ್ಲಿ ತೀರ್ಮಾನಗಳು ಅನುಕೂಲವಾಗಿವೆ ಇದರಿಂದ ಬರಿಜಿನಲ್ ಮತ್ತು ಅಪ್ಪೀಲು ಕೋರ್ಟುಗಳಲ್ಲಿ ದಾವೆಗಳನ್ನು ಎಳೆದಾಡಿಸಿದರೆ ವಾದಿಗೆ ಭಾರೀ ನುಕ್ಸಾನಾಗುವುದಲ್ಲದೆ ಪ್ರತಿವಾದಿಗೆ ಸಾಧ್ಯವಾದಷ್ಟು ಸಾವಕಾಶಮಾಡುವುದಕ್ಕೆ ಪ್ರೋತ್ಸಾಹಕೊಟ್ಟಂತಾಗುತ್ತದೆ. ಆದ್ದರಿಂದ ಬ್ರಿಟಿಷ್ ಇಂಡಿಯಾದಲ್ಲಿನ ಕಾನೂನನ್ನನುಸರಿಸಿ ಮೈಸೂರು ಕಾನೂನನ್ನು ಬದಲಾಯಿಸ ಬೇಕಾಗಿ ಪ್ರಾರ್ಥಿಸಿದೆ.

ವಿಷಯಸಂಖ್ಯೆ 85.

ಜೂಜಾಡುವುದನ್ನು ನಿರೋಧಿಸುವ ಆಕ್ಟನ್ನು ಜಾರಿತ ತರುವುದು.

ಮಿ|| ವೆಂಕಟಸ್ವಾಮಯ್ಯನವರು, ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್.

ಅರಿಕೆಯ ಸಾರಾಂಶ.—ಈ ಸಂಸ್ಥಾನದಲ್ಲಿ ಜೂಜಾಡುವುದನ್ನು ನಿರೋಧಿಸುವ ಆಕ್ಟನ್ನು ಜಾರಿಗೆ ತರಬೇಕು.

ರಕ್ಷಣೆ.—(ಲೆಜಿಸ್ಟ್ಲೇಟಿವ್.)

ವಿಷಯಸಂಖ್ಯೆ 86.

ಜನಕರುಗಳ ವಧೆಯನ್ನು ತಪ್ಪಿಸುವುದು.

ವಿ।। ಕೆ. ನಾರಣ್ಪಪ್ಪನವರು,
" ಗುಬ್ಬಿ ಕೊಮಾರಯ್ಯನವರು,
" ಹೊಳೆನರಸಿಪುರ ತಾಲ್ಲೂಕು;
" ಬಳಿ ವೆಂಕಟಸಾಮಯ್ಯನವರು
ಹೊಳೆನರಸಿಪುರ ಮ್ಯುನಿಸಿಪಾಲಿಟಿ;
" ಎಸ್. ಎಸ್. ನಂಜುಂಡಯ್ಯನವರು,
" ಎಚ್. ಚೋರಣ್ಣನವರು,
" ಕೆ. ಮಹದೇವಪ್ಪನವರು,
ಹಾಸನ ತಾಲ್ಲೂಕು;
" ಎಚ್. ವಿ. ರಂಗಸ್ವಾಮಿಯವರು,
ಹಾಸನ ಟೌನ್ ಮ್ಯುನಿಸಿಪಾಲಿಟಿ, ಮತ್ತು
" ಟಿ. ಸಿದ್ದಪ್ಪನವರು,
ದೊಡ್ಡಬಳ್ಳಾಪುರ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಜನಕರುಗಳ ವಧೆಯನ್ನು ತಪ್ಪಿಸುವ ಬಗ್ಗೆ ಅನುಕೂಲವಾದ ಕಾನೂನನ್ನು ಜಾರಿಗೆ ತರಬೇಕು.

ವಿಷಯಸಂಖ್ಯೆ 87.

ಬಾಲ್ಯವಿವಾಹದ ರೆಗ್ಯುಲೇಷನಿನ ತಿದ್ದುಪಾಟು.

ವಿ।। ಎಚ್. ನಾರಾಯಣರಾಯರು,
ಪಿ ಳಿಕಾಲ್ಸ್ಕರು ತಾಲ್ಲೂಕು

ಅರಿಕೆಯ ಸಾರಾಂಶ.—ಬಾಲ್ಯವಿವಾಹದ ರೆಗ್ಯುಲೇಷನ್ನಿನಲ್ಲಿ ಬಾಲಕರ ವಯಸ್ಸಿನ ಪರಿಮಿತಿಯನ್ನು 14 ರಿಂದ 16 ಕ್ಕೂ, ಬಾಲಿಕೆಯರ ವಯಸ್ಸಿನ ಪರಿಮಿತಿಯನ್ನು 8 ರಿಂದ 10 ಕ್ಕೂ ಹೆಚ್ಚಿಸಬೇಕು.

ವಿಷಯಸಂಖ್ಯೆ 88.

ಗಣಿಗಳ ರೆಗ್ಯುಲೇಷನ್ನಿನ 17ನೆಯ ಪ್ರಕರಣದ ತಿದ್ದುಪಾಟು.

ಶ್ರೀಯುತ ಟಿ. ಎಂ. ರಾಮಚಂದ್ರರಾಯರು ಮತ್ತು
,, ಕೆ. ರಾಮೇಗೌಡರು,
ಬೌರಿಂಗ್‌ಪೇಟೆ ತಾಲ್ಲೂಕು:
ಮತ್ತು
,, ಎಂ. ಜಿನ್ನಪ್ಪನವರು,
ಬೌರಿಂಗ್‌ಪೇಟೆ ಮ್ಯೂನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಮೈಸೂರು ಶ್ರೀಮಂತ ಮಹಾರಾಜರವರ ಖಾಯಮ್ಮಾದ ಪ್ರಜೆಗಳಿಗೆ ಗಣಿಗಳ ರೆಗ್ಯುಲೇಷನ್ನಿನ 17ನೆಯ ಪ್ರಕರಣದ ನಿಯಮಗಳು ಅನ್ವಯಿಸದಂತೆ ಸದರಿ ನಿಯಮಗಳನ್ನು ತಕ್ಕ ರೀತಿಯಲ್ಲಿ ತಿದ್ದುಪಡಿ ಮಾಡಬೇಕು; ಏಕೆಂದರೆ, ಸದರಿ ನಿಯಮಗಳ ರೀತ್ಯಾ ಅನಾವಶ್ಯಕವೆಂದು ಕಂಡುಬಂದ ಯಾವ ಮನುಷ್ಯನಾದರೂ ಗಣಿಯ ಪ್ರದೇಶದಿಂದ ಹೊರಕ್ಕೆ ಕೂಡಲೇ ಕಳುಹಿಸಲ್ಪಡುವುದಕ್ಕೆ ಗುರಿಯಾಗಿದ್ದಾನೆ. ಸರ್ಕಾರಕ್ಕೆ ಕಂದಾಯವನ್ನು ಕೊಡುವ ರೈತನಿಗೂ ಸಹ ಈಗಣ ಕಾನೂನಿನಿಂದ ಅನಾವಶ್ಯಕವಾದ ಕಷ್ಟ ಉಂಟಾಗುತ್ತದೆ.

ರಹಣೆ—(ಜ್ಯೂಡಿಷಿಯಲ್).

(ವಿಷಯಸಂಖ್ಯೆ 89 ರಿಂದ 106ರ ವರಗೆ).

ವಿಷಯಸಂಖ್ಯೆ 89.

ಮೆಟ್ರಿಕ್ಯುಲೇಷನ್ ಮತ್ತು ಸ್ಕೂಲು ಫೈನಲ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರು ಪ್ಲೀಡರುಗಳಾಗಲು ಅವಕಾಶ ಕೊಡುವುದು.

ಶ್ರೀಯುತ ಜಿ. ಸುಬ್ಬರಾಯರವರು,
ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್.

ಅರಿಕೆಯ ಸಾರಾಂಶ.—ಮೆಟ್ರಿಕ್ಯುಲೇಷನ್ ಮತ್ತು ಸ್ಕೂಲು ಫೈನಲ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರು, ಇಷ್ಟರವರೆಗೆ ಇದ್ದಂತೆ ವಿಧಾಯಕವಾದ ಲೋಕಲ್ ಬೆಂಚ್ಚುಗಳಲ್ಲೆಲ್ಲಾ ತೇರ್ಗಡೆ ಹೊಂದಿದ ತರುವಾಯ ಪ್ಲೀಡರುಗಳಾಗಲು ಅವಕಾಶ ಕೊಡಬೇಕು.

ವಿಷಯಸಂಖ್ಯೆ 90.

ಎಲ್ಲಾ ಡಿಸ್ಟ್ರಿಕ್ಟ್‌ಗಳ ಲ್ಲಿರುವ ಕೋರ್ಟುಗಳಲ್ಲಿ ಪ್ಲೀಡರುಗಳು ಹಾಜರಾಗಿ ಕೆಲಸ ನಡಿಸುವ ಬಗ್ಗೆ ಅಪ್ಪಣೆ.

ವಿ|| ಬಿ. ಕೇಶವಯ್ಯನವರು, ವಕ್ತ್ಯು
,, ವಸ್ಯಾರೆ ಹೊನ್ನಪ್ಪಯ್ಯನವರು, ಚಿಕ್ಕಮಗಳೂರು ತಾಲ್ಲೂಕು

ವಿಷಯಸಂಖ್ಯೆ 91.

ಸಿವಿಲ್ ವ್ಯವಹಾರದ ವ್ಯವಸ್ಥೆಯ ಬಗ್ಗೆ ವರ್ಷಟ್ಟ ಸಿಬ್ಬಂದಿಯನ್ನು ಪುನರ್ವ್ಯವಸ್ಥೆ ಮಾಡಿ ಉತ್ತಮ ಸ್ಥಿತಿಗೆ ತರುವುದು.

ವಿ| ಬೇಲೂರು ಶ್ರೀನಿವಾಸಯ್ಯಂಗಾರ್ಯರು,
ಚಿಂಗಳಪೇಟೆ ತಾಲ್ಲೂಕು.
,, ಎನ್. ಪಿ. ನಾರಾಯಣಾರ್ಯಮೂರ್ತಿಯವರು, ಆರ್ಯವೈಶ್ಯ ಮಹಾಸಭಾ, ಚಿಂಗಳೂರು ಸಿಟಿ.
ಮತ್ತು
,, ಸಿ. ಕೃಷ್ಣಮೂರ್ತಿಯವರು, ಲಾ ಅಸೋಸಿಯೇಷನ್, ಚಿಂಗಳೂರು.

ಅರಿಕೆಯ ಸಾರಾಂಶ.—ಚೀಫ್ ಕೋರ್ಟಿನಿಂದ ಕೊಡಲ್ಪಟ್ಟ ಸರ್ಟಿಫಿಕೇಟುಗಳನ್ನು ಪಡೆದಿರುವ ಪ್ಲೀಡರುಗಳು ಯಾವುದಾದರೂ ಗೊತ್ತಾದ ಡಿಸ್ಟ್ರಿಕ್ಟ್‌ಗಳ ಕೋರ್ಟುಗಳಿಗೆ ಮಾತ್ರವಲ್ಲದೆ, ಅವರಿಗೆ ಹಕ್ಕಿರುವ ಸಂಸ್ಥಾನದ ಕೋರ್ಟುಗಳಿಗೆಲ್ಲಾ ಹಾಜರಾಗಿ ಕೆಲಸ ನಡಿಸುವ ಬಗ್ಗೆ ಅಪ್ಪಣೆಯಾಗಬೇಕು.

ಅರಿಕೆಯ ಸಾರಾಂಶ.—ಸಿವಿಲ್ ವ್ಯವಹಾರದ ವ್ಯವಸ್ಥೆಯ ಬಗ್ಗೆ ವರ್ಷಟ್ಟ ಸಿಬ್ಬಂದಿಯನ್ನು ಸಂಪೂರ್ಣವಾಗಿ ಪುನರ್ವ್ಯವಸ್ಥೆ ಮಾಡಿ, ಉತ್ತಮ ಸ್ಥಿತಿಗೆ ತರಬೇಕು. ಇಂತಹ ವಿಷಯಗಳಿಗೆ ಜನರಲ್ ಫಂಡಿನಿಂದ ಹಣವನ್ನು ಕೊಡಬೇಕೆಂದು ಇತರ ದೇಶಗಳಲ್ಲಿ ಆಚರಣೆಗೆ ತಂದಿರುವ ವಿಹಿತವಾದ ವರ್ಷಾಟವನ್ನು ಅನುಸರಿಸಲಾಗದಿದ್ದಲ್ಲಿ, ಕೋರ್ಟುಫೀ ಸ್ಟ್ಯಾಂಪುಗಳಿಂದ ಬರುವ ಸಂಪೂರ್ಣ ವರಮಾನವೆನ್ನಾದರೂ ಹೀಗೆ ಮಾಡುವ ಬಗ್ಗೆ ಏರ್ಪಾಟು ಮಾಡಬೇಕು. ಸಿವಿಲ್ ದಾವೆಗಳ ವ್ಯವಸ್ಥೆಯಲ್ಲಿ ಉಂಟಾಗುತ್ತಿರುವ ಮಿತಿಮೀರಿದ ಸಾವಕಾಶದ ವಿಷಯವಾಗಿ ಈ ಸಭೆಯಲ್ಲಿ ಪದೇಪದೇ ಆಕ್ಷೇಪಣೆಗಳನ್ನು ಮಾಡಿದೆ. ಗಂಧದೆಣ್ಣೆ ಕಾರ್ಖಾನೆ ಮತ್ತು ಭದ್ರಾವತೀ ಕಬ್ಬಿಣದ ಕಾರ್ಖಾನೆಗಳ ವಿಷಯವನ್ನಲ್ಲಿ ಮಾಡಿರುವಂತೆ, ಖಾಸಗೀ ಕಕ್ಷಿಗಾರರಲ್ಲಿ ನಡೆಯುವ ಸಿವಿಲ್ ವ್ಯವಹಾರಗಳನ್ನು ಸಂಸ್ಥಾನಕ್ಕೆ ವರಮಾನದ ಸಾಧನವೆನ್ನಾಗಿ ಮಾಡಿಕೊಳ್ಳಬಾರದು.

(h) ಪೇಸ್ಕಾರ್ ವರ್ಗದ ಜ್ಯೂಡಿಷಿಯಲ್ ಹುದ್ದೆಗಳಿಗೆ (ಚೀಫ್ ಕೋರ್ಟ್ ಸೇರಿ) ಲಾಯಮಗಳ ಪಂಗಡದಿಂದ ನೇರವಾಗಿ ಹೊಸಬರನ್ನು ನೇಮಕ ಮಾಡಬೇಕೆಂಬ ಅಂಶವನ್ನೂ ಸಹ ಪರ್ಯಾಲೋಚಿಸಬೇಕು.

ವಿಷಯಸಂಖ್ಯೆ 92.

ಜ್ಯುಡಿಷಿಯಲ್ ಮತ್ತು ಎಗ್ಜಿಕ್ಯೂಟಿವ್ ಅಧಿಕಾರಗಳನ್ನು ಪ್ರತ್ಯೇಕಿಸುವುದು.

(a) ಮಿ॥ ಎ. ಶ್ರೀಕಂಠಪ್ಪನವರು, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ;
,, ಸಿ. ಕೃಷ್ಣಮೂರ್ತಿಯವರು, ಲಾ ಅಸೋಸಿಯೇಷನ್, ಬೆಂಗಳೂರು ;

(b) 1. ಮಿ॥ ಎಸ್. ಹಂಪಯ್ಯನವರು, ಕೃಷ್ಣಭಟ್ಟ ಮ್ಯುನಿಸಿಪಾಲಿಟಿ ;
,, ಜಿ. ಗಿರಿಯಾಜೀರಾಯರು, ಕೋಲಾರ ತಾಲ್ಲೂಕು ;
2. ,, ಯೂಸೂಫ್‌ಖಾನ್ ಬಹದ್ದೂರ್ ಚಿಕ್ಕಬಳ್ಳಾಪುರ ಮ್ಯುನಿಸಿಪಾಲಿಟಿ ;

(c) ಮಿ॥ ಕೆ. ಸುಬ್ಬರಾಯರು, ಮದ್ದಗಿರಿ ಮ್ಯುನಿಸಿಪಾಲಿಟಿ ;
,, ಸಿ. ಕೃಷ್ಣರಾಯರು, ತುಮಕೂರು ಡಿಸ್ಟ್ರಿಕ್ಟ್ ಬೋರ್ಡು ಮತ್ತು
,, ಅಬ್ದುಲ್ ನಬೀಖಾನ್ ಸಾಹೇಬರು,
ತುಮಕೂರು ಮ್ಯುನಿಸಿಪಾಲಿಟಿ.

ಆಲಕೆಯ ಸಾರಾಂಶ.—(a) ಜ್ಯುಡಿಷಿಯಲ್ ಮತ್ತು ಎಗ್ಜಿಕ್ಯೂಟಿವ್ ಅಧಿಕಾರಗಳನ್ನು ಪ್ರತ್ಯೇಕಿಸಬೇಕೆಂಬ ಏರ್ಪಾಟನ್ನು ಸಂಸ್ಥಾನದಲ್ಲಿ ಉಳಿದ ನಾಲ್ಕು ಡಿಸ್ಟ್ರಿಕ್ಟ್‌ಗಳಲ್ಲಿಯೂ ತ್ವರ್ಯವಾಗಿ ಆಚರಣೆಗೆ ತರಬೇಕೆಂದು ಪ್ರಾರ್ಥನೆ. ಇದಕ್ಕಾಗಿ ಪ್ರತ್ಯೇಕ ಆಫೀಸರುಗಳನ್ನು ಗೊತ್ತು ಮಾಡುವುದು ಪ್ರಕೃತದಲ್ಲಿ ಸಾಧ್ಯವಾಗದಿದ್ದರೆ, ಮುನ್ಸೀಫ್ ಕೋರ್ಟುಗಳಿರುವ ಮತ್ತು ಸದರಿ ಏರ್ಪಾಟು ಜಾರೀಗೆ ಬಾರದಿರುವ ಸ್ಥಳಗಳಲ್ಲಿ ಮುನ್ಸೀಫರುಗಳಿಗೆ 2ನೆಯ ತರಗತಿಯ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಕೊಡಬೇಕು.

(b) 1. ಜ್ಯುಡಿಷಿಯಲ್ ಮತ್ತು ಎಗ್ಜಿಕ್ಯೂಟಿವ್ ಅಧಿಕಾರಗಳನ್ನು ಪ್ರತ್ಯೇಕಿಸುವ ಏರ್ಪಾಟನ್ನು ಉಳಿದ ನಾಲ್ಕು ಡಿಸ್ಟ್ರಿಕ್ಟ್‌ಗಳಿಗೂ ಸಹ ಅನ್ವಯಿಸುವಂತೆ ಮಾಡಬೇಕೆಂದು ಪ್ರಾರ್ಥನೆ.

2. ಸ್ಥಳೀಯ ಮ್ಯುನಿಸಿಪಾಲಿಟಿಯ ಸರ್ಕಾರಿ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರಾಗಿ ಅಥವಾ ವೈಸ್ ಪ್ರೆಸಿಡೆಂಟರನ್ನು ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಜೇರ್ಮನ್ನರನ್ನಾಗಿ ನೇಮಿಸಬೇಕು.

(c) ಜ್ಯುಡಿಷಿಯಲ್ ಮತ್ತು ಎಗ್ಜಿಕ್ಯೂಟಿವ್ ಅಧಿಕಾರಗಳನ್ನು ಪ್ರತ್ಯೇಕಿಸುವ ಏರ್ಪಾಟನ್ನು ಜಾರಿಗೆ ತರಬೇಕೆಂದು ಪ್ರಾರ್ಥನೆ.

ವಿಷಯಸಂಖ್ಯೆ 93.

ಕೆಲವು ಮೊಕದ್ದಮೆಗಳಲ್ಲಿ ಬಡ್ಡಿಯ ದರ ಕಡಿಮೆಮಾಡುವ ಅಧಿಕಾರವನ್ನು ಸಿವಿಲ್ ಕೋರ್ಟುಗಳಿಗೆ ತಪ್ಪಿಸುವುದು.

ಮಿ॥ ಎಸ್. ಕೃಷ್ಣಸ್ವಾಮಿರಾಯರು ಪೈಸೂರು ತಾಲ್ಲೂಕು.

ಆರಿಕೆಯ ಸಾರಾಂಶ.—ಆಧಾರ ಭೋಗ್ಯಗಳಿಗೆ ಸಂಬಂಧಪಡುವ ಮೊಕದ್ದಮೆಗಳಲ್ಲಿ ಹಿಂದೆಯೇ ಒಪ್ಪಂದವಾಗಿರುವ ಬಡ್ಡಿಯ ದರವನ್ನು ಕಡಿಮೆ ಮಾಡಲು ಸಿವಿಲ್ ಕೋರ್ಟುಗಳಿಗೆ ಅಧಿಕಾರವಿಲ್ಲ. ಮೈಸೂರು ಮತ್ತು ಗುತ್ತಿಗೆ ಕರಾರಿನ ಮೊಕದ್ದಮೆಗಳಲ್ಲಿ ಹಾಗೆ ಮಾಡಲು ಅವುಗಳಿಗೆ ಅಧಿಕಾರವುಂಟು. ಅಂತಹ ಮೊಕದ್ದಮೆಗಳಲ್ಲೆಲ್ಲಾ ತೃಪ್ತಿಕರವಾದ ಕಾರಣವನ್ನು ತೋರಿಸದೆ ಬಡ್ಡಿಯನ್ನು ಕಡಿಮೆಮಾಡುವುದು ರೂಢಿಯಲ್ಲಿರುವ ಪದ್ಧತಿಯಾಗಿದೆ. ಬಂದಾ ಕೆಡೆಯಲ್ಲಿ, ಇದರಿಂದ ವಾದಿಗೆ ನಷ್ಟವೂ ತೊಂದರೆಯೂ ಉಂಟಾದರೆ, ಮೆ ತ್ತೊಂದು ಕಡೆಯಲ್ಲಿ, ಪ್ರತಿವಾದಿಯು ಸುಳ್ಳುವಾದವನ್ನು ತರುವಬ್ಗೆ ಕಾಲ ದೊರಕಿಸಿಕೊಳ್ಳಿಲು ಪ್ರೋತ್ಸಾಹಿಸಿದಂತಾಗುತ್ತದೆ. ಆದಕಾರಣ ಸರ್ಕಾರದ ವರು ಎಲ್ಲಾ ಮೊಕದ್ದಮೆಗಳಲ್ಲಿಯೂ ಬಡ್ಡಿಯ ದರ ಕಡಿಮೆಮಾಡುವ ಅಧಿಕಾರವನ್ನು ಸಿವಿಲ್ ಕೋರ್ಟುಗಳಿಗೆ ತಪ್ಪಿಸಿ, ಅದರಂತೆ ಸಿವಿಲ್ ಪ್ರೊಸೀ ಜರ್ ಕೋಡಿನಲ್ಲಿ ತಿದ್ದುಪಡಿ ಮಾಡಬೇಕು. ಅಥವಾ ಬಡ್ಡಿಯ ದರವನ್ನು ಕಡಿಮೆಮಾಡಿದ ಬಗ್ಗೆ ಕಾರಣಗಳನ್ನು ತೃಪ್ತಿಕರವಾದ ರೀತಿಯಲ್ಲಿ ತಿಳಿಸು ವಂತೆ ಸಿವಿಲ್ ಕೋರ್ಟುಗಳಿಗೆ ಗೊತ್ತು ಮಾಡಬೇಕು.

ವಿಷಯಸಂಖ್ಯೆ 94.

ಸಿವಿಲ್ ದಾವೆಗಳನ್ನು ಶೀಘ್ರವಾಗಿ ವ್ಯವಸ್ಥೆಮಾಡುವುದು ಮತ್ತು ದಾವೆ ಹೊಬಲಗಿನ ಮೇಲಣ ಬಡ್ಡಿಯನ್ನು ವಾದಿಗಳಿಗೆ ಕೊಡಿಸುವುದು.

ಮಿ॥ (a) ಸಾಟಿ ಹಾಳಪ್ಪನವರು, ಚಿತ್ರದುರ್ಗ ತಾಲ್ಲೂಕು;

ಆರಿಕೆಯ ಸಾರಾಂಶ.—(a) ಸಿವಿಲ್ ಕೋರ್ಟುಗಳಲ್ಲಿ ದಾಖಲಾಗಿರುವ ದಾವೆಗಳ ವಿಷಯದಲ್ಲಿ, ಅವುಗಳ ವಿಚಾರಣೆ ಮತ್ತು ವ್ಯವಸ್ಥೆಗೆ ಪ್ರಸ್ತುತ ಹೆಚ್ಚಿನ ಕಾಲ ಹಿಡಿಯುವುದರಿಂದ, ಸಿವಿಲ್ ದಾವೆಗಳಲ್ಲೆಲ್ಲಾ ಅವುಗಳು ದಾಖಲಾದ ತಾರೀಖಿನ ಆಗಾಯಿತು ಆರು ತಿಂಗಳೊಳಗಾಗಿ ವಿಚಾರಣೆಯನ್ನು ಪ್ರಾರಂಭ ಮಾಡಬೇಕೆಂದೂ, ಅವುಗಳ ವ್ಯವಸ್ಥೆಯನ್ನು ಒಂದು ವರ್ಷದೊಳಗಾಗಿ ಮುಗಿಸಬೇಕೆಂದೂ ಹುಕುಂ ಆಗಬೇಕು.

„ (b) ಎಚ್. ಎಸ್. ಗುಂಡಪ್ಪನವರು ಪಟೇಲರು;
„ ಬಾಳಿಗೌಡರು, ಕುಣಿಗಲು ತಾಲ್ಲೂಕು ಮತ್ತು
„ ಜಿ. ಎಸ್. ಮುರಿಗಪ್ಪನವರು, ಗುಬ್ಬಿ ತಾಲ್ಲೂಕು.

ಪ್ರತಿವಾದಿಗಳು ಅನಾವಶ್ಯಕವಾದ ಆಕ್ಷೇಪಣೆಗಳನ್ನು ಹೂಡುವುದರ ಮೂಲಕ ಮೊಕದ್ದಮೆಗಳು ಸಾವಕಾಶದಿಂದ ನಡೆಯುವಂತೆ ಮಾಡುವ ಸಂದರ್ಭಗಳಲ್ಲಿ, ದಾವೆ ಪೊಬಲಿಗಿನ ಮತ್ತು ಕೋರ್ಟು ಖರ್ಚಿನ ಮೇಲಣ ಬಡ್ಡಿಯನ್ನು ಪತ್ರದಲ್ಲಿ ನಮೂದಾದ ದರದಂತೆ ಅಥವಾ ಮೊಹಿಯಾನಾ ಶೇಕಡ ಒಂದರಂತೆ ವಾದಿಗಳಿಗೆ ಕೊಡುವ ಹಾಗೆ ಹುಕುಂ ಆಗಬೇಕು.

(b) ಸಿವಿಲ್ ಕೋರ್ಟುಗಳಲ್ಲಿ ಮೊಕದ್ದಮೆಗಳು ಮಿತಿಮೀರಿ ದೀರ್ಘಕಾಲ ನಡೆಯುತ್ತಿರುವುದರಿಂದ ವಿಶೇಷ ಕಷ್ಟನಷ್ಟಗಳುಂಟಾಗುತ್ತಿವೆ. ಆದಕಾರಣ, ಚೀಫ್ ಕೋರ್ಟಿನಲ್ಲಿ ಆಚರಣೆಯಲ್ಲಿರುವಂತೆ, ಕಾಜ್‌ಲಿಸ್ಟುಗಳನ್ನು ತಯಾರ್ಮಾಡಿ ವಿಚಾರಣೆಯ ತಾರೀಖಿಗೆ ಎರಡು ತಿಂಗಳು ಮುಂಚಿತವಾಗಿ ಲಾಯರುಗಳಿಗೆ ಕಳುಹಿಸುವಂತೆಯೂ, ಆ ಮೊಕದ್ದಮೆಗಳನ್ನು ಮಾತ್ರ ವಿಚಾರಣೆ ಬಗ್ಗೆ ತೆಗೆದುಕೊಳ್ಳುವಂತೆಯೂ ಏರ್ಪಾಟು ಮಾಡಬೇಕು.

ವಿಷಯಸಂಖ್ಯೆ 95.

ಮೊಕದ್ದಮೆಗಳು ವಿಲೆಯಾಗದೆ ನಿಂತಿರುವಾಗ ಮತ್ತು ಡಿಕ್ರಿಯಾದ ಮೇಲೆ ಬಡ್ಡಿಯ ದರಗಳು.

ಮಿ|| ಅಬ್ದುಲ್ ಸುಬಿರ್ಹಾನ್‌ಸಾಬರು, ತುಮಕೂರು ಮ್ಯುನಿಸಿಪಾಲಿಟಿ.

ಅರಿಕೆಯು ಸಾರಾಂಶ.—ದಾವೆಗಳು ದಾಖಲಾದ ತಾರೀಖಿನ ಲಾಗಾಯಿತು ಡಿಕ್ರಿ ತಾರೀಖಿನವರೆಗೆ ಏಧಾಯಕವಾದ ದರಪ್ರಕಾರವೂ ಆ ತರುವಾಯ ಡಿಕ್ರಿಯಲ್ಲಿ ಕಂಡ ಬಟ್ಟೆ ಪೊಬಲಿಗಿನ ಮೇಲೆ ಶೇಕಡಾ 6ರಂತೆಯೂ ಬಡ್ಡಿಯನ್ನು ಕೊಡಿಸಬೇಕೆಂದು ಪ್ರಾರ್ಥನೆ.

ವಿಷಯಸಂಖ್ಯೆ 96.

ವಾದಿಗಳು ಪ್ರತಿವಾದಿಗಳ ಮೇಲೆ ಪಡೆದುಕೊಂಡ ಡಿಕ್ರಿಗಳ ವಿಷಯದಲ್ಲಿ ವಾದಿಗಳಿಗೆ ಬರಬೇಕಾದ ಮೊಬಲಗಿನ ಸಂದಾಯಕ್ಕೆ ಕಾಲ ಪರಿಮಿತ.

ವಿ॥ ಸಾಟಿ ಹಾಳಪ್ಪನವರು,
ಚಿತ್ರದುರ್ಗ ತಾಲ್ಲೂಕು.

ಅರಿಕೆಯ ಸಾರಾಂಶ.—ಸಿವಿಲ್ ದಾವೆಗಳಲ್ಲಿ ವಾದಿಗಳು ಪ್ರತಿವಾದಿಗಳ ಮೇಲೆ ಪಡೆದುಕೊಂಡ ಡಿಕ್ರಿ ಮೊಬಲಗಿಗಾಗಿ ಪ್ರತಿವಾದಿಗಳಿಂದ ಜೀವಣಿ ಮಾಡಲ್ಪಟ್ಟ ಮೊಬಲಗನ್ನು ಅವಶ್ಯಕವಾದ ಅಧಿಕಾರ ಪತ್ರವನ್ನು ಹಾಜರ್ಮಾಡಿದಾಗ್ಗೂ ಸಿವಿಲ್ ಕೋರ್ಟ್‌ನವರು ಐದೆರಡು ವರ್ಷಗಳಿಗೆ ಮೇಲ್ಪಟ್ಟ ಕಾಲದವರೆಗೆ ವಾದಿಗಳಿಗೆ ಪಾವತಿ ಮಾಡುವುದಿಲ್ಲ. ಈ ಸಾವಕಾಶದ ದೆಸೆಯಿಂದ ವಾದಿಗಳಿಗೆ ಹೆಚ್ಚು ಕಷ್ಟವಾಗುವುದರಿಂದ, ಇಂತಹ ವಿಷಯಗಳಲ್ಲಿ ವಾದಿಗಳ ಹಕ್ಕಿನ ವ್ಯವಸ್ಥೆ ಬಗ್ಗೆ ಐದು ಕಾಲಪರಿಮಿತಿಯನ್ನು ಗೊತ್ತುಮಾಡಿ, ಅದು ತ್ವರ್ಯವಾಗಿ ವ್ಯವಸ್ಥೆಯಾಗುವಂತೆ ಪಡುಕುಂ ಆಗಬೇಕು.

ವಿಷಯಸಂಖ್ಯೆ 97.

ಸಿವಿಲ್ ದಾವಾಗಳಲ್ಲಿನ ರಿಕಾರ್ಡುಗಳನ್ನು ಮುದ್ರಿಸುವ ಬಗ್ಗೆ ಪೂರ್ವದ ಪದ್ಧತಿಯನ್ನು ಪುನಃ ಆಚರಣೆಗೆ ತರುವುದು.

ವಿ॥ ಕೆ. ಸುಬ್ಬರಾಯರು,
ಮದ್ದಗಿರಿ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—100 ರೂಪಾಯಿಗೆ ಮೇಲ್ಪಟ್ಟಿರುವ ವಿಷಯದ ಮೊಕದ್ದಮೆಗಳಲ್ಲೆಲ್ಲಾ ರಿಕಾರ್ಡುಗಳನ್ನು ಮುದ್ರಿಸುವ ಈಗಣ ಪದ್ಧತಿಯನ್ನು ವಜಾಮಾಡಿ ಪೂರ್ವ ಪದ್ಧತಿಯನ್ನು ಪುನಃ ಆಚರಣೆಗೆ ತರಬೇಕು.

ವಿಷಯಸಂಖ್ಯೆ 98.

ಸಿವಿಲ್ ಕೋರ್ಟುಗಳಲ್ಲಿ ಹಾಜರ್ಮಾಡಿದ ಮೂಲದಸ್ತಾವೇಜುಗಳನ್ನು ವಾಪಸುಮಾಡುವುದು.

ವಿ॥ ಟಿ. ಸಂಜಪ್ಪನವರು, ಮೈಸೂರು ವಾಣಿಜ್ಯ ಸಂಘ, ಬೆಂಗಳೂರು.

ಅರಿಕೆಯ ಸಾರಾಂಶ.—ಸಿವಿಲ್ ಮೊಕದ್ದಮೊಗಳಲ್ಲಿ ದಸ್ತಾವೇಜುಗಳನ್ನು ಹಾಜರ್ಮಾಡುವಂತೆ ಸಾಕ್ಷಿಗಳಿಗೆ ಸಮ್ಮ ಕೊಡಲಾಗುತ್ತದೆ. ಸದರೀ ದಸ್ತಾವೇಜುಗಳನ್ನು ಕೋರ್ಟುಗಳಲ್ಲಿ ಇಟ್ಟುಕೊಳ್ಳುವುದರಿಂದ ಅವನ್ನು ಹಾಜರ್ಮಾಡಿದ ಮನುಷ್ಯನಿಗೆ ಕಷ್ಟವುಂಟಾಗುತ್ತದೆ. ಆದಕಾರಣ ಕೋರ್ಟ್‌ನವರು ನಕಲೊಂದನ್ನು ತಯಾರ್ಮಾಡಿಕೊಂಡು ಮೂಲ ದಸ್ತಾವೇಜನ್ನು ಕೂಡಲೇ ವಾಪಸ್ಮಾಡಲು ಏರ್ಪಾಟು ಮಾಡಬೇಕು.

ವಿಷಯಸಂಖ್ಯೆ 99.

ಮುಫಸಿಲ್ ಮ್ಯುನಿಸೀಫ್ ಕೋರ್ಟುಗಳಲ್ಲಿ ದಾವೆ ಹಿಡಿಯುವ ಮೊಬಲಗಿನ ಪರಿಮಿತಿಯನ್ನು ಹೆಚ್ಚಿಸುವುದು.

ಮಿ|| ಎಸ್. ನಂಜುಂಡಯ್ಯನವರು,
,, ಎಚ್. ಬೋರಣ್ಣನವರು, ಮತ್ತು
,, ಕೆ. ಮಹದೇವಪ್ಪನವರು.
ಹಾಸನ ತಾಲ್ಲೂಕು ಮತ್ತು
,, ಎಚ್. ವಿ. ರಂಗಸ್ವಾಮಿಯವರು,
ಹಾಸನ ಟೌನ್ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಮುಫಸಿಲ್ ಮ್ಯುನೀಫ್ ಕೋರ್ಟುಗಳಲ್ಲಿ ದಾವೆ ಹಿಡಿಯುವ ಮೊಬಲಿಗಿನ ಪರಿಮಿತಿಯನ್ನು 5,000 ರೂಪಾಯಿಗೆ ಹೆಚ್ಚಿಸಬೇಕು.

ವಿಷಯಸಂಖ್ಯೆ 100.

ತಾಲ್ಲೂಕು ಕಛೇರಿಯ ಜವಾನರ ಪೈಕಿ ಒಬ್ಬರನ್ನು ಕಾಯಮಾಗಿ ಬೆಂಚು ಕೋರ್ಟುಗಳಿಗೆ ಕೊಡಬಹುದು

ಮಿ|| ಎ. ಕೆಂಪಯ್ಯನವರು,
ಶ್ರೀರಂಗಪಟ್ಟಣ ಮ್ಯುನಿಸಿಪಾಲಿಟಿ

ಅರಿಕೆಯ ಸಾರಾಂಶ.—ತಾಲ್ಲೂಕು ಆಫೀಸಿನ ಸಿಬ್ಬಂದಿಯ ಪೈಕಿ ಒಬ್ಬ ಜವಾನನನ್ನು ಕಾಯಮಾಗಿ ಬೆಂಚು ಕೋರ್ಟುಗಳಿಗೆ ಕೊಡಬಹುದೆಂದು ಪ್ರಾರ್ಥಿಸಿದೆ.

ವಿಷಯಸಂಖ್ಯೆ 101.

ಬೆಂಚು ಕೋರ್ಟುಗಳಲ್ಲಿ ವ್ಯವಸ್ಥೆಯಾದ ಕಟ್ಟುಗಳನ್ನು ಸಂಬಂಧಪಟ್ಟ ತಾಲ್ಲೂಕು ರಿಕಾರ್ಡುಗಳೊಂದಿಗೆ ಇಟ್ಟಿರುವುದು.

ಮಿ|| ಪಿ. ಕೆಂಪಯ್ಯನವರು,
ಶ್ರೀರಂಗಪಟ್ಟಣ ಮುನ್ಸೀ||

ಅರಿಕೆಯ ಸಾರಾಂಶ.—ಬೆಂಚು ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಫೈಸಲ್ಮಾಡಿದ ಮೊಕದ್ದಮೆಗಳ ಕಟ್ಟುಗಳನ್ನೆಲ್ಲಾ ಆಯಾ ತಾಲ್ಲೂಕು ರಿಕಾರ್ಡುಗಳೊಂದಿಗೆ ಇಟ್ಟಿರುವಂತೆ ಹುಕುಂ ಮಾಡಬೇಕು

ವಿಷಯಸಂಖ್ಯೆ 102.

ಕೆಳ ಕೋರ್ಟುಗಳಿಗೆ ರವಾನಾಗು ಮಾಡಲ್ಪಟ್ಟ ಮೊಕದ್ದಮೆಗಳಲ್ಲಿ ಅಪೀಲು ದಾಖಲ್ಮಾಡುವ ಬಗ್ಗೆ ಕಟ್ಟಿದ್ದ ಫೀಜನ್ನು ವಾಪಸು ಕೊಡುವುದು.

ಮಿ|| ಬಿ. ಎಸ್. ರಾಘವಯ್ಯನವರು,
ಶಿವಮೊಗ್ಗ ಮುನ್ಸೀ||

ಅರಿಕೆಯ ಸಾರಾಂಶ.—ಕೆಳ ಕೋರ್ಟುಗಳು ಪೂರ್ತಿಯಾಗಿ ಸಾಹ್ಯೆವನ್ನು ತೆಗೆದುಕೊಳ್ಳದೆ ಫೂಟಾಗಿ ವ್ಯವಸ್ಥೆ ಮಾಡುವ ಭಾರೀ ಮೊಕದ್ದಮೆಗಳು ಅನೇಕ ವೇಳೆ ಅಪೀಲುಗಳಲ್ಲಿ ಯೋಗ್ಯತಾಪಹ್ಷಗಳ ಮೇಲೆ ಹೊಸ ವಿಚಾರಣೆಯ ಬಗ್ಗೆ ಕೆಳ ಕೋರ್ಟುಗಳಿಗೆ ರಿಮಾಂಡು ಮಾಡಲ್ಪಡುತ್ತವೆ. ಪ್ರಾಥಮಿಕ ಅಂಶಗಳ ಮೇಲೆಯೇ ಕೆಳಕೋರ್ಟುಗಳ ತೀರ್ಪುಗಳು ಮಾಡಲ್ಪಟ್ಟಿರುವು ವೆಂದು ಹೇಳಲ್ಪಡದಿರಬಹುದಾದ ಮೊಕದ್ದಮೆಗಳ ವಿಷಯದಲ್ಲಿಯೂ ಸಹ ರಿಮಾಂಡು ಆಗುವ ಅಪೀಲುಗಳನ್ನು ದಾಖಲ್ಮಾಡುವ ಬಗ್ಗೆ ಕಟ್ಟಿದ್ದ ಫೀಜನ್ನು ವಾಪಸು ಕೊಡಬೇಕು.

ವಿಷಯಸಂಖ್ಯೆ 103.

ದಾವಾ ಅರ್ಜಿಗಳಲ್ಲಿಯೂ ರಿಟ್ ಸ್ಟೇಟ್‌ಮೆಂಟುಗಳಲ್ಲಿಯೂ ಅಡ್ರೆಸ್ ಸ್ಟೇಟಮೆಂಟುಗಳನ್ನು ಕೊಡುವುದಕ್ಕೆ ಅಪ್ಪಣೆ.

ಮಿ|| ಬಿ. ಎಸ್. ರಾಘವಯ್ಯನವರು,
ಶಿವಮೊಗ್ಗ ಮುನ್ಸೀಸಿಪಾಲಿಟಿ.
,, ಅನಂತಯ್ಯನವರು,
,, ಸಿ. ಸುಬ್ಬರಾಯರವರು,
,, ಪಿ. ವೆಂಕಪ್ಪಯ್ಯನವರು,
ಶಿವಮೊಗ್ಗ ತಾಲ್ಲೂಕು.

ಅರಿಕೆಯ ಸಾರಾಂಶ.—ಈಚೆಗೆ ಸಾದರವಾದ ಸಮ್ಮಿಲರಿನ ಮೇರೆಗೂ ರೂಲ್ ಕಮಿಟಿಯವರು ರಚಿಸಿರುವ ನಿಬಂಧನೆಗಳ ಮೇರೆಗೂ ದಾವಾ ಅರ್ಜಿಗಳೊಂದಿಗೂ ದರಖಾಸ್ತುಗಳೊಂದಿಗೂ ಸಂದರ್ಭಾನುಸಾರ ವಾದಿಗಳ ಅಥವಾ ಪ್ರತಿವಾದಿಗಳ ಅಡ್ರೆಸ್ ಸ್ಟೇಟ್ಮೆಂಟುಗಳನ್ನು ಕಳುಹಿಸಬೇಕಾಗಿದೆ. ಅಡ್ರೆಸ್ ಸ್ಟೇಟ್ಮೆಂಟುಗಳನ್ನು ಪ್ರತ್ಯೇಕವಾದ ಹಾಳಗಳಮೇಲೆ ಬರೆಯಬೇಕೆಂದು ಕೋರ್ಟುಗಳವರು ನಿರ್ಬಂಧಪಡಿಸುತ್ತಾರೆ. ಇದು ಅನವಶ್ಯಕವಾದ ಪದ್ಧತಿಯಾಗಿರುವುದರಿಂದ, ದಾವಾ ಅರ್ಜಿಗಳಲ್ಲಿಯೂ ರಿಟನ್ ಸ್ಟೇಟ್‌ಮೆಂಟುಗಳಲ್ಲಿಯೂ ಕಕ್ಷಿಗಾರರ ಅಡ್ರೆಸ್ಸುಗಳನ್ನೂ ಸೇರಿಸುವುದಕ್ಕೆ ಅನುಕೂಲಿಸುವಂತೆ ನಿಬಂಧನೆಯನ್ನು ಬದಲಾಯಿಸಬೇಕು.

ವಿಷಯಸಂಖ್ಯೆ 104.

ಅಚ್ಚು ಹಾಕಿಸುವ ತರ್ಜುಮೆಮಾಡಿಸುವ ಮತ್ತು ಕಾಪಿ (ನಕಲು)ಮಾಡಿಸುವ ಖರ್ಚುಗಳನ್ನು ತಗ್ಗಿಸಬೇಕು.

ವಿ।। ಪಿ. ಕೃಷ್ಣಮೂರ್ತಿರಾಯರು, ಲಾ ಅಸೋಸಿಯೇರ್ಷ್, ಬೆಂಗಳೂರು

ವಿಷಯಸಂಖ್ಯೆ 105.

ಗೌರವಸ್ಥರಾದ ಜನರಲ್ಲಿ ಅಕಸ್ಮಾತ್ತಾಗಿ ನಿಕಲ್ ಫೋಟೂ ನಾಣ್ಯಗಳು ದೊರೆತ ಮಾತ್ರಕ್ಕೆ ಅವರ ಮೇಲೆ ಕ್ರಿಮಿನಲ್ ನಡವಳಿಕೆಗಳನ್ನು ನಡಿಸಕೂಡದು.

ವಿ।। ವೀರಭದ್ರಪ್ಪನವರು, ಚಿತ್ರದುರ್ಗ ತಾಲ್ಲೂಕು.

ವಿಷಯಸಂಖ್ಯೆ 106

ಮೋಸಕರವಾಗಿ ಸ್ವತ್ತುಗಳ ಮೇಲೆ ಹಣ ಸಾಲಾ ತೆಗೆಯುವವರನ್ನು ದಂಡನೆಗೆ ಗುರಿಪಡಿಸುವುದು.

ವಿ।। ಅಬ್ದುಲ್ ನಬಿಖಾನ್ ಸಾಹೇಬರವರು, ತುಮಕೂರು ಮುನ್ಸೀ।।

ಅರಿಕೆಯ ಸಾರಾಂಶ.—ಚೀಫ್‌ಕೋರ್ಟ್‌ನಲ್ಲಿ ಅಚ್ಚು ಹಾಕಿಸುವ ಮತ್ತು ತರ್ಜುಮೆ ಮಾಡಿಸುವ ಬಗ್ಗೆ ವಸೂಲ್ಮಾಡುವ ಖರ್ಚುಗಳನ್ನೂ ಕಾಪಿಗಳ ಬಗ್ಗೆ ವಸೂಲ್ಮಾಡುವ ಖರ್ಚುಗಳನ್ನು ಎಲ್ಲಾ ಕಡೆಗಳಲ್ಲಿಯೂ ಕಡವೆ ಮಾಡ ಬೇಕೆಂದು ಪ್ರಾರ್ಥಿಸಿದೆ.

ಅರಿಕೆಯ ಸಾರಾಂಶ.—ಚಾಲ್ತಿ ಉಪಯೋಗದಲ್ಲಿರುವ ನಿಕಲ್ ನಾಣ್ಯಗಳಲ್ಲಿ ಅಕಸ್ಮಿಕವಾಗಿ ಅನೇಕ ಫೋಟೂ ನಿಕಲ್ ನಾಣ್ಯಗಳು ಬೆರೆತುಹೋಗಿವೆ. ಪ್ರತಿದಿನ ಪ್ರತಿ ವರ್ತಕರ ಕೈಸೇರುವ ಅಧಿಕ ಸಂಖ್ಯೆಯ ನಾಣ್ಯಗಳಲ್ಲಿ ಸರಿಯಾದವುಗಳನ್ನೂ ಸುಳ್ಳು ನಾಣ್ಯಗಳನ್ನೂ ವಿಂಗಡಿಸುವುದು ಸಾಧ್ಯವಿಲ್ಲ. ಪ್ರಕೃತದಲ್ಲಿ ಪೊಲೀಸಿನವರು ಗೌರವಸ್ಥರನ್ನು ಫೋಟೂ ನಾಣ್ಯಗಳು ಅವರ ವಶದಲ್ಲಿರುವುವೆಂಬ ಸಬಬಿನಮೇಲೆ ವಸ್ತಗಿರಿಮಾಡಿ ತೊಂದರೆಪಡಿಸುತ್ತಿದ್ದಾರೆ. ಆದ ಕಾರಣ ಇನ್ನು ಮುಂದೆ ಗೌರವಸ್ಥರಾದ ಜನರ ವಶದಲ್ಲಿ ಫೋಟೂ ನಿಕಲ್ ನಾಣ್ಯಗಳು ದೊರೆತಲ್ಲಿ ಅವರನ್ನು ತೊಂದರೆ ಮಾಡದೆ ಸುಳ್ಳು ನಾಣ್ಯಗಳನ್ನು ಮಾತ್ರ ಕತ್ತರಿಸಿ ಬಿಡತಕ್ಕದ್ದೆಂದು ಹುಕುಂ ಆಪ್ಪಣೆಯಾಗಬೇಕು.

ಅರಿಕೆಯ ಸಾರಾಂಶ.—ಒಂದೇ ಸ್ವತ್ತನ್ನು ನಾನಾ ಜನಗಳಿಗೆ ಭೋಗ್ಯ, ಆಧಾರ ವೈಗೈರೆ ಮಾಡುವ ಪದ್ಧತಿಯು ಜನರಲ್ಲಿ ರೂಢಿಯಾಗಿದೆ. ಸಬ್ ರಿಜಿಸ್ಟ್ರಾರ್ ಆಫೀಸುಗಳ ರಿಜಿಸ್ಟರುಗಳಲ್ಲಿ ಹುಡುಕಿದ ವಿನಾ ಇದು ಹೊರಪಡುವುದಿಲ್ಲ. ಇದರಿಂದ ವಿಳಂಬ ಸಂಸ್ಥೆಗೆ ಕಾರಣವಾಗುತ್ತದೆ ಮತ್ತು ಸದಾ ಬೇಸರಿಕೆಯಿಲ್ಲದೆ ಈ ಕೆಲಸವನ್ನು ಮಾಡುವುದು ಎಲ್ಲರಿಗೂ ಸಾಧ್ಯವಿಲ್ಲ. ಆದಕಾರಣ ಒಂದೇ ಸ್ವತ್ತನ್ನು ಮೋಸದಿಂದ ಒಂದುಸಾರಿಗಿಂತ ಹೆಚ್ಚಾಗಿ ಆಧಾರ, ಭೋಗ್ಯ ವೈಗೈರೆ ಮಾಡತಕ್ಕವರನ್ನು ದಂಡನೆಗೆ ಗುರಿಪಡಿಸತಕ್ಕದ್ದೆಂದು ಪ್ರಾರ್ಥಿಸಿದೆ.

ರಕ್ಷಣೆ—(ಪೊಲೀಸು).

(ವಿಷಯಸಂಖ್ಯೆ 107ರಿಂದ 111ರ ವರೆಗೆ).

ವಿಷಯಸಂಖ್ಯೆ 107.

ಪೋಲೀಸ್ ಸಿಬ್ಬಂದಿಯ ಕಾರ್ಯ ಶ್ರದ್ಧೆಯನ್ನು ಮೇಲ್ಪಡಿಸುವುದು.
ವಿ|| ಎಚ್. ನಾರಣಯ್ಯನವರು,
ಚಿಕ್ಕಬಳ್ಳಾಪುರ ತಾಲ್ಲೂಕು.

ಅರಿಕೆಯ ಸಾರಾಂಶ.—ಪೊಲೀಸಿನವರು ತಮ್ಮ ಕರ್ತವ್ಯದಲ್ಲಿ ಸರಿಯಾದ ಆಸಕ್ತ್ಯಯನ್ನು ತೋರಿಸುವಂತೆ ಅವರ ನಡತೆಯನ್ನು ಮೇಲ್ಪಡಿಸುವ ವಿಚಾರದಲ್ಲಿ ಈ ಕೆಳಗೆ ಕಂಡ ಸಲಹೆಗಳನ್ನು ಪರ್ಯಾಲೋಚಿಸತಕ್ಕದ್ದೆಂದು ಪ್ರಾರ್ಥಿಸಿದೆ :—

(i) ಸಂಸ್ಥಾನದಲ್ಲಿ ಸದ್ವಂಶಕ್ಕೆ ಸೇರಿದವರನ್ನು, ಅವರ ವಿದ್ಯಾಸಂಬಂಧವಾದ ಯೋಗ್ಯತೆಗಳು ಗೊತ್ತುಮಾಡಿರುವ ಪ್ರಮಾಣಕ್ಕಿಂತಲೂ ಕಮ್ಮಿಯಾಗಿದ್ದಾಗ್ಯೂ, ಇನ್‌ಸ್ಪೆಕ್ಟರುಗಳನ್ನಾಗಿಯೂ ಸಬ್ ಇನ್‌ಸ್ಪೆಕ್ಟರುಗಳನ್ನಾಗಿಯೂ ನೇಮಿಸಬೇಕು.

(ii) ಲಂಚ ರುಷುವತ್ತುಗಳಿಗೊಳಗಾಗಲು ಮನಸ್ಸು ಹುಟ್ಟಿದಂತೆ ಇನ್‌ಸ್ಪೆಕ್ಟರುಗಳ ಮತ್ತು ಇತರರ ಸಂಬಳಗಳನ್ನೂ ಬತ್ತಿಯ ಸಂಭಾವನೆಗಳನ್ನೂ ಹೆಚ್ಚಿಸಬೇಕು.

(iii) ಪೊಲೀಸ್ ಆಫೀಸರುಗಳು ತಕ್ಸೀರುಗಳನ್ನು ಕಂಡು ಹಿಡಿಯುವುದರಲ್ಲಿ ವಿಶೇಷ ಕೌಶಲ್ಯವನ್ನು ತೋರಿಸಿದಲ್ಲಿ, ಅವರ ಮೆಹನತ್ತು ಮಾಡಿದ್ದನ್ನು ಸುಮ್ಮನೆ ರಿಕಾರ್ಡು ಮೂಲಕ ತೋರ್ಪಡಿಸುವುದಕ್ಕೆ ಬದಲಾಗಿ ಅವರಿಗೆ ಕೂಡಲೇ ಬಡ್ತಿಗಳನ್ನೂ ದ್ವಿಗುಣ ಬಡ್ತಿಗಳನ್ನೂ ಸಹ ಕೊಡಬೇಕು.

ವಿಷಯಸಂಖ್ಯೆ 108.

ವಿಚಾರಣೆಯ ಮುಖ್ಯಸ್ಥಳಗಳನ್ನು ರದ್ದುಮಾಡುವುದು.
ವಿ|| ಸಿ. ಕೃಷ್ಣ ಮೂರ್ತಿಯವರು,
ಲಾ ಅಸೊಸಿಯೇಷನ್ ಬೆಂಗಳೂರು.

ಅರಿಕೆಯ ಸಾರಾಂಶ.—ವಿಚಾರಣೆಯ ಮುಖ್ಯ ಸ್ಥಳಗಳ ಪದ್ಧತಿಯನ್ನು ರದ್ದುಮಾಡುವ ವಿಷಯವನ್ನು ಪರ್ಯಾಲೋಚಿಸಬೇಕು.

ವಿಷಯಸಂಖ್ಯೆ 109.

ಮೈಸೂರಿನಲ್ಲಿ ನಡೆದ ತಕ್ಸೀರು ಗಳಿಗಾಗಿ ಬ್ರಿಟಿಷ್ ಇಂಡಿಯಾದಲ್ಲಿ ನವ ಜನರನ್ನು ದಸ್ತಗಿರಿ ಮಾಡಲು ಮೈಸೂರಿನ ಪೋಲೀಸಿನವರಿಗೆ ಅಧಿಕಾರ ಕೊಡುವುದು.

ಮಿ|| ಸೂರಪ್ಪನವರು,
,, ನರಸಿಂಹಯ್ಯನವರು,
ಸೀರಾ ತಾಲ್ಲೂಕು.
,, ಎಸ್. ನಾರಣಪ್ಪನವರು,
ಸೀರಾ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಬ್ರಿಟಿಷ್ ಪೊಲೀಸಿನವರು ಮೈಸೂರು ಸೀಮೆಯಲ್ಲಿ ಜನರನ್ನು ದಸ್ತಗಿರಿ ಮಾಡಿ ಬ್ರಿಟಿಷ್ ಸೀಮೆಗೆ ತೆಗೆದುಕೊಂಡುಹೋಗುವಂತೆಯೇ, ಬ್ರಿಟಿಷ್ ಇಂಡಿಯಾದಲ್ಲಿ ಜನರನ್ನು ದಸ್ತಗಿರಿ ಮಾಡಿ ಮೈಸೂರು ಸಂಸ್ಥಾನಕ್ಕೆ ತರುವಂತೆ ಮೈಸೂರು ಪೊಲೀಸಿನವರಿಗೆ ಅಧಿಕಾರ ಕೊಡಬೇಕು.

ವಿಷಯಸಂಖ್ಯೆ 110

ವಾರಂಟಿಲ್ಲದೆ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ಅಪರಾಧಿಯ ಕೈಫೇತನ್ನೂ ಸಾಕ್ಷಿಗಳ ಕೈಫೇತನ್ನೂ ಪೊಲೀಸಿನವರು ಸರ್ಕಾರದವರಿಂದ ಮೊಕರರ್ರಾಡಲ್ಪಡುವ ಪಂಚಾಯಿತರ ರೂಬರೂ ತೆಗೆದುಕೊಳ್ಳುವುದು.

ಮಿ|| ಫ್ರಾಂಕ್. ವಿ. ಗೋಪಾಲಯ್ಯನವರು,
ಹೊಳಲ್ಕೆರೆ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ವಾರಂಟಿಲ್ಲದೆ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ಪೋಲೀಸಿನವರು ಅಪರಾಧಿಯ ಮೇಲೆ ತಪ್ಪು ಸಾಬೀತಾಗಬಹುದಾದಂಥಾ ಹೇಳಿಕೆಗಳನ್ನು ಅಪರಾಧಿಯಿಂದಲೂ ಸಾಕ್ಷಿಗಳಿಂದಲೂ ಬಲಾತ್ಕಾರದಿಂದ ತೆಗೆದುಕೊಳ್ಳುವುದು ವಾಡಿಕೆಯಾಗಿದೆ. ಹಾಗೆ ಹೆದರಿಕೆ, ಪ್ರೇರೇಪಣೆ ಮೊದಲಾದ ಮಾರ್ಗಗಳಿಂದ ಹೇಳಿಕೆಗಳನ್ನು ತೆಗೆದುಕೊಂಡಂಥಾ ಮೊಕದ್ದಮೆಗಳಲ್ಲಿ ಮ್ಯಾಜಿಸ್ಟ್ರೇಟುಗಳು ಸಾಕಾದ ರುಜುವಾತಿಲ್ಲವೆಂತ ಅಪರಾಧಿಗಳನ್ನು ಬಹಳಮಟ್ಟಿಗೆ ಬಿಟ್ಟು ಬಿಡುತ್ತಾರೆ. ಮೊಕದ್ದಮೆಯು ನಡೆಯುತ್ತಿರುವಾಗ ಕೋರ್ಟುಗಳಿಗೆ ಹೋಗುವುದಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮವೂ, ಸರ್ಕಾರೀ ನೌಕರರಿಗೆ ಪ್ರಯಾಣದ ಭತ್ಯಕ್ಕಾಗಿ ಸರ್ಕಾರದವರು ಕೊಡಬೇಕಾದ ಹಣವೂ, ಮತ್ತು ಕೆಲವು ವೇಳೆ ಗೌರವಸ್ಥರಾದ ಜನಗಳಿಗೆ ಉಂಟಾಗತಕ್ಕ ಅಮಾನವೂ, ಇವೆಲ್ಲಾ ಬಹಳ ಭಾರಿಯಾಗಿರುತ್ತವೆ. ಈ ಅನನುಕೂಲತೆಗಳನ್ನೆಲ್ಲಾ ತಪ್ಪಿಸುವ್ರದಕ್ಕಾಗಿ ಪೋಲೀಸಿನವರು ಅಪರಾಧಿಗಳ ಮತ್ತು ಸಾಕ್ಷಿಗಳ ಕೈಫೇತನ್ನು ಸರ್ಕಾರದವರು ಮೊಕರರ್ರಾಡಬಹುದಾದ ಪಂಚಾಯಿತರ ಸಮಕ್ಷಮ ಪ್ರಥಮತಃ ತೆಗೆದುಕೊಳ್ಳುವಂತೆ ಮಾಡಬೇಕು.

ವಿಷಯಸಂಖ್ಯೆ 111

ಬಂದೂಕು ಲೈಸೆನ್ಸಿಗಾಗಿ ಕೊಡುವ ಅರ್ಜಿಗಳ ನಮೂನೆಗಳನ್ನು ಪ್ರಿಂಟ್ ಮಾಡಿಸಿಕೊಡುವುದು.

ವಿ॥ ಸೂರಪ್ಪನವರು,
,, ನರಸಿಂಹಯ್ಯನವರು,
ಸೀರ್ಯ ತಾಲ್ಲೂಕು:
,, ಎಸ್. ನಾರಾಯಪ್ಪನವರು,
ಸೀರ್ಯ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಬಂದೂಕು ಲೈಸೆನ್ಸುಗಳಿಗಾಗಿ ಕೊಡುವ ಅರ್ಜಿಗಳ ನಮೂನೆಗಳನ್ನು ಎಕ್ಸೈಜ್ ಕರಾರು ಕಾಗದಗಳನ್ನು ಪ್ರಿಂಟ್ ಮಾಡಿಸಿ ಖರೀದಿಗೆ ಕೊಡುತ್ತಿರುವ ಬೇರೆಗೆ ಪ್ರಿಂಟ್‌ಮಾಡಿಸಿ ಮಾರುವಂತೆ ಹುಕುಂ ಆಗಬೇಕು.

ರಕ್ಷಣೆ—(ಜನಾರೋಗ್ಯ ಮತ್ತು ಸ್ಥಳಾರೋಗ್ಯ).

(ವಿಷಯಸಂಖ್ಯೆ 112ರಿಂದ 115ರ ವರೆಗೆ).

ವಿಷಯಸಂಖ್ಯೆ 112

ಮೈಸೂರು ಆಯುರ್ವೇದೀಯ ಕಾಲೇಜಿನಲ್ಲಿ ಕಾರ್ಯತಃ ಚಿಕಿತ್ಸೆ ಮಾಡುವುದರಲ್ಲಿ ತರಬೇತನ್ನು ಕೊಡುವುದು.

ವಿ॥ ಆರ್. ಗೋಪಾಲಸ್ವಾಮಿ ಅಯ್ಯಂಗಾರ್ಯರವರು,
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಮೈಸೂರು ಆಯುರ್ವೇದೀಯ ಕಾಲೇಜಿನಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೆ ಕಾರ್ಯತಃ ಚಿಕಿತ್ಸೆ ಮಾಡುವುದರಲ್ಲಿ ತರಬೇತಾಗಲು ಅವಕಾಶವಿರುವಂತೆ ಅದನ್ನು ಅಭಿವೃದ್ಧಿಪಡಿಸಬೇಕು ಮತ್ತು ಸದರೀ ಕಾಲೇಜಿಗೂ ಆಸ್ಪತ್ರೆಗೂ ಇನ್ನೂ ಉತ್ತಮವಾದ ಕಟ್ಟಡವನ್ನು ಒದಗಿಸಿಯುನಾನಿ ಭಾಗವನ್ನೂ ವಿಸ್ತರಿಸಬೇಕು.

ವಿಷಯಸಂಖ್ಯೆ 113

ಆಯುರ್ವೇದೀಯ ಮತ್ತು ಯು
ನಾನಿ ಪದ್ಧತಿಗಳ ಔಷಧಗಳ ವಿಷ
ಯದಲ್ಲಿ ಪರಿಶೋಧನೆಗಳನ್ನು ನಡಿಸಿ
ವುಗಳನ್ನು ಬಂದು ಕ್ರಮಕ್ಕೆ ತ
ರುವುದು.

ಶ್ರೀ ಕೆ. ಟಿ. ಕೀಷಯ್ಯನವರು,
ಬೇಲೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಆಯುರ್ವೇದೀಯ ಮತ್ತು ಯುನಾನಿ ಪದ್ಧತಿಗಳ ಔಷಧಗಳ ವಿಷಯದಲ್ಲಿ ಪರಿಶೋಧನೆಗಳನ್ನು ನಡಿಸಿ, ಅವುಗಳನ್ನು ಕ್ರಮಕ್ಕೆ ತರಲು, ಸದರೀ ಪದ್ಧತಿಗಳ ಪ್ರಾಮುಖ್ಯತೆ ಮತ್ತು ಗೌರವಕ್ಕೆ ಅನುಗುಣವಾಗಿ ಪ್ರೋತ್ಸಾಹವನ್ನು ಕೊಡುವುದು.

ವಿಷಯಸಂಖ್ಯೆ 114

ಬಡವರೆಂತ ಸರ್ಟಿಫಿಕೇಟ್ ಪಡ
ಂಥಾ ರೋಗಿಗಳಿಗೆ ಅಸಿಸ್ಟೆಂಟ್
ರ್ಜನ್‌ಗಳು ಮುಫತ್ತಾಗಿ ಹೋಗಿ
ಕಿತ್ಸೆ ಮಾಡುವುದು.

ಶ್ರೀ ಗೋಪಾಲಯ್ಯನವರು,
ಹೊಳಲ್ಕೆರೆ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಲೋಕಲ್‌ಫಂಡ್ ಆಸ್ಪತ್ರೆಯ ಚಾರ್ಜ್‌ನಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜರ್ಜಗಳನ್ನು ರೋಗಿಗಳಲ್ಲಿಗೆ ಹೋಗಿ ಚಿಕಿತ್ಸೆ ಮಾಡಬೇಕೆಂತ ಕೇಳಿದರೆ ಫೀಜನ್ನು ಕೇಳುತ್ತಾರೆ. ವಿಧಾಯಕವಾದ ಫೀಜನ್ನು ಕೊಡುವುದಕ್ಕೆ ಬಡಜನರಿಗೆ ಕಷ್ಟವಾಗುವುದರಿಂದ, ಲೋಕಲ್ ಬೋರ್ಡಿನ ಪ್ರೆಸಿಡೆಂಟರಿಂದಾಗಲೀ ವೈಸ್ ಪ್ರೆಸಿಡೆಂಟರಿಂದಾಗಲೀ ಬಡವರೆಂತ ಸರ್ಟಿಫಿಕೇಟ್ ಹೊಂದಿದ ಜನರಿಗೆ ಮುಫತ್ತಾಗಿ ಹೋಗಿ ಚಿಕಿತ್ಸೆಮಾಡಬೇಕೆಂತ ಹುಕುಂ ಮಾಡಬೇಕು.

ವಿಷಯಸಂಖ್ಯೆ 115

ಹಳ್ಳಿಗಳಲ್ಲಿ ಶಿಡುಬು ಹಾಕಿಸುವು
ನ್ನು ನಿರ್ಬಂಧ ಮಾಡುವುದು.

ಶ್ರೀ ಎಚ್. ಎಸ್. ಗುಂಡಪ್ಪನವರು,
, ಪಟೇಲ್ ಬಾಲಿಗೌಡರು,
ಕುಣಿಗಲ್ ತಾಲ್ಲೂಕು.

ಅರಿಕೆಯ ಸಾರಾಂಶ.—ಸಂಸ್ಥಾನದ ಹಳ್ಳಿಗಳಲ್ಲೆಲ್ಲಾ ನಿರ್ಬಂಧದಿಂದ ಶಿಡುಬು ಹಾಕುವ ಕ್ರಮವನ್ನು ಜಾರೀಗೆ ತರಬೇಕು.

ರಕ್ಷಣೆ.—(ಬಂದೀಖಾನೆಗಳು.)

(ವಿಷಯಸಂಖ್ಯೆ 116ರಿಂದ 117ರ ವರೆಗೆ.)

ವಿಷಯಸಂಖ್ಯೆ 116

ಖೈದಿಗಳಿಗೆ ಸಾಕಾದಷ್ಟು ಸುಖಕರವಾದ ಏರ್ಪಾಡುಗಳು.

ಮಿ|| ಡಿ. ಎಸ್. ಮಲ್ಲಪ್ಪನವರು,
ಮತ್ತು
,, ಚಿಕ್ಕತಿಮ್ಮೇಗೌಡರು,
ತಿಪಟೂರು ತಾಲ್ಲೂಕು.

ಅರಿಕೆಯು ಸಾರಾಂಶ.—ಖೈದಿಗಳಿಗೆ ಉಂಟುಮಾಡಿರುವ ಅನುಕೂಲತೆಯು ಸಾಲದು. ಈ ವಿಷಯದಲ್ಲಿ ತಕ್ಕ ಸಲಹೆಗಳನ್ನು ಕೊಡುವುದಕ್ಕೆ ಒಂದು ಕಮಿಟಿಯನ್ನು ಏರ್ಪಾಡು ಮಾಡಬೇಕು.

ವಿಷಯಸಂಖ್ಯೆ 117

ದಸ್ತಗಿರಿ ಮಾಡಿರುವ ಜನರನ್ನು ಮೇಜಿಸ್ಟ್ರೀರಿಯಲ್ ಯಾ ಡಿಸ್ಟ್ರಿಕ್ಟ್ ಲಾಕಪ್ಪುಗಳಲ್ಲಿ ಇಟ್ಟಿರುವುದು.

ಮಿ|| ಎಸ್. ಎಸ್. ನಂಜುಂಡಯ್ಯನವರು,
,, ಎಚ್. ಬೋರಣ್ಣನವರು,
,, ಕ. ಮಹದೇವಪ್ಪನವರು,
ಹಾಸನ ತಾಲ್ಲೂಕು.
,, ಎಚ್. ವಿ. ರಂಗಸ್ವಾಮಿಯವರು, ಹಾಸನ ಟೌನ್ ಮ್ಯುನಿಸಿಪಾಲಿಟಿ.

ಅರಿಕೆಯು ಸಾರಾಂಶ.—ದಸ್ತಗಿರಿ ಮಾಡಿದ ಜನರನ್ನು ಪೊಲೀಸಿನವರ ವಶದಲ್ಲಿಟ್ಟರೆ ಅನೇಕಾವರ್ತಿ ಲಂಚ ರುಷುವತ್ತಿಗೂ, ಹಿಂಸೆಗಳಿಗೂ ತಕ್ಕಷ್ಟು ಜಾಗರೂಕತೆಯಿಲ್ಲದೆ ಬಲಾತ್ಕಾರದಿಂದ ತಪ್ಪನ್ನು ಒಪ್ಪಿಕೊಳ್ಳುವುದಕ್ಕೂ ಕಾರಣವಾಗುತ್ತದೆ. ಅಪರಾಧಿಯನ್ನು ಹಾಜರುಪಡಿಸಿಕೊಳ್ಳುವುದಕ್ಕೇ ಶಿವಾಯಿ ಮತ್ತೆ ಯಾವ ಅನ್ಯಾಯವಾದ ಮತ್ತು ಅನುಚಿತವಾದ ಉದ್ದೇಶಗಳಿಗಾಗಿ ಇರಿಸಿಕೊಳ್ಳಬೇಕಾದ್ದಿಲ್ಲವಾದ್ದರಿಂದ ಅವರನ್ನು ಪೊಲೀಸಿನವರ ವಶದಲ್ಲಿಡುವುದಕ್ಕೆ ಬದಲಾಗಿ ಮೆಜೆಸ್ಟ್ರೀರಿಯಲ್ ಯಾ ಡಿಸ್ಟ್ರಿಕ್ಟ್ ಲಾಕಪ್ಪುಗಳಲ್ಲಿ ಇಟ್ಟಿರುವಂತೆಈಗಣ ಕಾನೂನುಗಳನ್ನು ತಿದ್ದುಪಡಿಸಬೇಕು.

ಅಭಿವೃದ್ಧಿಕಾರ್ಯ—ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿ.—(ಎಕನಾಮಿಕ್ ಕಾರ್ಫರೆನ್ಸ್.)

ವಿಷಯಸಂಖ್ಯೆ 118.

ಗ್ರಾಮಗಳಲ್ಲಿ ಧಾನ್ಯಗಳ ದಾಸ್ತಾನುಗಳನ್ನು ಏರ್ಪಡಿಸುವುದು.

ಮಿ॥ ಸಿ. ಬಿ. ಗೋವಿಂದಾಯರವರು, ಕೋಲಾರ ಡಿಸ್ಟ್ರಿಕ್ಟ್ ಬೋರ್ಡ್.

ಅರಿಕೆಯ ಸಾರಾಂಶ.—ಗ್ರಾಮಾಂತರಗಳಲ್ಲಿ ಧಾನ್ಯಗಳ ದಾಸ್ತಾನುಗಳನ್ನು ಏರ್ಪಡಿಸಲು ಸರ್ಕಾರದವರು ದಯವಿಟ್ಟು ಏರ್ಪಾಡುಗಳನ್ನು ಮಾಡಬೇಕು. ಕ್ಷಾಮ ಒಂದರ ಅವಕ್ಕೆ ತಕ್ಕ ಪರಿಹಾರವಾಗಿ ಕನಿಷ್ಠ ಪಕ್ಷ ಐದು ವರ್ಷದ ಮೆಟ್ಟಿಗಾದರೂ ಸಾಕಾಗುವಷ್ಟು ಧಾನ್ಯವನ್ನು ಪ್ರತಿಯೊಂದು ಗ್ರಾಮದಲ್ಲಿಯೂ ದಾಸ್ತಾನವಾಗಿ ಇಟ್ಟಿರಬೇಕೆಂಬುದೇ, ಇವರ ಉದ್ದೇಶ.

ಅಭಿವೃದ್ಧಿ—ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿ—(ಕೈಗಾರಿಕೆಗಳು ಮತ್ತು ವಾಣಿಜ್ಯ).

(ವಿಷಯಸಂಖ್ಯೆ 119 ರಿಂದ 124ರ ವರೆಗೆ).

ವಿಷಯಸಂಖ್ಯೆ 119.

ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಒಂದೆರಡು ಭಾರೀ ಕೈಗಾರಿಕೆಗಳನ್ನು ಸ್ಥಾಪಿಸುವುದು.

ಮಿ॥ ಕೆ. ಟಿ. ಕೇಷಯ್ಯನವರು, ಬೇಲೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಆಯಾ ಸ್ಥಳದ ಅವಶ್ಯಕತೆಗಳಿಗೆ ಗಮನಕೊಟ್ಟು—ಅಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿ ಎಲಬನ್ನು ಪುಡಿಮಾಡುವದಲ್ಲದೆ ಗಾಣದ ಹಿಂಡಿಯನ್ನೂ ತಯಾರಿಸುವ ಕಾರ್ಖಾನೆ—ಒಂದೆರಡು ಭಾರೀ ಕೈಗಾರಿಕೆಯ ಉದ್ಯೋಗಗಳನ್ನು ಸ್ಥಾಪಿಸುವ ಬಗ್ಗೆ ಕೈಗಾರಿಕೆಗಳ ಮತ್ತು ವಾಣಿಜ್ಯ ಇಲಾಖೆಯವರು ಸರ್ವ ಪ್ರಯತ್ನವನ್ನೂ ಮಾಡಬೇಕು. ಈಗಣ ಪದ್ಧತಿಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ವಿಷಯಸಂಖ್ಯೆ 120.

ಜಮ್ಮಿ ಅಡಮಾನದ ಬ್ಯಾಂಕುಗಳನ್ನು ಶೀಘ್ರದಲ್ಲಿ ಸ್ಥಾಪಿಸುವುದು.

ಮಿ॥ ಎಚ್. ಕೃಷ್ಣರಾಯರವರು.
ಕೊಪ್ಪ ತಾಲ್ಲೂಕು.
,, ಎಚ್. ಎಸ್. ಗಣೇಕರಾಯರು,
ಮಲೆನಾಡು ಜಮ್ಮಿದಾರರ ಸಂಘ;
ಹೊಸಕೊಪ್ಪ.
ಮಿ॥ ಸಿ. ವಾಸುದೇವರಾಯರು,
ಚಿಕ್ಕಮಗಳೂರು ತಾಲ್ಲೂಕು.

ಅರಿಕೆಯ ಸಾರಾಂಶ.— (a) ಮಲೆನಾಡಿನಲ್ಲಿ ಶೀಘ್ರವಾಗಿ ಜಮ್ಮಿ ಅಡಮಾನದ ಬ್ಯಾಂಕುಗಳನ್ನು ಸ್ಥಾಪಿಸುವೆಂತೆ ಹುಕುಂ ಅಪ್ಪಣೆಯಾಗಬೇಕು.

(b) ವ್ಯವಸಾಯ ಕಾರ್ಯಗಳಿಗಾಗಿಯೂ ಆದೇ ಕಾರ್ಯಗಳಿಗಾಗಿಯೇ ಹಿಂದೆ ತೆಗೆದ ಸಾಲ ತೀರಿಸುವುದಕ್ಕಾಗಿಯೂ, ಸಾಲಗಳನ್ನು ತೆಗೆಯುವುದು ಸಂಸ್ಥಾನದ ಜಮ್ಮಿದಾರರಿಗೆ ಬಹು ಕಷ್ಟವಾಗಿದೆ. ಸಂಸ್ಥಾನದ ಸಾಹುಕಾರರಿಂದಲೂ ಹೊರಗಡೆಯ ಸಾಹುಕಾರರಿಂದಲೂ ಅವರಿಗೆ ದೊರೆಯುವ ಸಾಲಗಳ ಮೇಲೆ ಸಾಲೀಯಾನಾ ಸೇಕಡ 18 ರಿಂದ 36 ರ ವರೆಗೂ ಬಡ್ಡಿ ತೆರಬೇಕಾಗಿರುವ ಕಾರಣ ಅಂಥಾ ಸಾಲಗಳಿಂದ ಮಿತವ್ಯಯದ ಆಚರಣೆಗೆ ಅವಕಾಶವಿರುವುದಿಲ್ಲ. ಈ ಕಾರಣದಿಂದ ವ್ಯವಸಾಯಗಾರನಿಗೆ ತನ್ನ ಕಸಬಿನಲ್ಲಿ ನಷ್ಟ ಸಿಕುವುದು ಅಪೂರ್ವ. ಜಮ್ಮಿ ಅಡಮಾನದ ಬ್ಯಾಂಕುಗಳ ಮತ್ತು ಪರಸ್ಪರ ಸಹಾಯ ಸಂಘಗಳ ಆಡಳಿತದ ವಿಚಾರಕ್ಕಾಗಿ ನಿರ್ಮಿಟ್ಟಿದ್ದ ಕಮಿಟಿಯವರ ರಿಪೋರ್ಟು ಇನ್ನೂ ಪ್ರಕಟಿಸಲ್ಪಟ್ಟಿಲ್ಲ. ಆದಕಾರಣ ವ್ಯವಸಾಯಗಾರರ ಪ್ರಯೋಜನಕ್ಕಾಗಿ ಪ್ರತಿಯೊಂದು ತಿಸ್ಟ್ರಿಕ್ಟಿನಲ್ಲಿಯೂ ಜಮ್ಮಿಅಡಮಾನದ ಬ್ಯಾಂಕನ್ನು ಸ್ಥಾಪಿಸಬೇಕೆಂದು ಪ್ರಾರ್ಥಿಸಿದೆ.

ವಿಷಯಸಂಖ್ಯೆ 121.

ಹಸನಾದ ಉಣ್ಣೆಯನ್ನೂ ಬಟ್ಟೆಗಳನ್ನೂ ತಯಾರಿಸಲು ಒಂದು ಕೈಗಾರಿಕೆಯನ್ನು ಉಪಕ್ರಮಿಸುವುದು

ಮಿ॥ ಸಿ. ವಾಸುದೇವರಾಯರು,
ಚಿಕ್ಕಮಗಳೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಕಂಬಳಿಗಳನ್ನು ಮಾಡುವುದಕ್ಕೆ ಅವಶ್ಯಕವಾದ ಸ್ವಲ್ಪ ಭಾಗದ ಉಣ್ಣೆ ಶಿವಾಯಿ ಬಾಕಿ ಉಣ್ಣೆ ಎಲ್ಲಾ ವಿಶೇಷವಾಗಿ ಸಂಸ್ಥಾನದ ಹೊರಗಡೆಗೆ ರಫ್ತಾಗುತ್ತಿದೆ. ಆದಕಾರಣ ಸಂಸ್ಥಾನದಲ್ಲಿ ಹಸನಾದ ಉಣ್ಣೆಯನ್ನೂ ಉತ್ತಮೆತರಹೆಯ ಉಣ್ಣೆಯ ಬಟ್ಟೆಗಳನ್ನೂ ತಯಾರಿಸುವುದಕ್ಕಾಗಿ ಒಂದು ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ಪ್ರಾರ್ಥಿಸಿದೆ.

ವಿಷಯಸಂಖ್ಯೆ 122.

ಕೈಗಾರಿಕೆಯ ತಕಾವಿ ಸಾಲಗಳ ಪದ್ಧತಿಯನ್ನು ಪುನಃ ಜಾರಿಗೆ ತರುವುದು.

ವಿ॥ ಓಂಕಾರಪ್ಪನವರು,
ದಾವಣಗೆರೆ ತಾಲ್ಲೂಕು.

ಅರಿಕೆಯ ಸಾರಾಂಶ.—ಕೈಗಾರಿಕೆಗಳ ಮತ್ತು ವ್ಯಾಪಾರದ ಡೈರೆಕ್ಟರವರು ಕೈಗಾರಿಕೆಯ ತಕಾವಿ ಸಾಲಗಳನ್ನು ಕೊಡುವುದನ್ನು ನಿಲ್ಲಿಸಿರುತ್ತಾರೆಂದು ತಿಳಿದುಬಂದಿದೆ. ಈಗ ಜನರು ಬಂದಾದಮೇಲೊಂದರಂತೆ ನಾನಾ ಬಗೆಯ ಕೈಗಾರಿಕೆಗಳನ್ನು ಅಜಮಾಯಿಷಿಮಾಡಿ ನೋಡುತ್ತಿರುವುದರಿಂದ, ಅವರಿಗೆ ಸಾಲಗಳನ್ನು ಕೊಡದೆ ಹೋದಲ್ಲಿ ಅವರ ಉತ್ಸಾಹಕ್ಕೆ ಕುಂದಕವುಂಟಾಗುವುದು. ಆದಕಾರಣ ಕೈಗಾರಿಕೆಯ ಸಾಲಗಳನ್ನು ಕೊಡುವ ಪದ್ಧತಿಯನ್ನು ಪುನಃ ಜಾರಿಗೆ ತರಬೇಕೆಂದು ಪ್ರಾರ್ಥಿಸಿದೆ.

ವಿಷಯಸಂಖ್ಯೆ 123.

ಕೈಗಾರಿಕೆಯ ಮತ್ತು ವ್ಯವಸಾಯದ ಸಾಲಗಳನ್ನು ತೀರಿಸುವ ಖಚ್ಚಿಗೆ ಕೊಡುವ ವಾಯಿದೆಯನ್ನು ಬಡಾಯಿಸುವುದು.

ವಿ॥ ಪಿ. ವೆಂಕಪ್ಪಯ್ಯನವರು,
ಶಿವಮೊಗ್ಗಾ ತಾಲ್ಲೂಕು.

ಅರಿಕೆಯ ಸಾರಾಂಶ.—ಕೈಗಾರಿಕೆಯ ಮತ್ತು ವ್ಯವಸಾಯದ ಸಾಲಗಳನ್ನು ತೀರಿಸುವುದಕ್ಕೆ ಈಗ ಕೊಡುತ್ತಾಮಾಡಿರುವ ವಾಯಿದೆಯು ಬಹು ಅಲ್ಪವಾಗಿದೆ. ಖರ್ಚುಮಾಡಿರುವ ಹಣದಮೇಲೆ ಸರಿಯಾದ ಪ್ರತಿಫಲ ಬರುವುದಕ್ಕೆ ಮೊದಲೇ ಹಣವನ್ನು ವಾಪಸು ಮಾಡಬೇಕಾಗುವುದು. ಆದಕಾರಣ ಈ ಸಾಲಗಳನ್ನು ತೀರಿಸುವ ವಾಯಿದೆಯು ಬಡಾಯಿಸಬೇಕೆಂದು ಪ್ರಾರ್ಥಿಸಿದೆ.

ವಿಷಯಸಂಖ್ಯೆ 124.

ಯಂತ್ರಾದಿಗಳನ್ನು ಭಾರಿಯಾಗಿ ಕೊಂಡುಕೊಳ್ಳುವ ವಿಷಯಗಳನ್ನು ನಿರ್ಧರಿಸುವ ಬಗ್ಗೆ ಒಂದು ಕಮಿಟಿಯನ್ನು ಏರ್ಪಡಿಸುವುದು.

ವಿ॥ ಬೀಲೂರು ಶ್ರೀನಿವಾಸಯ್ಯಂಗಾರ್ಯರು,
ಬೆಂಗಳೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಭವತ್ಪ್ರಾವತಿ ಏರ್ಪಾಡುಗಳು ವಿದ್ಯುಚ್ಛಕ್ತಿಯು ಇಲಾಖೆ ಇನ್ನೇ ಮೊದಲಾದವುಗಳಿಗಾಗಿ ಸರ್ಕಾರದವರು 25 ಸಾವಿರ ರೂಪಾಯಿಗೆ ಹೇಳ್ಪಡುವ ಜೆಲೆಯು. ಯಂತ್ರಾದಿಗಳನ್ನು ಕೊಂಡುಕೊಳ್ಳುವ ವಿಷಯಗಳನ್ನು ನಿರ್ಧರಿಸುವುದಕ್ಕಲ್ಲದಿದ್ದರೂ ಬುದ್ಧಿವಾದವನ್ನಾದರೂ ಕೊಡುವ ಬಗ್ಗೆ (a) ಇಲಾಖೆಯ ಮೊಖ್ತೇಸರರೂ, (b) ಆಯಾ ಪೋರ್ಟ್‌ಫೋಲಿಯೋ ಚಾರ್ಜ್‌ನಲ್ಲಿರುವ ಮೆಂಬರವರೂ, (c) ದಿವಾನ್ ಸಾಹೇಬರವರೂ, (d) ಈ ಸಭೆಯವರ ಪೈಕಿ ಯಾ ನ್ಯಾಯವಿಧಾಯಕ ಸಭೆಯವರ ಪೈಕಿ ಚುನಾಯಿಸಲ್ಪಟ್ಟ ಸರ್ಕಾರಿ ಉದ್ಯೋಗಸ್ಥರಲ್ಲದ ಇಬ್ಬರು ಮೆಂಬರುಗಳೂ, ಇವರುಗಳನ್ನುಳ್ಳ ಒಂದು ಚಿಕ್ಕ ಕಮಿಟಿಯನ್ನು ಏರ್ಪಡಿಸಬೇಕು.

ಅಭಿವೃದ್ಧಿ–ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿ —(ವಿದ್ಯಾಭ್ಯಾಸ).

(ವಿಷಯ ಸಂಖ್ಯೆ 125 ರಿಂದ 157ರ ವರೆಗೆ.)

ವಿಷಯಸಂಖ್ಯೆ 125.

ವಿದ್ಯಾಭ್ಯಾಸದ ಹೊಸ ಮಾರ್ಗಗಳನ್ನು ಸಲಹೆಮಾಡಲು ಒಂದು ಕಮಿಟಿಯನ್ನು ನಿರ್ಮಿಸುವುದು.

ಮಿ॥ ಕೆ. ಟಿ. ಶೇಷಯ್ಯನವರು, ಬೇಲೂರು ತಾಲ್ಲೂಕು.

ಆರಿಕೆಯ ಸಾರಾಂಶ.—ಈಗಣ ವಿದ್ಯಾಭ್ಯಾಸ ಪದ್ಧತಿಯು ವಿಶೇಷ ನ್ಯೂನವಾಗಿಯೂ ಇಂಡಿಯದಜನರ ಬುದ್ಧಿ ಕೌಶಲ್ಯಕ್ಕೆ ಯುಕ್ತವಲ್ಲದ್ದಾಗಿಯೂ ಇರುವುದೆಂದು ಜನಗಳು ಭಾವಿಸುತ್ತಾರೆ; ಏಕೆಂದರೆ, ಅದರಿಂದ ಒಂದು ಜನಾಂಗಕ್ಕೆ ಮಹತ್ವವನ್ನು ತರತಕ್ಕ ಅಂಶಗಳಾದ ಜ್ಞಾನಾಭಿವೃದ್ಧಿ ಯೂ ಪ್ರತಿಭೆ, ದೇಶವಾಂಛಲ್ಯ ಮತ್ತು ಆ ಬಗೆಯ ಇತರ ಗುಣಗಳು ಅಭಿವೃದ್ಧಿಗೆ ಬಂದಿರುವುದಿಲ್ಲ. ಆದಕಾರಣ ನಮ್ಮ ಜನಗಳಿಗೆ ತಮ್ಮ ಪೂರ್ವದ ಮಹತ್ವವು ಪುನಃ ಲಭಿಸುವಂತೆ ವಿದ್ಯಾಭ್ಯಾಸದ ಹೊಸ ಮಾರ್ಗಗಳನ್ನು ಸಲಹೆಮಾಡಿ ಕ್ರಮಪಡಿಸುವುದಕ್ಕಾಗಿ ಮೈಸೂರಿನಲ್ಲಿಯೂ ಮೈಸೂರು ಸೀಮೆಯ ಹೊರಗು ಇರುವ ದಪ್ರಾಧ್ಯಾಸಿರ ದೊಡ್ಡ ಮನುಷ್ಯರನ್ನುಳ್ಳ ಒಂದು ಕಮಿಟಿಯನ್ನು ನಿರ್ಮಿಸಬೇಕೆಂದು ಸಲಹೆ ಮಾಡಿಇದೆ.

ವಿಷಯಸಂಖ್ಯೆ 126.

ಎಲ್ಲಾ ತರಗತಿಗಳಲ್ಲಿಯೂ ವಿದ್ಯಾಭ್ಯಾಸವನ್ನು ಮುಫತ್ತಾಗಿ ಕೊಡುವುದು.

ಮಿ॥ ವಿ. ಬಂಡಿಯ್ಯನವರು, ನಂಜನಗೂಡು ತಾಲ್ಲೂಕು.

ಆರಿಕೆಯ ಸಾರಾಂಶ.—ವಿದ್ಯಾಭ್ಯಾಸಕ್ಕಾಗಿ ಖರ್ಚಾಗುತ್ತಿರುವ ಮೊಬಲಗಿನೊಂದಿಗೆ ಹೋಲಿಸಿದಲ್ಲಿ ಸ್ಕೂಲು ಫೀಜುಗಳಿಂದ ಬರುವ ಹಣವು ಬಹು ಅಲ್ಪವಾಗಿರುವುದರಿಂದ ಎಲ್ಲಾ ತರಗತಿಗಳಲ್ಲಿಯೂ ವಿದ್ಯಾಭ್ಯಾಸವನ್ನು ಮುಫತ್ತಾಗಿ ಕೊಡಬೇಕು.

ವಿಷಯಸಂಖ್ಯೆ 127.

ವಿದ್ಯಾಭ್ಯಾಸದ ಸೆಸ್ಸನ್ನು ವಜಾ ಮಾಡುವುದು.

(a) ಮಿ|| ಡಿ. ಎಸ್. ಹನುಮಂತರಾಯನವರು, ದೇವನಹಳ್ಳಿ ತಾಲ್ಲೂಕು.
,, ಟಿ. ರಾಮಚಂದ್ರರಾಯರವರು, ಮಾಗಡಿ ತಾಲ್ಲೂಕು.
,, ರಂಗಸ್ವಾಮಿಶೆಟ್ಟರವರು, ಮಾಗಡಿ ಮ್ಯುನಿಸಿಪಾಲಿಟಿ
,, ಎಚ್. ಪಿ, ಚಂದ್ರಶೇಖರಯ್ಯನವರು, ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.
,, ಸಿ. ನರಸಿಂಹಯ್ಯನವರು, ನೆಲಮಂಗಲ ತಾಲ್ಲೂಕು.

(b) ,, ಅನಂತರಾಜಪ್ಪನವರು,
,, ಅನಂತ ಲಕ್ಷ್ಮಿನಾರಾಯಣಪ್ಪನವರು,
,, ವೀರಪ್ಪಗೌಡರವರು, ತುಮಕೂರು ತಾಲ್ಲೂಕು
,, ಅಬ್ದುಲ್ ನಬಿಖಾನ್ ಸಾಹೇಬರವರು, ತುಮಕೂರು ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—(a) ಈಗಾಗಲೇ ರೈತರು ಭಾರೀ ತೆರಿಗೆಗಳಿಂದಲೂ ಸೆಸ್ಸುಗಳಿಂದಲೂ ಹಿಂಸೆ ಪಡುತ್ತಿದ್ದಾರೆ. ಕಷ್ಟಕಾಲದಲ್ಲಿ ಇದನ್ನು ಕೊಡುವುದೇ ಅವರಿಗೆ ಕಷ್ಟವಾಗಿರುವಾಗ, ಬೆಂಗಳೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡುಗಳು ಒಪ್ಪಿದ್ದರಿಂದ ಆ ಎರಡು ಡಿಸ್ಟ್ರಿಕ್ಟ್‌ಗಳಲ್ಲಿ ಮಾತ್ರ ವಿದ್ಯಾಭ್ಯಾಸದ ಸೆಸ್ಸು ವಸೂಲಾಗುತ್ತಿದೆ. ಮಿಕ್ಕ ಡಿಸ್ಟ್ರಿಕ್ಟ್ ಬೋರ್ಡುಗಳು ಸಮ್ಮತಪಡದಿದ್ದುದರಿಂದ ಆ ಡಿಸ್ಟ್ರಿಕ್ಟ್‌ಗಳಲ್ಲಿ ಅದನ್ನು ವಸೂಲ್ಮಾಡಲಿಲ್ಲ. ಆದುದರಿಂದ ಈಗ ವಸೂಲ್ಮಾಡುತ್ತಿರುವ ವಿದ್ಯಾಭ್ಯಾಸದ ಸೆಸ್ಸನ್ನು ತೆಗೆದುಬಿಡಬಹುದು ಅಥವಾ ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ವಸೂಲ್ಮಾಡುವವರೆಗೂ ಅದನ್ನು ವಸೂಲ್ಮಾಡುವುದನ್ನು ತಡೆದಿರಬಹುದು.

(b) ವಿದ್ಯಾಭ್ಯಾನದ ಸೆಸ್ಸಿನ ವಿಶೇಷ ಭಾಗವು ಟವೆನುಗಳ ಮತ್ತು ಸಿಟಿಗಳ ಪ್ರಯೋಜನಕ್ಕಾಗಿಯೇ ವಿನಿಯೋಗವಾಗಿ ಗ್ರಾಮಾಂತರಗಳಲ್ಲಿ ಅಸಮಾಧಾನಕ್ಕೆ ಕಾರಣವಾಗಿರುವುದರಿಂದ ಈ ಸೆಸ್ಸನ್ನು ರದ್ದು ಮಾಡಬೇಕು.

ವಿಷಯಸಂಖ್ಯೆ 128.

(1) ವಿದ್ಯಾಭ್ಯಾಸದ ಮೆಮೊರಾಂಡಮಿನ ಮೇಲೆ ಸಾದರಾಪ ಸರ್ಕಾರಿ ಹುಕುಮಿನಲ್ಲಿ ಕೆಲವು ಬದಲಾವಣೆಗಳು.

(1) ಮಿ॥ ಜಿ. ಪರಮಶಿವಯ್ಯನವರು ಲಿಂಗಾಯಿತರ ವಿದ್ಯಾಭ್ಯಾಸ ಫಂಡು ಸಂಘ, ಬೆಂಗಳೂರು ಸಿಟಿ.
" ಮುನಿಸ್ವಾಮಿಗೌಡರವರು,
" ವೀರೇಗೌಡರವರು,
ದೊಡ್ಡಬಳ್ಳಾಪುರ ತಾಲ್ಲೂಕು.

(2) ವಿದ್ಯಾಭ್ಯಾಸದ ಮೆಮೊರಾಂಡಮನ್ನು ಜಾರಿಗೆ ತರಲು ಪ್ರತಿ ವರ್ಷವೂ ತಕ್ಕಷ್ಟು ಹಣವನ್ನು ಬದಿಗಿಸುವುದು.

ಮಿ॥ ಜಿ. ಪರಮಶಿವಯ್ಯನವರು, ಲಿಂಗಾಯಿತರ ವಿದ್ಯಾಭ್ಯಾಸ ಫಂಡು ಸಭಾ, ಬೆಂಗಳೂರು.

(3) ವಿದ್ಯಾಭ್ಯಾಸದ ಮೆಮೊರಾಂಡಮಿನ ಮೇಲಣ ಸರ್ಕಾರಿ ಹುಕುಮುಗಳನ್ನು ಕೀಳ್ಪುವಾಗಿ ಜಾರಿಗೆ ತರುವುದು.

(a) ಮಿ॥ ಜಿ. ಪರಮಶಿವಯ್ಯನವರು ಲಿಂಗಾಯಿತರ ವಿದ್ಯಾಭ್ಯಾಸ ಫಂಡು ಸಂಘ, ಬೆಂಗಳೂರು
" ಡಿ. ಎಸ್. ಮಲ್ಲಪ್ಪನವರು,
" ಚಿಕ್ಕತಿಮ್ಮೇಗೌಡರವರು,
ತಿಪಟೂರು ತಾಲ್ಲೂಕು.

(b) " ತಿಮ್ಮೇಗೌಡರವರು,
" ಗಂಗಪ್ಪನವರು,
ನಾಗಮಂಗಲ ತಾಲ್ಲೂಕು

ಅರಿಕೆಯ ಸಾರಾಂಶ,—(1) ವಿದ್ಯಾಭ್ಯಾಸ ಮೆಮೋರಾಂಡಮಿನ ಮೇಲಣ 1921ನೆಯ ಮೇ 25ನೆಯ ಮೆಕ್ರುಂ ಸರ್ಕಾರಿ ಹುಕುಮುಗಳ 5ನೆಯ ಪ್ಯಾರಾವಿನ 2ನೆಯ ಕ್ಲಾಜನ್ನು ಪೂರ್ತಿಯಾಗಿ ತೆಗೆದುಹಾಕಿ ಅದೇ ಪ್ಯಾರಾವಿನಲ್ಲಿ (b)ನೆಯ ಕ್ಲಾಜಿಗೆ ಪ್ರತಿಯಾಗಿ ಈ ಕೆಳಗಿನದನ್ನು ಸೇರಿಸಬೇಕ್ಕದ್ದು :—

" ಮೇಲ್ಕಂಡ ಷರತ್ತುಗಳಿಗೆ ಅನುಸಾರವಾಗಿ ಬಂದು ಮೇಲ್ಪಟ್ಟ ದರ್ಜೆಯ ವರೆಗೂ ಪಾಠ ಹೇಳದೆ ಸಾಕಾದಷ್ಟು ಸಂಖ್ಯೆಯ ಉಪಾಧ್ಯಾಯರಿಲ್ಲದ ಸ್ಕೂಲುಗಳಿಗೂ ಸರಿಯಾದ ಯೋಗ್ಯತೆಯಿಲ್ಲದ ಉಪಾಧ್ಯಾಯರಿರುವ ಸ್ಕೂಲುಗಳಿಗೂ ಪ್ರಾಶಸ್ತ್ಯವನ್ನು ಕೊಡಲಾಗುವುದು. "

(2) ಸರ್ಕಾರದವರು ವಿದ್ಯಾಭ್ಯಾಸದ ಮೆಮೋರಾಂಡಮಿನ ಮೇಲಣ ತಮ್ಮ ಹುಕುಮುಗಳಲ್ಲಿ ವಿಧಾಯಕವಾಗಿರುವ ಕ್ರಮವನ್ನು ಜಾರಿಗೆ ತರಲು ವಿದ್ಯಾಭ್ಯಾಸದ ಒಟ್ಟು ಗ್ರಾಂಟಿನಿಂದ ತಕ್ಕಷ್ಟು ಹಣವನ್ನು ಪ್ರತಿ ವರ್ಷವೂ ಜಯವಿಟ್ಟು ತೆಗೆದಿಡಬೇಕು.

(3) (a) ವಿದ್ಯಾಭ್ಯಾಸದ ಮೆಮೋರಾಂಡಮಿನ ಮೇಲಣ ಸರ್ಕಾರಿ ಹುಕುಮುಗಳನ್ನು ಕೀಳ್ಪುವಾಗಿ ಜಾರಿಗೆ ತರಬೇಕು.

(b) ವಿದ್ಯಾಭ್ಯಾಸದ ಮೆಮೋರಾಂಡಮಿನಲ್ಲಿ ಅಡಕವಾಗಿರುವ ಸಲಹೆಗಳನ್ನು ಜಾರಿಗೆ ತರಬೇಕು ; ಏಕೆಂದರೆ, ಅದರಿಂದ ವಿದ್ಯಾಭ್ಯಾಸದ ಸೆಸ್ಸನ್ನು ಕೊಡುವುದಕ್ಕೆ ಸಿದ್ಧರಾಗಿರುವ ಹಿಂದುಳಿದ ಪಂಗಡಗಳ ವಿದ್ಯಾಭ್ಯಾಸಕ್ಕೆ ಉತ್ತೇಜನ ವುಂಟಾಗುವುದು.

ವಿಷಯಸಂಖ್ಯೆ 129.

(1) ಗ್ರಾಂಟ್–ಇನ್–ಏಡ್ ಸ್ಕೂಲುಗಳನ್ನು ರದ್ದುಮಾಡಿರುವ ಸ್ಥಳಗಳಲ್ಲಿ ಸರ್ಕಾರಿ ಸ್ಕೂಲುಗಳನ್ನು ಏರ್ಪಡಿಸುವುದು.

(1)(a) ಮಿ॥ ಡಿ. ಎಸ್. ಮಲ್ಲಪ್ಪನವರು,
,, ಚಿಕ್ಕತಿಮ್ಮೇಗೌಡರವರು,
ತಿಪಟೂರು ತಾಲ್ಲೂಕು.

(b) ,, ಅನಂತರಾಜಪ್ಪನವರು
,, ಅನಂತ ಲಕ್ಷ್ಮೀನಾರಾಣಪ್ಪನವರು,
,, ವೀರೇಗೌಡರವರು
ತುಮಕೂರು ತಾಲ್ಲೂಕು.
,, ಅಬ್ದುಲ್‌ನಬಿಖಾನ್‌ಸಾಹೇಬರವರು,
ತುಮಕೂರು ಮ್ಯುನಿಸಿಪಾಲಿಟಿ.

(2) ಆಗಲೇ ಏರ್ಪಡಿಸಿರುವ ಗ್ರಾಂಟ್–ಇನ್–ಏಡ್– ಸ್ಕೂಲುಗಳನ್ನು ರದ್ದುಮಾಡದಿರುವುದು.

(2) ಮಿ॥ ಮುರಳು ಸಿದ್ಧಪ್ಪನವರು,
,, ಎಚ್. ರುಚ್ಚಪ್ಪನವರು,
ಅರಸೀಕೆರೆ ತಾಲ್ಲೂಕು.
,, ಎಂ. ಚನ್ನಬಸಪ್ಪನವರು,
ಅರಸೀಕೆರೆ ಮ್ಯುನಿಸಿಪಾಲಿಟಿ.

D. G. S.

ಅರಿಕೆಯ ಸಾರಾಂಶ—(1) (a) ಗ್ರಾಂಟ್–ಇನ್–ಏಡ್ ಸ್ಕೂಲುಗಳನ್ನು ಸ್ಥಾಪಿಸುವ ಬಗ್ಗೆ ಕಂಪ್ರಮೈಸ್‌ಗಳನ್ನು ವೆಸೂಲ್ಮಾಡುವ ಪದ್ಧತಿಯನ್ನು ನಿಲ್ಲಿಸಿದೆ. ಅಂಥ ಸ್ಕೂಲುಗಳನ್ನು ರದ್ದುಮಾಡಿರುವ ಕಡೆಗಳಲ್ಲಿ ಸರ್ಕಾರಿ ಸ್ಕೂಲುಗಳನ್ನು ಉಪಕ್ರಮಿಸಬೇಕು.

(b) ಜಾರಿಯಲ್ಲಿರುವ ಗ್ರಾಂಟ್–ಇನ್–ಏಡ್ ಸ್ಕೂಲುಗಳನ್ನು ಮುಚ್ಚಿಬಿಡುವ ಸ್ಥಳಗಳಲ್ಲಿ ಸರ್ಕಾರಿ ಸ್ಕೂಲುಗಳನ್ನು ಉಪಕ್ರಮಿಸಬೇಕು.

(2) ಆಗಲೇ ಏರ್ಪಡಿಸಿರುವ ಗ್ರಾಂಟ್–ಇನ್–ಏಡ್ ಸ್ಕೂಲುಗಳನ್ನು ಮುಚ್ಚಿಬಿಡಕೂಡದು.

ವಿಷಯಸಂಖ್ಯೆ 130.

ಗ್ರಾಮಾಂತರಪ್ರದೇಶಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ನಡಿಸುವುದು.

ಮಿ॥ ಸಿ. ನಾರಾಯಣಸ್ವಾಮಿಕೆಟ್ಟರವರು,
ಚಿಕ್ಕಬಳ್ಳಾಪುರ ತಾಲ್ಲೂಕು.

ಅರಿಕೆಯ ಸಾರಾಂಶ—ನಿಮ್ಮನ್ನ ವರ್ಗದವರನ್ನು ಅಭಿವೃದ್ಧಿಗೆ ತರುವುದು ಅತ್ಯವಶ್ಯಕವೆಂಬುದನ್ನು ಪೂರ್ತಿಯಾಗಿ ಅಂಗೀಕರಿಸಿ ಸರ್ಕಾರದವರು ದಯವಿಟ್ಟು ವಿದ್ಯಾಭ್ಯಾಸದ ಮೈಸೂರಾಂಡಮೆನ್ನು ಮಂಜೂರ್ಮಾಡಿದರು. ಆದರೆ ಗ್ರಾಮಾಂತರಗಳಲ್ಲಿರುವ ಜನಗಳು ತಮ್ಮ ಮಕ್ಕಳನ್ನು ವರ್ಷವೆಲ್ಲಾ ಸ್ಕೂಲಿಗೆ ಕಳುಹಿಸುವುದಿಲ್ಲ. ವ್ಯವಸಾಯ ಕಾರ್ಯಗಳ ಕಾಲದಲ್ಲಿ ಅವರು ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವುದಿಲ್ಲ. ಆದಕಾರಣ ಗ್ರಾಮಾಂತರಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ನಡಿಸುವುದು ಅವಶ್ಯಕ.

ii. ವಿದ್ಯಾಭ್ಯಾಸದ ಸೆಸ್ಸನ್ನು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟುಬಿಡಬೇಕು ಮತ್ತು ತಾಲ್ಲೂಕು ಬೋರ್ಡುಗಳು ಗ್ರಾಮಾಂತರ ಸ್ಕೂಲುಗಳನ್ನು ತಮ್ಮ ಸ್ವಂತ ಖರ್ಚುಗಳಿಂದ ಸುದಾರಿಸಬೇಕು.

iii. ಈ ಸ್ಕೂಲುಗಳಲ್ಲಿ ತರಕಾರಿ ಹಣ್ಣು ಹಂಪಲು ವೈಗೈರೆ ಸೊಸಿಗಳನ್ನು ಬೆಳಿಸುವ ಭಾಗದಲ್ಲಿ ಕಾರ್ಯತಃ ತರಬೇತನ್ನು ಕೊಡಬೇಕು.

ವಿಷಯಸಂಖ್ಯೆ 131.

ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸವನ್ನು ಮೇಲ್ಪಡಿಸುವುದು.

(3) ಮಿ॥ ಎಚ್. ನಾರಾಯಣಯ್ಯನವರು, ಚಿಕ್ಕಬಳ್ಳಾಪುರ ತಾಲ್ಲೂಕು, ಮತ್ತು

(2) ಮಿ॥ ಎಂ. ವೆಂಕಟಕೃಷ್ಣಯ್ಯನವರು,
ಮೈಸೂರು ಯೂನಿವರ್ಸಿಟಿ.

ಅರಿಕೆಯ ಸಾರಾಂಶ—(a) (1) ವಿದ್ಯಾಭ್ಯಾಸ ಮೈಸೂರಾಂಡಮಿನಲ್ಲಿ ಕಾಣಿಸಿರುವಂತೆ ಪ್ರೈಮರಿ ವಿದ್ಯಾಭ್ಯಾಸವನ್ನು ಮೇಲ್ಪಡಿಸುವ ಕ್ರಮವನ್ನು ಶೀಘ್ರದಲ್ಲಿ ಜಾರಿಗೆ ತಂದು, ಸಾಧ್ಯವಾದ ರೀತಿಗಳಲ್ಲೆಲ್ಲಾ ಆವಶ್ಯಕವಾದ ಹಣವನ್ನು ಖರ್ಚಿಗಿಸಬೇಕು.

(2) ಪ್ರೈಮರಿ ವಿದ್ಯಾಭ್ಯಾಸವನ್ನು ಬಲಾತ್ಕಾರವನ್ನಾಗಿ ಮಾಡಿದೆ. ಈ ವಿದ್ಯಾಭ್ಯಾಸದಲ್ಲಿ ವಸ್ತುಪಾಠಗಳು, ಪ್ರಕೃತಿಪರಿಶೀಲನೆ, ತೋಟದ ಕೆಲಸ, ವ್ಯವಸಾಯ ಮತ್ತು ಗ್ರಾಮಾಂತರಗಳಲ್ಲಿ ವಾಸ ಮಾಡತಕ್ಕವರ ಪ್ರಯೋಜನಕ್ಕೂ ಅಭಿವೃದ್ಧಿಗೂ ಸಾಧಕವಾದ ಸುಲಭ ಕೈಗಾರಿಕೆಗಳಲ್ಲಾ ಸೇರಿರ

ಬೇಕು. ವ್ಯವಸಾಯಗಾರರ ಮಕ್ಕಳ ವಿಷಯದಲ್ಲಿ ಅವರಿಗೆ ಪಂಪ ಪಾರಂಪರ್ಯವಾಗಿ ಬಂದಿರುವ ಜೀವನೋಪಾಯದ ವೃತ್ತಿಯನ್ನು ಮೊದಲು ಕಲಿಸಿ, ಅನಂತರ ಈ ವಿದ್ಯಾಭ್ಯಾಸವನ್ನು ಕಲಿಸಬೇಕು.

(3) ಸೆಕಂಡರಿ ವಿದ್ಯಾಭ್ಯಾಸದ ಅಭಿವೃದ್ಧಿಯ ಬಗ್ಗೆ ಈ ಕೆಳಗೆ ಕಂಡ ಸಲಹೆಗಳನ್ನು ಪರ್ಯಾಲೋಚಿಸಬಹುದು :—

i. ಹೈಸ್ಕೂಲನ್ನು ವರ್ಷಕ್ಕೆ ಎರಡು ಸಲದಂತೆ ಪರಿಷ್ಕಾರವಾಗಿ ತನಿಖೆ ಮಾಡಬೇಕು.

ii. ಪ್ರಕೃತಿ ಶಾಸ್ತ್ರವನ್ನೂ ರಸಾಯನ ಶಾಸ್ತ್ರವನ್ನೂ ಕಲಿಸುವುದಕ್ಕಾಗಿ ಕೇವಲ ನವೀನತರಹೆಯ ಉಪಕರಣಗಳನ್ನೆಲ್ಲಾ ಒದಗಿಸಬೇಕು.

iii. ನಾಲ್ಕನೆಯ ಫಾರಮಿನ ಲಾಗಾಯಿತು ಮುಂದಕ್ಕೆ ಮೂರು ವರ್ಷಗಳ ವರೆಗೆ ಪರ್ಯವಸಾನದಲ್ಲಿ ಯೂನಿವರ್ಸಿಟಿ ವಿದ್ಯಾಭ್ಯಾಸವನ್ನು ಮಾಡತಕ್ಕವರಿಗೆ ಉಪಯುಕ್ತವಾಗುವಂತೆ ಸಾಮಾನ್ಯ ವಿದ್ಯಾಭ್ಯಾಸದ ಒಂದು ಕ್ರಮವೂ, ಇತರರನ್ನು ಯಾವುದಾದರೊಂದು ಕಸಬುದಾರಿ ವಿದ್ಯಾಭ್ಯಾಸಕ್ಕೆ ತರಬೇತು ಮಾಡತಕ್ಕದ್ದು ಒಂದು ಕ್ರಮವೂ, ಈ ರೀತಿ ಸಮವಾದ ಎರಡು ಕ್ರಮಗಳು ಇರಬೇಕು.

iv. ಹೈಸ್ಕೂಲುಗಳು ಇರುವ ಕಡೆಗಳಲ್ಲಿ ಅವುಗಳ ಅಜಮಾಯಿಷಿ ಮತ್ತು ಮೇಲ್ತನಿಖೆಯ ಬಗ್ಗೆ ಕಮಿಟಿಗಳನ್ನು ನೇಮಕಮಾಡಬೇಕು.

v. ಹೈಸ್ಕೂಲುಗಳ ಉಪಾಧ್ಯಾಯರ ಸಂಬಳಗಳನ್ನೂ ಬಡ್ತಿಯ ಸಂಭವಗಳನ್ನೂ ಉತ್ತಮಪಡಿಸಬೇಕು. ಈಗ ಪ್ರಾರಂಭದಲ್ಲಿ ಕೊಡತಕ್ಕ 50 ರೂಪಾಯಿಯ ತಲಬು ಬಹು ಕಮ್ಮಿ ; ಆದಕಾರಣ ಅಂಥ ಕಮ್ಮಿ ಸಂಬಳಕ್ಕೆ ನಿಜವಾದ ಯೋಗ್ಯತೆ ಇರುವ ಗ್ರಾಜುಯೇಟರುಗಳು ಯಾರೂ ವಿದ್ಯಾಭ್ಯಾಸ ಇಲಾಖೆಗೆ ಹೋಗುವುದಿಲ್ಲ.

ವಿಷಯಸಂಖ್ಯೆ 132.

(1) ಹಿಂದುಳಿದ ಪಂಗಡಗಳ ವಿದ್ಯಾರ್ಥಿ ವೇತನಗಳನ್ನು ಕೊಡುವುದು.

ಮಿ॥ ರಾಮಚಂದ್ರರಾವ್ ಸಿಂಧ್ಯೆಯವರು,
ಮೈಸೂರು ವಾಣಿಜ್ಯ ಸಂಘ,
ಬೆಂಗಳೂರು.

,, ನರಹರಯ್ಯನವರು,
ನೆಲಮಂಗಲ ತಾಲ್ಲೂಕು.

(2) ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳು ಸಲ್ಲತಕ್ಕ ಕಾಲ

ಮಿ॥ ಎಂ. ಸುಬ್ಬಯ್ಯನವರು,
ಬೆಂಗಳೂರು ಸಿಟಿ ಮುನ್ಸಿ॥

(3) ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳಿಗಾಗಿ ಬರಗಿಸತಕ್ಕ ಹಣವನ್ನು ಹೆಚ್ಚಿಸುವುದು.

ಮಿ॥ ಜಿ. ಪರಮಶಿವಯ್ಯನವರು
ಲಿಂಗಾಯತರ ವಿದ್ಯಾಭ್ಯಾಸ ಫಂಡ
ಸಂಘ, ಬೆಂಗಳೂರು.

ಆರಿಕೆಯ ಸಾರಾಂಶ.—ಆಯಾ ಪಂಗಡಗಳ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳನ್ನು ಈಗ ಹಂಚುತ್ತಿದೆ. ಈ ಪದ್ಧತಿಯಿಂದ ವಿದ್ಯಾರ್ಥಿ ವೇತನಗಳೆಲ್ಲಾ ಕೆಲವು ಪಂಗಡಗಳಿಗೆ ಮಾತ್ರವೇ ಸೇರಿಹೋಗುತ್ತವೆ. ಸಣ್ಣ ಪಂಗಡಗಳಿಗೆ ಗವನವೇ ಕೊಡಲ್ಪಡುವುದಿಲ್ಲ; ತಪ್ಪ್ರಯುಕ್ತ ಅರ್ಹರಾದ ಅನೇಕ ವಿದ್ಯಾರ್ಥಿಗಳಿಗೆ ವೇತನಗಳು ದೊರೆಯುವದಿಲ್ಲ. ಹಿಂದುಳಿದ ಪಂಗಡಗಳನ್ನೆಲ್ಲಾ ಒಂದೇ ಪಂಗಡದಂತೆ ಭಾವಿಸಿ ಯೋಗ್ಯರಾದವರಿಗೆ ಮಾತ್ರವೇ ವಿದ್ಯಾರ್ಥಿ ವೇತನಗಳನ್ನು ಕೊಡಬೇಕು. ಈ ವಿದ್ಯಾರ್ಥಿವೇತನಗಳನ್ನು ಬ್ರಾಹ್ಮಣರಲ್ಲಿಯೂ ಸಹ ಯೋಗ್ಯರಾದ ಬಡ ವಿದ್ಯಾರ್ಥಿಗಳಿಗೆ ಕೊಡಬೇಕು.

(2) ಈಗ ಕೊಡುತ್ತಿರುವ ಯೋಗ್ಯತಾ ವಿದ್ಯಾರ್ಥಿವೇತನಗಳು ಆಗಲಿ ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳೇ ಆಗಲಿ ಸಲ್ಲತಕ್ಕ ಕಾಲವನ್ನು ಯಾವ ಕಾರಣಕ್ಕೂ ಕಮ್ಮಿಮಾಡಕೂಡದು; ಏಕೆಂದರೆ, ಅದರಿಂದ ಪ್ರೌಢವಿದ್ಯಾಭ್ಯಾಸಕ್ಕಾಗಿ ಹಳ್ಳಿಗಾಡುಗಳಿಂದ ಟವೆನುಗಳಿಗೆ ಹೋಗಿ ಹೋಟೆಲುಗಳಲ್ಲಿ ವಾಸಮಾಡುವ ವಿದ್ಯಾರ್ಥಿಗಳಿಗೆ ಬಹು ತೊಂದರೆಯಾಗುವುದು.

(3) ಹಿಂದುಳಿದ ಪಂಗಡಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ಕೊಡುವುದಕ್ಕಾಗಿ ಗೊತ್ತುಮಾಡಿರುವ ಹಣವನ್ನು ಎರಡು ಲಕ್ಷಗಳಿಗೆ ಹೆಚ್ಚಿಸುವುದು.

ವಿಷಯಸಂಖ್ಯೆ 133.

ಸರ್ಕಾರಿ ಸ್ಕೂಲುಗಳಿಗೆ ಸೇರಲು ವಿದ್ಯಾರ್ಥಿಗಳಿಗೆ ಸೌಕರ್ಯಗಳು.

೨॥ (a) ಚಂದ್ರಶೇಖರಯ್ಯನವರು, ಬೆಂಗಳೂರು ಸಿಟಿ ಮ್ಯು॥

,, ಜಿ. ಪರಮಶಿವಯ್ಯನವರು, ಲಾಯಿತರ ವಿದ್ಯಾಭ್ಯಾಸ ಫಂಡು, ಸಂಕ್ಷೆ, ಬೆಂಗಳೂರು. ಮತ್ತು

,, (b) ತಮ್ಮಯ್ಯಗೌಡರವರು, ನಾಗಮಂಗಲ ತಾಲ್ಲೂಕು.

ಅರಿಕೆಯ ಸಾರಾಂಶ.—(a) ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳಿಗೆ ಎಲ್ಲಾ ಸರ್ಕಾರಿ ಸ್ಕೂಲುಗಳಲ್ಲಿಯೂ ಆ ಮುಂದಣ ತರಗತಿಗಳನ್ನು ಸೇರುವುದಕ್ಕೆ ಹೆಚ್ಚು ಸೌಕರ್ಯಗಳನ್ನು ಒದಗಿಸಬಹುದೆಂದು ಪ್ರಾರ್ಥಿಸಿದೆ.

ಈ ಸಂಬಂಧದಲ್ಲಿ ಹೆಡ್‌ಮಾಸ್ಟರುಗಳಿಗೂ ಪ್ರಿನ್ಸಿಪಾಲರಿಗೂ ಸದಾಜ್ಞೆ ಮಾಡಲು ಸರ್ಕಾರವನ್ನು ವಿಷಯವಿಟ್ಟು ಒಕ್ಕಣಿಕೆಯ ಕರಪತ್ರಗಳನ್ನು ನೇಮಕ ಮಾಡಬೇಕು.

(b) ಸ್ಥಳವಿಲ್ಲದ್ದಕ್ಕಾಗಿ ಯಾವ ವಿದ್ಯಾರ್ಥಿಯೂ ತನ್ನ ವ್ಯಾಸಂಗವನ್ನು ಬಿಟ್ಟುಬಿಡದಂತೆ ಮಾಡಲು ಹೈಸ್ಕೂಲು ತರಗತಿಗಳಲ್ಲಿಯೂ ಕಾಲೇಜು ತರಗತಿಗಳಲ್ಲಿಯೂ ಸ್ಥಳವೆಸತಿಯನ್ನು ಹೆಚ್ಚಿಸಬೇಕು.

ವಿಷಯಸಂಖ್ಯೆ 134.

ರಿಲೀವಿಂಗ್ ಟೀಚರ್‌ಗಳ ಹೊಸ ನೇಮಕಾತಿ.

೨॥ ಅಂಜಿ ತಿಮ್ಮಪ್ಪನವರು,

,, ವೆಂಕಟಗಿರಿಯಪ್ಪನವರು, ಶಿವಮೊಗ್ಗ

,, ಕಾಳಿ ಗುಂಡಪ್ಪನವರು. ಸಾಗರ ತಾಲ್ಲೂಕು.

ಅರಿಕೆಯ ಸಾರಾಂಶ.—ತರಬೇತಿಗಾಗಲಿ ರಜದಮೇಲಾಗಲಿ ಹೋಗುವ ವಿಲೇಜು ಎಲಿಮೆಂಟರಿ ಸ್ಕೂಲುಗಳ ಉಪಾಧ್ಯಾಯರ ಬದಲಾಗಿ ಕೆಲಸಮಾಡಲು ಪ್ರತಿ ತಾಲ್ಲೂಕಿಗೂ ಇಬ್ಬರು ತರಬೇತಾದ ಉಪಾಧ್ಯಾಯರನ್ನು ಹೊಸದಾಗಿ ನೇಮಕ ಮಾಡಬೇಕು.

ವಿಷಯಸಂಖ್ಯೆ 135.

(a) ಸ್ಕೂಲಿಗೆ ಹೋಗುವ ಮಕ್ಕಳ ಆರೋಗ್ಯ ಪರೀಕ್ಷೆ.

(b) ಹೈಸ್ಕೂಲು ಮತ್ತು ಕಾಲೇಜುಗಳ ಹುಡುಗರ ದೇಹದಾರ್ಢ್ಯವನ್ನು ಹೆಚ್ಚಿಸುವುದು.

ಮಿ॥ (a) ಸಿ. ನಾರಾಯಣಸ್ವಾಮಿ ಸೆಟ್ಟ್ಯರವರು,
ಚಿಕ್ಕಬಳ್ಳಾಪುರ ತಾಲ್ಲೂಕು.
ಮತ್ತು
„ (b) ಕೆ. ಟಿ. ಶೇಷಯ್ಯನವರು
ಬೇಲೂರು ತಾಲ್ಲೂಕು.

ಅರಿಕೆಯ ಸಾರಾಂಶ.—(a) (1) ಸ್ಕೂಲಿಗೆ ಹೋಗುವ ಮಕ್ಕಳ ಆರೋಗ್ಯ ಪರೀಕ್ಷೆ ಅತ್ಯಾವಶ್ಯಕವಾಗಿದೆ. ಸಬ್ ಅಸಿಸ್ಟೆಂಟ್ ಸರ್ಜನರು ಇರುವ ಕಡೆಗಳಲ್ಲೆಲ್ಲಾ ಇದನ್ನು ಆಗಾಗ್ಗೆ ನಡಿಸುತ್ತಿರಬೇಕು.

(2) ಬೆಂಗಳೂರು ಮತ್ತು ಮೈಸೂರು ಕಾಲೇಜು ಹಾಸ್ಟೆಲುಗಳಲ್ಲಿ ಅನೇಕ ಹುಡುಗರು ವಾಸವಾಗುತ್ತಾರೆ ಮತ್ತು ಅವರಿಗೆ ಒಬ್ಬ ಡಾಕ್ಟರ ಸಹಾಯವು ಅತ್ಯವಶ್ಯಕವಾಗಿದೆ. ಈ ಪ್ರತಿಯೊಂದು ಸಂಸ್ಥೆಗೂ ಒಬ್ಬ ಡಾಕ್ಟರನ್ನು ನೇಮಕ ಮಾಡಬೇಕು.

(3) ಹಾಸ್ಟಲು ವಿದ್ಯಾರ್ಥಿಗಳು ರಾತ್ರೆ 9-30 ಘಂಟೆಗೆ ನಿದ್ದೆಹೋಗಲು ಅವಕಾಶ ಕೊಡಬೇಕು. ಅನಿವಾರ್ಯವಾದ ಸಂದರ್ಭಗಳಲ್ಲಿ ವಿನಾ ಅವರು ಹಾಸ್ಟಲನ್ನು ಆ ಘಂಟೆಯ ತರುವಾಯ ಬಿಟ್ಟುಹೋಗಲು ಅವಕಾಶ ಕೊಟಕೂಡದು.

(b) ಆರೋಗ್ಯ ಪರೀಕ್ಷೆಯನ್ನು ಪದೇಪದೆ ಮಾಡಿಸುವುದರಿಂದಲೂ ಯುಕ್ತವಾದ ಕವಾಯತು ಮತ್ತು ಇತರ ಉಪಾಯಗಳಿಂದಲೂ ಹೈಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಓದುವ ಹುಡುಗರ ದೇಹದಾರ್ಢ್ಯವನ್ನು ಮೇಲ್ಪಡಿಸುವದಕ್ಕೆ ಹೆಚ್ಚು ಗಮನವನ್ನು ಕೊಡಬೇಕು.

ವಿಷಯಸಂಖ್ಯೆ 136.

ಎಲಿಮೆಂಟರಿ ಸ್ಕೂಲುಗಳ ಕಟ್ಟಡಗಳನ್ನು ಶೀಘ್ರದಲ್ಲಿ ಕಟ್ಟಿಸುವುದು.

ಮಿ॥ ಎಚ್. ಎಸ್. ಚಿಕ್ಕಣ್ಣಗೌಡರವರು,
ಬೇಲೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಯಾವ ಸ್ಥಳಗಳಲ್ಲಿ ಗ್ರಾಮಸ್ಥರಿಂದ ಕಂಟ್ರಿಬ್ಯೂಷನನ್ನು ಆಗಲೇ ವಸೂಲ್ಮಾಡಲಾಗಿರುವುದೋ ಅಲ್ಲಿ ಎಲಿಮೆಂಟರಿ ಸ್ಕೂಲು ಕಟ್ಟಡಗಳನ್ನು ಶೀಘ್ರವಾಗಿ ಕಟ್ಟಿಸಬೇಕೆಂದು ಪ್ರಾರ್ಥಿಸಿದೆ.

ವಿಷಯಸಂಖ್ಯೆ 137.

ತಾಲ್ಲೂಕು ಕಸಬೆಗಳಲ್ಲಿನಿಪ ಬಾಲಿಕಾ ಪಾಠಶಾಲೆಗಳನ್ನು ಎ. ವಿ. ಸ್ಕೂಲುಗಳನ್ನಾಗಿ ಬದಲಾಯಿಸುವುದು.

ವಿ|| ಎಚ್. ಪಿ. ಗೋಪಾಲಯ್ಯನವರು,
ಹೊಳಲ್ಕೆರೆ ಮ್ಯು||

ವಿಷಯಸಂಖ್ಯೆ 138.

(a) ಎಲ್ಲಾ ತರಹೆಯ ವಿದ್ಯಾಭ್ಯಾಸಕ್ಕೂ ಅನುಕೂಲತೆಯುಳ್ಳ ಎ ವಿ. ಸ್ಕೂಲುಗಳನ್ನು ತಾಲ್ಲೂಕು ಕಸಬೆಗಳಲ್ಲಿ ಇಡುವುದು.

(b) ಕೈಗಾರಿಕೆಯ ಸ್ಕೂಲುಗಳಿಗೆ ಕೊಡುತ್ತಿದ್ದ ಗ್ರಾಂಟನ್ನು ಪುನಃ ಕೊಡುವುದು.

ವಿ|| ಬಿ. ಶ್ರೀನಿವಾಸಯ್ಯಂಗಾರ್ಯರು,
" ಆರ್. ಸುಬ್ಬರಾಯರು,
ಆನೇಕಲ್ ತಾಲ್ಲೂಕು.
" ಎಚ್ ಗುಬ್ಬಯ್ಯನವರು,
ಆನೇಕಲ್ ಮ್ಯು||
" ದಾಸೆಗೌಡರು,
" ಪಿ. ಮುತ್ತಯ್ಯನವರು,
ಚೆನ್ನಪಟ್ಟಣ ತಾಲ್ಲೂಕು.
" ಪಿ.ಆರ್.ಬಸವರಾಜಯ್ಯನವರು,
" ಮಂಡಿ ದಾಸಪ್ಪನವರು,
ಚನ್ನಪಟ್ಟಣ ಮ್ಯು|| ಮತ್ತು
" ಸಿ. ನರಹರಯ್ಯನವರು,
ನೆಲಮಂಗಲ ತಾಲ್ಲೂಕು.

ಅರಿಕೆಯ ಸಾರಾಂಶ.---ಪ್ರಕೃತದಲ್ಲಿ ತಾಲ್ಲೂಕು ಕಸಬೆಗಳಲ್ಲಿರುವ ಎಲ್ಲಾ ಬಾಲಿಕಾ ಪಾಠಶಾಲೆಗಳಲ್ಲಿಯೂ ಕನ್ನಡವನ್ನು ಮಾತ್ರ ಕಲಿಸುತ್ತಿದೆ. ಸ್ತ್ರೀ ವಿದ್ಯಾಭ್ಯಾಸವು ವೇಗವಾಗಿ ಅಭಿವೃದ್ಧಿಗೆ ಬರುತ್ತಿದೆ. ಹುಡುಗಿಯರಿಗೆ ಇಂಗ್ಲಿಷ್ ಕಲಿಸಬೇಕೆಂಬ ಅಪರ ತಾಯಿತಂದೆಗಳಿಗೆ ಕುತೂಹಲವಿದೆ. ಹುಡುಗಿಯರಿಗೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕೊಡತಕ್ಕದ್ದು ಸಂಸ್ಥಾನದ ನಾಗರೀಕತೆಗೂ ಅಭ್ಯುದಯಕ್ಕೂ ಅತ್ಯವಶ್ಯಕವಾಗಿದೆ. ಆದಕಾರಣ ತಾಲ್ಲೂಕು ಕಸಬೆಗಳಲ್ಲಿರುವ ಬಾಲಿಕಾ ಪಾಠಶಾಲೆಗಳನ್ನೆಲ್ಲಾ ಎ. ವಿ. ಸ್ಕೂಲುಗಳನ್ನಾಗಿ ಮೊರ್ಪಡಿಸಬೇಕೆಂಬ ಸಲಹೆಯನ್ನು ಪರ್ಯಾಲೋಚಿಸಬೇಕು.

ಅರಿಕೆಯ ಸಾರಾಂಶ.---(a) ವಿದ್ಯಾಭ್ಯಾಸದ ಮೆಮೋರಾಂಡಮ್ಮನ್ನು ಕುರಿತು ಸಾದರವಾದ ಹುಕುಂ ಪ್ರಕಾರ ಎಲ್ಲಾ ತಾಲ್ಲೂಕು ಕಸಬೆಗಳಲ್ಲಿಯೂ ಕೈಗಾರಿಕೆ ಮತ್ತು ಇತರ ತರಹೆಯ ವಿದ್ಯಾಭ್ಯಾಸಕ್ಕೆ ಅನುಕೂಲತೆಯುಳ್ಳ ಎ. ವಿ. ಸ್ಕೂಲುಗಳನ್ನು ಇಡಬೇಕು.

(b) ಕೆಲವು ಸ್ಥಳಗಳಲ್ಲಿ ಕೈಗಾರಿಕ ಸ್ಕೂಲುಗಳಿಗೆ ಕೊಡುತ್ತಿದ್ದ ಗ್ರಾಂಟನ್ನು ಈಚೆಗೆ ವಜಾ ಮಾಡಿ ಇದೆ. ಅದನ್ನು ಪುನಃ ಕೊಡಬೇಕು.

ವಿಷಯಸಂಖ್ಯೆ 139.

ಫಸ್ಟ್‌ಫಾರಂ ಲಾಗಾಯಿತು ಸಂಸ್ಕೃತವನ್ನು ಐಚ್ಛಿಕವನ್ನಾಗಿ ಮಾಡುವುದು.

ಮಿ॥ ಬಿ. ಎಸ್. ರಾಘವಯ್ಯನವರು,
ಶಿವಮೊಗ್ಗಾ ಟವನ್ ಮ್ಯುನಿ॥

ವಿಷಯಸಂಖ್ಯೆ 140.

ಲೋವರ್ ಸೆಕಂಡರಿ ಪರೀಕ್ಷೆಗೆ ಸಂಸ್ಕೃತವನ್ನು ಎರಡನೆಯ ಭಾಷೆಗಳ ಪೈಕಿ ಬುಂದೆಂತ ವಿಧಿಸುವುದು.

ಮಿ॥ ಎಸ್. ಆರ್. ಬಾಲಕೃಷ್ಣರಾಯರು,
ಮೈಸೂರು ಯೂನಿವರ್ಸಿಟಿ.

ವಿಷಯಸಂಖ್ಯೆ 141.

ಹೈಸ್ಕೂಲ್ ತರಗತಿಗಳಲ್ಲಿ ಸೈನ್ಸ್ ಪಾಠಗಳನ್ನು ದೇಶಭಾಷೆಯಲ್ಲಿ ಹೇಳಿಕೊಡುವುದು.

ಮಿ॥ ಎ. ಅನಂತಯ್ಯನವರು,
,, ಸಿ. ಸುಬ್ಬರಾಯರು,
,, ಟಿ. ವೆಂಕಪ್ಪಯ್ಯನವರು,
ಶಿವಮೊಗ್ಗಾ ಕಾಲ್ಲೂಕು.

ಅರಿಕೆಯ ಸಾರಾಂಶ—ಎಸ್. ಎಸ್. ಎಲ್. ಸಿ. ಮತ್ತು ಅದಕ್ಕೆ ಮೇಲ್ಪಟ್ಟ ಪರೀಕ್ಷೆಗೆ ಸಂಸ್ಕೃತವನ್ನು ತೆಗೆದುಕೊಳ್ಳಲು ಅಪೇಕ್ಷೆಯುಳ್ಳ ವಿದ್ಯಾರ್ಥಿಗಳು ಅನುಭವಿಸುವ ಕಷ್ಟವನ್ನು ತಪ್ಪಿಸಿ ಅನುಕೂಲತೆಯನ್ನು ಕಲ್ಪಿಸುವುದಕ್ಕಾಗಿ ಸಂಸ್ಕೃತವನ್ನು, ಮೊದಲಿದ್ದಂತೆ ಫಸ್ಟ್ ಫಾರಂ ಲಾಗಾಯಿತು ಐಚ್ಛಿಕಭಾಷೆಯನ್ನಾಗಿ ತೆಗೆದುಕೊಳ್ಳುವಂತೆ ಮಾಡಬೇಕು.

ಅರಿಕೆಯ ಸಾರಾಂಶ.—ಲೋವರ್ ಸೆಕೆಂಡರಿ ಪರೀಕ್ಷೆಗೆ ಸಂಸ್ಕೃತವನ್ನು ಎರಡನೆಯ ಭಾಷೆಗಳ ಪೈಕಿ ಬಂದನ್ನಾಗಿ ಸೇರಿಸದೇ ಇರುವುದರಿಂದ ಸಂಸ್ಕೃತವನ್ನು ಎಸ್. ಎಸ್. ಎಲ್. ಸಿ. ಮತ್ತು ಯೂನಿವರ್ಸಿಟಿ ಪರೀಕ್ಷೆಗೆ ತೆಗೆದುಕೊಳ್ಳಬೇಕೆಂದು ಅಪೇಕ್ಷಿಸುವ ವಿದ್ಯಾರ್ಥಿಗಳಿಗೆ ತುಂಬಾ ಕಷ್ಟವಾಗುತ್ತಿರುವುದರಿಂದ ಈ ಭಾಷೆಯನ್ನು ಲೋವರ್‌ಸೆಕೆಂಡರಿ ಪರೀಕ್ಷೆಗೆ ಎರಡನೆಯ ಭಾಷೆಯನ್ನಾಗಿ ಸೇರಿಸಬೇಕು.

ಅರಿಕೆಯ ಸಾರಾಂಶ.—ಸೈನ್ಸ್ ಪಾಠಗಳನ್ನು ದೇಶಭಾಷೆಗಳಲ್ಲಿ ಹೇಳಿಕೊಟ್ಟರೆ ಹುಡುಗರು ಸುಲಭವಾಗಿ ಕಲಿತುಕೊಳ್ಳುವರು ಸರಿಯಾದ ಟೆಕ್ಸ್ಟ್ ಬುಕ್ಕುಗಳನ್ನು ತಯಾರು ಮಾಡಿಸಿ ಎಸ್. ಎಸ್. ಎಲ್. ಸಿ. ತರಗತಿಗೆ ಸಂಸ್ಥಾನದ ಎಲ್ಲಾ ಸ್ಕೂಲುಗಳಲ್ಲಿಯೂ ಈ ಕ್ರಮವನ್ನು ಜಾರಿಗೆ ತರುವಂತೆ ಕ್ಷಿಪ್ರದಲ್ಲಿಯೇ ಏರ್ಪಾಟು ಮಾಡಬೇಕು.

ವಿಷಯಸಂಖ್ಯೆ 142.

ಸ್ಕೂಲಿನಲ್ಲಿ ವೈವಸಾಯಕಾಸ್ತ್ರ ವನ್ನು ಹೇಳಿಕೊಡುವುದು.

ಮಿ॥ ಎಚ್ ಜಿ. ಬಸವಪ್ಪನವರು,
ಕಿನಮೂಗ್ಗಿ ನಿ॥ ಬೋ॥

ವಿಷಯಸಂಖ್ಯೆ 143.

ಮೈಸೂರು ಯೂನಿವರ್ಸಿಟಿಯಲ್ಲಿ ಟೆಕ್ನಿಕಲ್ ವಿದ್ಯಾಶಾಖೆಗಳನ್ನು ಇವುದು

ಮಿ॥ ಗಿರಿಯಾಜಿರಾಯರು,
ಕೋಲಾರ ತಾಲ್ಲೂಕು.

ವಿಷಯಸಂಖ್ಯೆ 144.

ಎ. ವಿ. ಸ್ಕೂಲುಗಳ ವಿದ್ಯಾರ್ಥಿಗಳು ದೇಶಭಾಷೆಯಲ್ಲಿ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ಹೋಗಕೂಡದೆಂಬ ನಿರ್ಬಂಧವನ್ನು ತೆಗೆದುಹಾಕುವುದು

(a) ಮಿ॥ ಸುಂಕದ ರಾಘಣ್ಣನವರು,
ಮೂಳಕಾಲ್ಮೂರು ತಾಲ್ಲೂಕು

(b) ಮಿ॥ ಪಿ. ಶ್ರೀನಿವಾಸಶೆಟ್ಟರು,
ನಂಜನಗೂಡು ಮ್ಯು॥

ಮತ್ತು ,, ವಿ. ಬಂಡಯ್ಯನವರು,
ನಂಜನಗೂಡು ತಾಲ್ಲೂಕು.

D. G. S.

ಅರಿಕೆಯ ಸಾರಾಂಶ.—ವ್ಯವಸಾಯ ವಿದ್ಯೆಯು ಪಳ್ಳಿಗಳ ಹುಡುಗ ಅಭಿಮತವಾಗುವಂತೆ ಮಾಡುವುದಕ್ಕಾಗಿ, ಅನುಕೂಲವಾದ ಸ್ಥಳಗಳ್ಲಾ ಸ್ಕೂಲುಗಳಲ್ಲಿ ಓದುಬರಹ ಹೇಳಿಕೊಡುವುದರ ಜೊತೆಗೆ ವ್ಯವಸಾಯ ವಿದ್ಯೆಯನ್ನು ಹೇಳಿಕೊಡುವಂತೆ ಮಾಡಬೇಕು. ಈ ಕ್ರಮವನ್ನು ಪ್ರತಿ ತಾಲ್ಲೂಕಿನಲ್ಲಿಯೂ ಅನೇಕ ಸ್ಕೂಲುಗಳಲ್ಲಿ ಜಾರಿಗೆ ತರಲು ಪ್ರಕೃತ ದ್ರವ್ಯಾನುಕೂಲವಿಲ್ಲವಾದರಿಂದ ಸಾಧ್ಯವಿಲ್ಲದೇ ಹೋದರೆ ಪ್ರಥಮತಃ ಬಂದೊಂದು ತಾಲ್ಲೂಕಿನಲ್ಲಿ ಬಂದೊಂದು ಅಂಥಾ ಸ್ಕೂಲನ್ನಾದರೂ ಇಡಬೇಕು.

ಅರಿಕೆಯ ಸಾರಾಂಶ.—ಮೈಸೂರು ಯೂನಿವರ್ಸಿಟಿಯಲ್ಲಿ ಟೆಕ್ನಿಕಲ್ ವಿದ್ಯಾಶಾಖೆಗಳನ್ನು ಏರ್ಪಡಿಸಬೇಕು.

ಅರಿಕೆಯ ಸಾರಾಂಶ.—(a) ಇಂಗ್ಲಿಷಿನಲ್ಲಿ ಮೂರನೆ ಫಾರಂನಲ್ಲಿ ಓದುತ್ತಾ ಇದ್ದ ಹೊರತು ದೇಶಭಾಷೆಯ ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಕೂಡದೆಂತ ವಿಧಿಸಿರೆಯೆಂದು ತಿಳಿಯಬರುತ್ತದೆ. ಹುಡುಗರೂ ಹುಡುಗಿಯರೂ ದೇಶಭಾಷೆಯಲ್ಲಿ (ಕನ್ನಡ ಹಿಂದೂಸ್ತಾನಿ) ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಬಹುದೆಂತ ಅವಕಾಶ ಕೊಟ್ಟರುವ ಪದ್ಧತಿಯಿಂದ ವಿದ್ಯಾಭಿವೃದ್ಧಿಗೆ ಬಹಳ ಅನುಕೂಲತೆಯೂ ಅವಕಾಶವೂ ಉಂಟಾಗಿದೆ. ಇದೇ ಕ್ರಮವನ್ನು ಮುಂದು ನಡೆದು ಬರುವಂತೆ ಹುಕುಂ ಆಗಬೇಕು.

(b) ಎ. ವಿ. ಸ್ಕೂಲು ವಿದ್ಯಾರ್ಥಿಗಳು ಕನ್ನಡದಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಕೂಡದೆಂತ ಹುಕುಂ ಆಗಿದೆ. ಈ ನಿರ್ಬಂಧವನ್ನು ತೆಗೆದುಹಾಕಬೇಕು.

ವಿಷಯಸಂಖ್ಯೆ 145.

ವಿದ್ಯಾಶಾಲೆಗಳಲ್ಲಿ ಮಹಾಜೆಯವರಿಗೂ ರಜಪುತ್ರರಿಗೂ ಸಮವಾದ ರಿಯಾಯಿತಿಗಳನ್ನು ಕೊಡುವುದು

ವಿ॥ ರಾಮಚಂದ್ರರಾವ್ ಸಿಂಧ್ಯರು ಪರು.

ಮೈಸೂರು ವ್ಯಾಪಾರ ಸಂಘ, ಬೆಂಗಳೂರು.

ಆರಿಕೆಯ ಸಾರಾಂಶ.—ಪರಾಕ್ರಮದಲ್ಲಿಯೂ ಧೈರ್ಯದಲ್ಲಿಯೂ ಮತ್ತು ಇತರ ವಿಷಯಗಳಲ್ಲಿಯೂ ಮಹಮ್ಮದೀಯರಿಗಿಂತ ಕಡಿಮೆಯಿಲ್ಲದಿರುವ ಮಹಾಜೆಯವರೂ ರಜಪುತ್ರರೂ ವಿದ್ಯಾಭ್ಯಾಸದಲ್ಲಿ ಮಹಮ್ಮದೀಯರಿಗಿಂತಲೂ ಹಿಂದುಳಿದಿರುತ್ತಾರೆ. ಇವರಿಗೆ ವಿದ್ಯಾಶಾಲೆಗಳಲ್ಲಿ ಮಹಮ್ಮದೀಯರಿಗೆ ಕೊಟ್ಟಿರುವಂತೆ ಒಂದೇ ಸಮವಾದ ರಿಯಾಯಿತಿಯನ್ನು ಕೊಡಬೇಕು.

ವಿಷಯಸಂಖ್ಯೆ 146.

ಕೀಳು ತರಗತಿಯವರ ಕಸಬು ದಾರೀ ವಿದ್ಯೆಯನ್ನು ಅಭಿವೃದ್ಧಿಪಡಿಸುವುದು.

ವಿ॥ ಸಿ. ನ ರಾಯುಣಸ್ವಾಮಿಶೆಟ್ಟ್ರು, ಚಿಕ್ಕಬಳ್ಳಾಪುರ ತಾಲ್ಲೂಕು.

ಆರಿಕೆಯ ಸಾರಾಂಶ.—ಕೀಳು ತರಗತಿಯವರು ಮಾಡುತ್ತಿರುವ ಕಸಬುಗಳನ್ನು ತಪಶೀಲಾಗಿ ಪರಿಶೀಲನೆಮಾಡಿ ಅಂಥಾ ಕಸಬುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ತಕ್ಕ ಪ್ರಯತ್ನ ಮಾಡಬೇಕು. ಸಾಧ್ಯವಾದರೆ, ಯುಕ್ತವಾದ ರೀತಿಯಲ್ಲಿ ಅವರನ್ನು ತರಬಿಯತ್ತು ಮಾಡಬೇಕು.

ವಿಷಯಸಂಖ್ಯೆ 147.

ಹೈಸ್ಕೂಲ್ ತರಗತಿಗಳಲ್ಲಿ ಜೈನ ವಿದ್ಯಾರ್ಥಿಗಳಿಗೆ ಕೊಡುವ ವಿದ್ಯಾರ್ಥಿವೇತನಗಳನ್ನು 10ಕ್ಕೆ ಹೆಚ್ಚಿಸುವುದು.

ವಿ॥ ಸರಾಫ್ ಪದ್ಮರಾಜಯ್ಯನವರು ಜೈನ ವಿದ್ಯಾಭ್ಯಾಸ ಫಂಡ್ ಅಸೋಸಿಯೇಷನ್ ಮೈಸೂರು.

ಆರಿಕೆಯ ಸಾರಾಂಶ.—ಜೈನ ಮತ್ತು ತಿಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿರುವ ನಾಲ್ಕು ವಿದ್ಯಾರ್ಥಿವೇತನಗಳು ಬಹಳ ಕಡಿಮೆ. ಈ ಜನಗಳ ಪೂರ್ವೀಕರು ವಿದ್ಯಾಭ್ಯಾಸದಲ್ಲಿ ಬಹಳ ಪ್ರಸಿದ್ಧರಾಗಿದ್ದರು. ಈಗ ಈ ಜನರು ಬಹಳ ಹಿಂದೆ ಬಿದ್ದಿದ್ದಾರೆ. ಅವರ ಪೂರ್ವೀಕರ ಸ್ಥಿತಿಗೆ ಪುನಃ ಬರಬೇಕಾದರೆ ಇವರಿಗೆ ಪ್ರೋತ್ಸಾಹ ಕೊಡಬೇಕು. ಆದ್ದರಿಂದ ಹೈಸ್ಕೂಲ್ ತರಗತಿಗಳಲ್ಲಿ ಜೈನ ವಿದ್ಯಾರ್ಥಿಗಳಿಗೆ ಕೊಡುವ ವೇತನಗಳ ಸಂಖ್ಯೆಯನ್ನು 10ಕ್ಕೆ ಹೆಚ್ಚಿಸಬೇಕು.

ವಿಷಯಸಂಖ್ಯೆ 148.

ಎಲ್ಲಾ ಹಾಸ್ಟಲುಗಳಲ್ಲಿಯೂ ಎಲ್ಲಾ ಜಾತಿಯವರಿಗೂ ಊಟಕ್ಕೆ ಮತ್ತು ವಾಸಕ್ಕೆ ಸ್ಥಳ ವಸತಿಯನ್ನು ಕಲ್ಪಿಸುವುದು.

ಮಿ॥ ಮರುಳ ಸಿದ್ದಪ್ಪನವರು,
,, ಹಲ್ಕೂರು ರುದ್ರಪ್ಪನವರು,
ಅರಕೇಶ್ವರ ತಾಲ್ಲೂಕು.
,, ಎಂ. ಚನ್ನಬಸಪ್ಪನವರು,
ಅರಸೀಕೆರೆ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಎಲ್ಲಾ ಹಾಸ್ಟಲುಗಳಲ್ಲಿಯೂ ಎಲ್ಲಾ ತರಗತಿಯವರಿಗೂ ಊಟಕ್ಕೆ ಮತ್ತು ವಾಸಕ್ಕೆ ಏರ್ಪಾಟು ಮಾಡಬೇಕು.

ವಿಷಯಸಂಖ್ಯೆ 149.

ಸರ್ಕಾರಿ ಹಾಸ್ಟಲುಗಳಲ್ಲಿ ಪ್ರತ್ಯೇಕವಾದ ಅಡಿಗೆ ಮನೆಗಳನ್ನು ಏರ್ಪಡಿಸುವುದು.

ಮಿ॥ ಡಿ. ಎಸ್. ಮಲ್ಲಪ್ಪನವರು,
ಮತ್ತು
,, ಜಿಕ್ಕ ತಿಮ್ಮೇಗೌಡರು,
ತಿಪಟೂರು ತಾಲ್ಲೂಕು

ಅರಿಕೆಯ ಸಾರಾಂಶ.—ಸರ್ಕಾರೀ ಹಾಸ್ಟಲುಗಳಲ್ಲಿ ಪ್ರತ್ಯೇಕವಾದ ಅಡಿಗೆಮನೆಗಳನ್ನು ಏರ್ಪಡಿಸಬೇಕು.

ವಿಷಯಸಂಖ್ಯೆ 150.

(a) ಪಂಚಮ ಬೋರ್ಡಿಂಗ್ ಸ್ಕೂಲುಗಳಲ್ಲಿ ಹೆಚ್ಚಾಗಿ ಸ್ಥಳವನ್ನು ಏರ್ಪಡಿಸುವುದು.

(b) ಪಂಚಮರ ಹುಡಿಗಿಯರಿಗೆ ಬೋರ್ಡಿಂಗ್ ಸ್ಕೂಲು ಇಪ್ಪುವುದು.

ವಿ॥ ಮುರುಗೇಶಂ ಪಿಳ್ಳೈಯವರು,
ಆದಿದ್ರಾವಿಡ ಅಭಿವೃದ್ಧಿ ಸಂಘ,
ಬೆಂಗಳೂರು.

ಅರಿಕೆಯ ಸಾರಾಂಶ.—(a) ತುಮಕೂರಿನಲ್ಲಿಯೂ ಚಿಕ್ಕಮಗಳೂರಿನಲ್ಲಿಯೂ ಇರುವ ಪಂಚಮ ಬೋರ್ಡಿಂಗ್ ಸ್ಕೂಲುಗಳನ್ನು ಬಡಾಯಿಸಿ ಈಗ 60 ಜನರಿಗೆ ಸ್ಥಳವಿರುವುದಕ್ಕೆ ಬದಲಾಗಿ 100 ಜನರಿಗೆ ಸ್ಥಳವನ್ನು ಏರ್ಪಡಿಸಬೇಕು.

(b) ಪಂಚಮರ ಹುಡಿಗಿಯರಿಗೆ ಬೆಂಗಳೂರಿನಲ್ಲಿ ಒಂದು ಬೋರ್ಡಿಂಗ್ ಸ್ಕೂಲನ್ನು ಏರ್ಪಾಟು ಮಾಡಬೇಕು.

ವಿಷಯಸಂಖ್ಯೆ 151.

ಮೈಸೂರು ಯೂನಿವರ್ಸಿಟಿಗೆ ಬಜೆಟ್ಟಿನಲ್ಲಿ ಸಾಲಿಯಾನ ಕೊಡುವ ಹಣವನ್ನು ಗೊತ್ತುಮಾಡುವುದು.

ವಿ॥ ಎಸ್. ಆರ್. ಬಾಲಕೃಷ್ಣರಾಯರು,
ಮೈಸೂರು ಯೂನಿವರ್ಸಿಟಿ.

ಅರಿಕೆಯ ಸಾರಾಂಶ.—ಹೆಚ್ಚಾದ ಸ್ಥಳ ವಸತಿಯನ್ನು ಕಲ್ಪಿಸುವುದಕ್ಕೂ ಹೊಸ ವಿದ್ಯಾಶಾಖೆಗಳನ್ನುಂಟುಮಾಡುವದಕ್ಕೂ ಮತ್ತು ಕಾಲೇಜುಗಳಿಗೆ ಇನ್ನೂ ಹೆಚ್ಚು ಜನ ಪ್ರೊಫೆಸರುಗಳನ್ನು ನೇಮಿಸುವುದರ ಮೂಲಕ ಈಗಿನ ಶಿಬ್ಬಂದಿಯನ್ನು ಬಲಪಡಿಸುವದಕ್ಕೂ ಅನುಕೂಲಿಸುವಂತೆ ಮೈಸೂರು ಯೂನಿವರ್ಸಿಟಿಗೆ ಸಾಲಿಯಾನಾ 6 ಲಕ್ಷ ರೂಪಾಯಿಗೆ ಕಡಿಮೆಯಿಲ್ಲದ ಬಡ್ಜೆಟ್ ಗ್ರಾಂಟನ್ನು ಕೊಡಬೇಕೆಂದು ಪ್ರಾರ್ಥಿಸಿದೆ.

ವಿಷಯಸಂಖ್ಯೆ 152.

ಮೈಸೂರು ಯೂನಿವರ್ಸಿಟಿಯಲ್ಲಿ ಲಾ ಫ್ಯಾಕಲ್ಟಿಯನ್ನಿಡುವುದು.

ವಿ॥ ಎಸ್. ಆರ್. ಬಾಲಕೃಷ್ಣರಾಯರು,
ಮೈಸೂರು ಯೂನಿವರ್ಸಿಟಿ.

ಅರಿಕೆಯ ಸಾರಾಂಶ.—ಈ ಯೂನಿವರ್ಸಿಟಿಯಲ್ಲಿ ಡಿಗ್ರಿ ತೆಗೆದುಕೊಂಡವರು ಲಾ ಪರೀಕ್ಷೆಗೆ ಓದುವುದಕ್ಕೆ ದೂರ ಸ್ಥಳಗಳಿಗೆ ಹೋಗುವುದಕ್ಕೆ ಬದಲಾಗಿ ಇಲ್ಲಿಯೇ ಈ ಪರೀಕ್ಷೆಗೆ ಓದಲು ಅನುಕೂಲಿಸುವೆಂತೆ ಲಾ ಕಾಲೇಜನ್ನಿಡಬೇಕು. ಅಪರಲ್ಲಿ ಹುಟ್ಟತಕ್ಕ ಉತ್ಪತ್ತಿಯು ಅದರ ಖರ್ಚಿಗೆ ಸಾಕಾಗುವುದು ಮಾತ್ರವೇ ಅಲ್ಲದೆ, ಮದ್ರಾಸ ಬೊಂಬಾಯಿ ಪ್ರಾಂತ್ಯಗಳಲ್ಲಿ ಆಗುವಂತೆ ಈ ಕಾಲೇಜಿನಿಂದ ಸರ್ಕಾರಕ್ಕೆ ಉತ್ಪತ್ತಿಯೂ ಬರಬಹುದಾಗಿದೆ.

ವಿಷಯಸಂಖ್ಯೆ 153.

ಫೀಜು ಮಾಫ್ ಮಾಡಲ್ಪಟ್ಟ ವಿದ್ಯಾರ್ಥಿಗಳ ಶೇಕಡ ಸಂಖ್ಯೆಯನ್ನು ಹೆಚ್ಚಿಸುವುದು.

ವಿ|| ಎಸ್. ಆರ್. ಬಾಲಕೃಷ್ಣರಾಯರು, ಮೈಸೂರು ಯೂನಿವರ್ಸಿಟಿ.

ವಿಷಯಸಂಖ್ಯೆ 154.

ಮೈಸೂರಿನಲ್ಲಿರುವ ಓರಿಯಂಟಲ್ ಲೈಬ್ರರಿಯಲ್ಲಿ ಪುಸ್ತಕಗಳನ್ನು ಭಾಷಿಸಿ ಪ್ರಕಟಿಸುವ ಇಲಾಖೆಯನ್ನು ಏರ್ಪಡಿಸುವುದು.

ವಿ|| ಎಂ. ವೆಂಕಟಕೃಷ್ಣಯ್ಯನವರು,
ಮೈಸೂರು ಯೂನಿವರ್ಸಿಟಿ.

ಅರಿಕೆಯ ಸಾರಾಂಶ.—ವಿದ್ಯಾರ್ಥಿ ವೇತನವನ್ನು ಪಡೆಯುವವರ ಮತ್ತು ಫೀಜು ಮಾಫ್ ಮಾಡಲ್ಪಟ್ಟ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯನ್ನು ಪ್ರತಿತರ ಗತಿಯಲ್ಲಿಯೂ ಇರುವ ಒಟ್ಟು ಸಂಖ್ಯೆಯಲ್ಲಿ ಕನಿಷ್ಟಪಕ್ಷ ಶೇಕಡಾ 50ರಷ್ಟಕ್ಕಾದರೂ ಸಮವಾಗುವಂತೆ ಮಾಡುವುದಕ್ಕಾಗಿ ಫೀಜು ಮಾಫ್ ಮಾಡಲ್ಪಟ್ಟ ವಿದ್ಯಾರ್ಥಿಗಳ ಶೇಕಡಾ ಸಂಖ್ಯೆಯನ್ನು ಹೆಚ್ಚಿಸಬೇಕು.

ಅರಿಕೆಯ ಸಾರಾಂಶ.—(a) ವೈದ್ಯಸಾಯ, ಕೈಗಾರಿಕೆ, ವ್ಯಾಪಾರ, ಸೈನ್ಸ್ ಯೂ ಶಾಸ್ತ್ರ, ಸೌರಶಾಸ್ತ್ರ ಇವೇ ಮೊದಲಾದ ದೇಶಾಭ್ಯುದಯಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ಪ್ರಕಟಿಸುವ ಕೆಲಸವನ್ನು ಕೈಗೊಳ್ಳುವುದಕ್ಕಾಗಿ ಓರಿಯಂಟಲ್ ಲೈಬ್ರರಿಯಲ್ಲಿ "ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಬ್ಯೂರೊ" ಎಂಬದಾಗಿ ಒಂದು ಇಲಾಖೆಯನ್ನು ಏರ್ಪಡಿಸಿ ಅದನ್ನು ಸದರಿ ಲೈಬ್ರರಿಯ ಕ್ಯೂರೇಟರ ಮೇಲ್ವಿಚಾರಣೆಗೆ ಒಳಪಡಿಸಿಬಹುದು.

(b) ಈ ಇಲಾಖೆಯ ಚಾರ್ಜಿನಲ್ಲಿ 1 ಲಕ್ಷ ರೂಪಾಯಿ ಖಾಯಂ ಇಂಪ್ರೆಸ್ಟ್ ಹಣವನ್ನು ಇಟ್ಟು ಅದನ್ನು ಬಡ್ಡಿ ಇಲ್ಲದೆ ಹತ್ತು ವರ್ಷಗಳೊಳಗಾಗಿ ವಾಪಸು ತೆಗೆದುಕೊಳ್ಳುವಂತೆ ಮಾಡಬೇಕು. ಮೈಸೂರಿನಲ್ಲಿರುವ ಗವರ್ನಮೆಂಟ್ ಬ್ರಾಂಚ್ ಪ್ರೆಸ್ಸಿನವರು ಈ ಇಲಾಖೆಯ ಕೆಲಸವನ್ನು ಮಾಡುವಂತೆ ಏರ್ಪಾಟು ಮಾಡಬೇಕು. ಮೇಲ್ಕಂಡ ಪುಸ್ತಕಗಳನ್ನು ಬರೆಯುವುದಕ್ಕೆ ಅವಶ್ಯವೆನಿಸುವ ವಿದ್ವಾಂಸರನ್ನೂ ಉದ್ಯೋಗದಿಂದ ನಿವೃತ್ತರಾದ ಗ್ರಾಜುಯೇಟುಗಳನ್ನೂ ಸಂಗ್ರಹಿಸಬೇಕು. ಈ ರೀತಿ ಮಾಡಿದರೆ ಸರ್ಕಾರಕ್ಕೆ ಖರ್ಚಿಲ್ಲದೇನೆ ಕನ್ನಡ ಭಾಷೆಯು ಅಭಿವೃದ್ಧಿಗೆ ಬಂದು ಆ ಭಾಷೆಯ ಪುಸ್ತಕಗಳು ಹೆಚ್ಚುತ್ತವೆ. ಯಾಕೆಂದರೆ, ಪುಸ್ತಕಗಳನ್ನು ಮಾರಿದ ಹಣದಿಂದ ಅವುಗಳ ಪ್ರಕಟಣೆಗೆ ತಗುಲುವ ಖರ್ಚು ಹೊರಡುವುದು ಮಾತ್ರವಲ್ಲದೆ, ಇಂಪ್ರೆಸ್ಟ್ ಮೊಬಲಗು ಕೊಟ್ಟ ಕಾಲದೊಳಗಾಗಿ ಮುಂದಿನ ಕೆಲಸಕ್ಕೆ ನಕ್ಕ ಒಂದುಫಂಡು ಸೇರಬಹುದು.

ವಿಷಯಸಂಖ್ಯೆ 155.

ಎಲ್ಲಾ ಪಂಗಡಗಳ ಹುಡುಗರಿಗೂ ವಿದ್ಯಾರ್ಥಿವೇತನಗಳನ್ನು ಕೊಡುವುದು,

ವಿ॥ ಎಂ. ವೆಂಕಟಕೃಷ್ಣಯ್ಯನವರು,
ಮೈಸೂರು ಯೂನಿವರ್ಸಿಟಿ.

ಅರಿಕೆಯ ಸಾರಾಂಶ.—ಬಡವರಾಗಿಯೂ ಅರ್ಹರಾಗಿಯೂ ಇರುವ ಎಲ್ಲಾ ಪಂಗಡಗಳ ಹುಡುಗರಿಗೂ ವಿದ್ಯಾರ್ಥಿ ವೇತನಗಳನ್ನು ಕೊಡಬೇಕು. ವೇತನಗಳ ಸಹಾಯವಿಲ್ಲದೇನೆ ವಿದ್ಯಾಭ್ಯಾಸವನ್ನು ಮಾಡಲು ಶಕ್ತರಾದವರಿಗೆ ವೇತನಗಳನ್ನು ಕೊಡಬಾರದು. ವೇತನಗಳನ್ನು ಜೊಂಮುತ್ತಿರುವವರಿಗೆ ಫೀಜುಗಳನ್ನು ಮೊಫ' ಮಾಡಬಾರದು. ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಪ್ರೋತ್ಸಾಹವನ್ನು ಕೊಡಬೇಕು.

ವಿಷಯಸಂಖ್ಯೆ 156.

ಸ್ಕೂಲ್‌ಮತ್ತು ಕಾಲೇಜು ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ಮಿತವ್ಯಯ.

ವಿ॥ ಎಂ. ವೆಂಕಟಕೃಷ್ಣಯ್ಯನವರು
ಮೈಸೂರು ಯೂನಿವರ್ಸಿಟಿ.

ಅರಿಕೆಯ ಸಾರಾಂಶ.—ಇಟ್ಟಿಗೆ ಗಾರೆ ಕೆಲಸಕ್ಕಾಗಿ ಭಾರೀ ಹಣವನ್ನು ಖರ್ಚು ಮಾಡಬಾರದು. ಧಾರಾಳವಾಗಿ ಗಾಳಿಯೂ ಬೆಳಕೂ ಬಂದು ಆರೋಗ್ಯಕರವಾಗಿರುವ ಕಟ್ಟಡಗಳೂ ಸುತ್ತು ಮುತ್ತೂ ಆರೋಗ್ಯಕರವಾದ ಪ್ರದೇಶಗಳೂ ಇದ್ದರೆ ಸ್ಕೂಲ್ ಮತ್ತು ಕಾಲೇಜುಗಳ ಉದ್ದೇಶಕ್ಕೆ ಸಾಕಾಗಿರುತ್ತದೆ. ದೇಹವೂ ಮನಸ್ಸೂ ಆರೋಗ್ಯಕರವಾಗಿ ಬೆಳೆಯುವುದಕ್ಕೆ ಛಳಿ ಸೀಮೆಗಳಲ್ಲಿಯೂ ಕೂಡ ಬೈಲಿನಲ್ಲಿ ಸ್ಕೂಲುಗಳನ್ನು ಮಾಡಬೇಕೆಂತ ಹೇಳುತ್ತಾರೆ. ಸ್ಕೂಲ್ ಮತ್ತು ಕಾಲೇಜುಗಳ ಕಟ್ಟಡಗಳಿಗಾಗಿ ಹಣವನ್ನು ಮುಂಜೂರ್ಮಾಡುವಾಗ ವಿದ್ಯಾಭ್ಯಾಸದ ಇಲಾಖೆಯವರು ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಈ ಭಾಗದಲ್ಲಿ ಮಿತವ್ಯಯಕ್ಕೆ ಬಹಳ ಅವಕಾಶವಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಮೇಲೆ ಸರಿಯಾದ ಮೇಲ್ವಿಚಾರಣೆ ಇರಬೇಕಾದದ್ದು ಅತ್ಯವಶ್ಯಕವಾಗಿದೆ.

ವಿಷಯಸಂಖ್ಯೆ 157.

ಓದು ಬರಹ ಕಲಿಸುವುದರ ಜತೆಗೆ ಕೈಗಾರಿಕೆಯನ್ನು ಕಲಿಸುವುದಕ್ಕೆ ಏರ್ಪಾಟು ಮಾಡುವುದು.

ಮಿ|| ಎಂ. ವೆಂಕಟಕೃಷ್ಣಯ್ಯನವರು.
ಮೈಸೂರು ಯೂನಿವರ್ಸಿಟಿ.

ಅರಿಕೆಯ ಸಾರಾಂಶ.—ಓದು ಬರಹ ಕಲಿಸುವುದರ ಜತೆಗೆ ಕೈಗಾರಿಕೆಯನ್ನು ಕಲಿಸುವುದಕ್ಕೂ ತಕ್ಕ ಏರ್ಪಾಟು ಮಾಡಬೇಕು. ಹುಡುಗರಿಗೆ 13 ವರ್ಷ ತುಂಬುವ ತನಕ ಸಾಮಾನ್ಯ ವಿದ್ಯಾಭ್ಯಾಸವನ್ನು ಮಾಡಿಸಬೇಕು. ಅವನಿಗೆ 14 ವರ್ಷವಾದ ಕೂಡಲೆ ಅವನು ಸ್ವಸಾಮರ್ಥ್ಯದಿಂದಲೂ ಸ್ವಾವಲಂಬನೆಯಿಂದಲೂ ತನ್ನ ಜೀವನವನ್ನು ಸಂಪಾದಿಸಿಕೊಳ್ಳಲು ಅನುಕೂಲವಾದ ವಿದ್ಯೆಯಲ್ಲಿ ವಿಶೇಷ ಪರಿಶ್ರಮ ಹೊಂದುವಂತೆ ಮಾಡಬೇಕು. ಯಾವ ತರಹದ ಕಸಬಿಗೆ ಹುಡುಗರು ಲಾಯಕ್ಕಾಗಿದ್ದಾರೆ ಮತ್ತು ಅವರಿಗೆ ಅಭಿರುಚಿಯಿದೆ ಎನ್ನುವುದನ್ನು ಅವರ ತಾಯಿ ತಂದೆಗಳಾಗಲಿ, ಉಪಾಧ್ಯಾಯರಾಗಲಿ ಅಥವಾ ಹುಡುಗರೇ ಆಗಲಿ ಯೋಚಿಸಿ ನಿರ್ಧರಿಸಿಕೊಳ್ಳಬೇಕು. ಅಂಥಾ ಕಸಬಿನಲ್ಲಿ ವಿಶೇಷ ಪರಿಶ್ರಮ ಹೊಂದುವಂತೆ ಪ್ರೋತ್ಸಾಹ ಕೊಡಬೇಕು. ಸರ್ಕಾರದವರಿಗೆ ಒಂದು ಕಾಸೂ ಖರ್ಚಿಲ್ಲದೆ ಈ ಕೆಲಸವನ್ನು ಮಾಡಬಹುದು. ತಾಯಿ ತಂದೆಗಳು ಅವರ ಮಕ್ಕಳಿಗೆ ಸಹಾಯ ಮಾಡಬೇಕು. ಅವರಿಗೆ ಸಾಧ್ಯವಿಲ್ಲದಿದ್ದರೆ, ಸರ್ಕಾರದವರು ಮಾಡಬೇಕು. ಈ ವಿಷಯವನ್ನು ಸರ್ಕಾರದವರು ಸಾವಧಾನದಿಂದ ಆಲೋಚಿಸಿ, ತಕ್ಕ ಏರ್ಪಾಟನ್ನು ಮಾಡಬೇಕು. ಸರ್ಕಾರದವರು ತಮ್ಮ ಈ ಕರ್ತವ್ಯವನ್ನು ಮಾಡದೇ ತಪ್ಪಿಹೋಗುವ ಪಕ್ಷಕ್ಕೆ, ದೇಶಕ್ಕೆ ಅಲಂಕಾರಪ್ರಾಯರಾಗಬಹುದಾದಂಥಾ ಪುರವೆಕರನ್ನು ಸಮಾಜಕ್ಕೆ ಭಾರಭೂತರಾದ ಸೋಮಾರಿಗಳಾಗಿ ತಿರುಗುವಂತೆ ಮಾಡಿದಹಾಗೆ ಹಾಗುತ್ತದೆ. ಇದರಿಂದ ದೇಶದಲ್ಲಿ ಅನಾಯಕ ಸ್ಥಿತಿಗೆ ಕಾರಣವಾಗದಿದ್ದರೂ ಗಲಿಬಿಲಿಯಾದರೂ ಉಂಟಾಗಬಹುದು. ಆದಕಾರಣ ಕೈಗಾರಿಕೆಯ ಸ್ಕೂಲುಗಳನ್ನೂ ಟೆಕ್ನಿಕಲ್ (ನಾನಾ ಕಸಬುಗಳನ್ನು ಕಲಿಸುವ) ಸ್ಕೂಲುಗಳನ್ನೂ ಕಸಬುದಾರಿ ಸ್ಕೂಲುಗಳನ್ನೂ ಕಾಲೇಜುಗಳನ್ನೂ ಏರ್ಪಾಟು ಮಾಡಬೇಕೆಂತ ಪ್ರಾರ್ಥಿಸುತ್ತೇನೆ. ಇದಕ್ಕಾಗಿ ಸರ್ಕಾರದವರು ಖರ್ಚು ಮಾಡುವ ಹಣವು ಸರ್ಕಾರದ ಪ್ರಯೋಜನಕ್ಕಾಗಿ ತೀರಾ ಇಟ್ಟ ಡಿವಾಜಿಟ್ ಮೊಬಲಗೆಂಬ ಅಂಶವನ್ನೂ ಮತ್ತು ಈ ಕೆಲಸಕ್ಕೆ ಅವಶ್ಯಕವಾದ ಹಣವನ್ನು ಸರ್ಕಾರಕ್ಕೆ ವ್ಯವ್ಯವನ್ನು ವಿಶೇಷವಾಗಿ ಎಳಕೊಳ್ಳದೇನೇ ಒದಗಿಸಬಹುದೆಂಬ ಅಂಶವನ್ನೂ ಮನಸ್ಸಿನಲ್ಲಿಡಬೇಕು.

ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿ.—(ಪರಸ್ಪರ ಸಹಾಯ ಸಂಘಗಳು).

(ವಿಷಯಸಂಖ್ಯೆ 158ರಿಂದ 160ರ ವರೆಗೆ)

ವಿಷಯಸಂಖ್ಯೆ 158.

ಪರಸ್ಪರ ಸಹಾಯಸಂಘಗಳಿಗೆ ಸಂಬಂಧಪಟ್ಟ ದಾವೆಗಳನ್ನು ವಿಚಾರಣೆ ಮಾಡಲು ಅಮಲ್ದಾರರುಗಳಿಗೂ ಸಬ್‌ರಿಜಿಸ್ಟ್ರಾರರುಗಳಿಗೂ ಅಧಿಕಾರವನ್ನು ಕೊಡುವುದು.

ವಿ-ಗಿ ಅನಂತಪದ್ಮನಾಭತಿಮ್ಮಯ್ಯ
ವರು,
ಹಿರಿಯೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಪರಸ್ಪರ ಸಹಾಯ ಸಂಘಗಳಿಗೆ ಬರಬೇಕಾದ ಮೊಬಲಗುಗಳನ್ನು ವಸೂಲ್ ಮಾಡುವುದಕ್ಕೆ ಹಾಕುವ ದಾವೆಗಳನ್ನು ಈಗ ಪರಸ್ಪರ ಸಹಾಯ ಸಂಘಗಳ ರಿಜಿಸ್ಟ್ರಾರರೇ ವ್ಯವಸ್ಥೆ ಮಾಡುತ್ತಿದಾರೆ. ಅಂತಹ ದಾವೆಗಳನ್ನು ವ್ಯವಸ್ಥೆ ಮಾಡುವುದರಲ್ಲಿ ಬಹಳ ಮಟ್ಟಿಗೆ ವಿಳಂಬವಾಗುತ್ತದೆಯಾಗಿ ಈ ದಾವೆಗಳನ್ನು ವಿಚಾರಣೆ ಮಾಡುವುದಕ್ಕೂ ಡಿಕ್ರಿಗಳನ್ನು ಕೊಡುವುದಕ್ಕೂ ಅಮೆಲ್ದಾರರುಗಳಿಗೂ ಸಬ್‌ರಿಜಿಸ್ಟ್ರಾರರುಗಳಿಗೂ ಅಧಿಕಾರ ಕೊಡಬೇಕು.

ವಿಷಯಸಂಖ್ಯೆ 159.

ಪರಸ್ಪರ ಸಹಾಯ ಇಲಾಖೆಯವರು ಕೊಟ್ಟ ಡಿಕ್ರಿಗಳನ್ನು ಸಾವಕಾಶವಿಲ್ಲದೆ ಅಮಲ್‌ಜಾರಿ ಮಾಡುವುದು.

ವಿ॥ ಆರ್. ಗೋಪಾಲಸ್ವಾಮಿ ಅಯ್ಯಂ
ವರು.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಪರಸ್ಪರ ಸಹಾಯ ಇಲಾಖೆಯವರು ಕೊಟ್ಟ ಡಿಕ್ರಿಗಳನ್ನು ಅಮಲ್‌ಜಾರಿ ಮಾಡುವುದರಲ್ಲಿ ಆಗುವ ವಿಳಂಬವನ್ನು ತಪ್ಪಿಸುವುದಕ್ಕೆ ಕಾರ್ಯಕಾರಿಯಾದ ಏರ್ಪಾಡುಗಳನ್ನು ನಡಿಸತಕ್ಕದ್ದು.

ವಿಷಯಸಂಖ್ಯೆ 160.

ಪರಸ್ಪರ ಸಹಾಯ ಸಂಘಗಳಿಗೆ ಸಂಬಂಧಪಟ್ಟ ದಾವಗಳಿಗೆ ಲಿಮಿಟೇಷ್ ಆಕ್ಟು ಅನ್ವಯಿಸದಂತೆ ವಿನಾಯಿಸುವುದು.

ವಿ॥ ಕೆ. ನಾರಣಪ್ಪನವರು,
,, ಗುಬ್ಬಿ ಕೊಮಾರಯ್ಯನವರು,
ಹೊಳೇನರಸೀಪುರ ತಾಲ್ಲೂಕು.
,, ಬಳಿ ವೆಂಕಟಶಾಮಪ್ಪನವರು,
ಹೊಳೇನರಸೀಪುರ ಮ್ಯುನಿಸಿಪಾಲಿಟಿ

ಅರಿಕೆಯ ಸಾರಾಂಶ.—ಪರಸ್ಪರ ಸಹಾಯ ಸಂಘಗಳಿಗೆ ಸಂಬಂಧಪಟ್ಟ ವ್ಯವಹಾರಗಳಿಗೆ ಲಿಮಿಟೇಷ್ ಆಕ್ಟು ಅನ್ವಯಿಸದಂತೆ ಮಾಡಬೇಕು.

ಟೆಕ್ನಿಕಲ್.—(ಪಬ್ಲಿಕ್‌ವರ್ಕ್ಸ್).

ನಂ. 161ರಿಂದ 164ರ ವರೆಗೆ.

ವಿಷಯಸಂಖ್ಯೆ 161.

ಬೆಂಗಳೂರು ಮೈಸೂರು ಸಿಟಿಗಳಲ್ಲಿರುವ ಖಾಸಗಿ ಫರ್ಮ್‌ಗಳಿಗೂ ಮನೆಗಳಿಗೂ ಟೆಲಿಫೋನ್ ಸಂಬಂಧವನ್ನು ಮಾಡುವುದು.

ವಿ॥ ಎಚ್. ಕೃಷ್ಣಪ್ಪನವರು,
ಬೆಂಗಳೂರು ಸಿಟಿ ಮ್ಯುನಿ॥
,, ಎಂ. ರಾಮಚಂದ್ರರಾವ್ ಸಿಂ
ಧ್ಯೆಯವರು,
ಮೈಸೂರು ಚೇಂಬರ್ ಆಫ್
ಕಾಮರ್ಸ್, ಬೆಂಗಳೂರು.

ಅರಿಕೆಯ ಸಾರಾಂಶ.—ಬೆಂಗಳೂರು ಮೈಸೂರು ಸಿಟಿಗಳು ವ್ಯಾಪಾರದಲ್ಲಿ ಮಹತ್ವವನ್ನು ಪಡೆದಿವೆಯಾಗಿ ಟೆಲಿಫೋನ್ ವಿಸ್ತಾರ ಬಹಳ ಅವಶ್ಯವಾಗಿದೆ. ಆದ್ದರಿಂದ ಸರ್ಕಾರದವರು ಈ ಎರಡು ಪಟ್ಟಣಗಳಲ್ಲಿರುವ ಖಾಸಗಿ ಫರ್ಮ್‌ಗಳಿಗೂ ಮನೆಗಳಿಗೂ ಈ ವಿಸ್ತಾರವನ್ನು ಬಡಾಯಿಸಬೇಕು.

ವಿಷಯಸಂಖ್ಯೆ 162.

ಸೀಳು ನಾಲೆಗಳನ್ನು ಸರ್ಕಾರಿ ಖರ್ಚಿನಿಂದ ದುರಸ್ತಿನಲ್ಲಿ ಇಟ್ಟು ಕೊಂಡು ಬರುವುದು.

ಮಿ॥ ಕೆ. ನಾರಣಪ್ಪನವರು, ಮತ್ತು
,, ಜೆ. ಕೊಮಾರಯ್ಯನವರು,
ಹೊಳೇನರಸೀಪುರ ತಾಲ್ಲೂಕು.
,, ಬಳೆ ವೆಂಕಟಶಾಮಯ್ಯನವರು, ಹೊಳೇನರಸಿಪುರ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಸೀಳು ನಾಲೆಗಳನ್ನು ದುರಸ್ತಿ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಲೀಯಾನಾ ತಗಲುವ ಖರ್ಚನ್ನು ಮೇಜರ್ ನಾಲೆಗಳಿಗೆ ಹೇಗೊ ಹಾಗೆ ಸರ್ಕಾರದವರೇ ವಹಿಸಬೇಕು. ಏಕೆಂದರೆ, ಕಂದಾಯದ ವರವು ಎರಡು ನಾಲೆಗಳ ಕೆಳಗೂ ಒಂದೇ ರೀತಿಯಾಗಿದೆ.

ವಿಷಯಸಂಖ್ಯೆ 163.

ಹೂಳು ತುಂಬಿದ ಕೆರೆಗಳನ್ನು ಅವುಗಳ ಪೂರ್ವಸ್ಥಿತಿಗೆ ತರುವುದು.

ಮಿ॥ ನಾರಾಯಣಸ್ವಾಮಿ ಚೆಟ್ಟಿಯವರು,
ಚಿಕ್ಕಬಳ್ಳಾಪುರ ತಾಲ್ಲೂಕು.

ಅರಿಕೆಯ ಸಾರಾಂಶ.—ಅನೇಕ ಕೆರೆಗಳಲ್ಲಿ ಹೂಳು ತುಂಬಿ ಅವುಗಳಲ್ಲಿ ನೀರು ನಿಲ್ಲುವ ಪ್ರಮಾಣವು ಬಹಳಮಟ್ಟಿಗೆ ಕಮ್ಮಿಯಾಗಿದೆ. ಅಂತಹ ಕೆರೆಗಳ ಕೆಳಗೆ ವರ್ಷವರ್ಷವೂ ಬೆಳೆಗಳು ಕೆಟ್ಟುಹೋಗುತ್ತಲಿವೆ. ಅಂತಹ ಹೂಳುತುಂಬಿದ ಕೆರೆಗಳ ಅಚ್ಚುಕಟ್ಟನ್ನು ತಿದ್ದುಪಡಿಸಬೇಕು ಅಥವಾ ಕೆರೆಗಳಲ್ಲಿ ನಿಲ್ಲುವ ನೀರಿನ ಪ್ರಮಾಣವು ಹೆಚ್ಚು ವಂತೆ ಕೋಡಿಯನ್ನು ಎತ್ತಬೇಕು.

ವಿಷಯಸಂಖ್ಯೆ 164.

ಮೈನರ್ ಕೆರೆಗಳ ದುರಸ್ತಿಯನ್ನು ಶೀಘ್ರವಾಗಿ ನಡಿಸುವುದು.

ಮಿ॥ ಎನ್. ಎಸ್. ನಂಜುಂಡಯ್ಯನವರು,
,, ಎಚ್. ಬೋರಣ್ಣನವರು,
,, ಕೆ. ಮಹದೇವಪ್ಪನವರು,
ಹಾಸನ ತಾಲ್ಲೂಕು.
,, ಎಚ್. ವಿ. ರಂಗಸ್ವಾಮಿಯವರು, ಹಾಸನ ಟೌನ್ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಮೈನರ್ ಕೆರೆಗಳ ದುರಸ್ತಿಯನ್ನು ಶೀಘ್ರವಾಗಿ ನಡೆಸಲು ಕಾರ್ಯಕಾರಿಯಾದ ಏರ್ಪಾಡು ಮಾಡಬೇಕು.

ಟೆಕ್ನಿಕಲ್.—(ರೈಲ್ವೆಗಳು).

(ವಿಷಯಸಂಖ್ಯೆ 165 ರಿಂದ 176.)

ವಿಷಯಸಂಖ್ಯೆ 165.

ಬಂದು ರೈಲ್ವೆ ಬೋರ್ಡನ್ನು ಸ್ಥಾಪಿಸುವುದು.

ಶ್ರೀ॥ ಎಸ್. ಎಸ್. ನಂಜುಂಡಯ್ಯನವರು,
,, ಎಚ್. ಬೋರಣ್ಣನವರು,
ಮತ್ತು
,, ಕೆ. ಮಹದೇವಪ್ಪನವರು,
ಹಾಸನ ತಾಲ್ಲೂಕು.
ಮತ್ತು
,, ಎಚ್.ವಿ. ರಂಗಸ್ವಾಮಿಯವರು,
ಹಾಸನ ಟೌನ್ ಮ್ಯುನಿಸಿಪಾಲಿಟಿ.

ಆರಿಕೆಯ ಸಾರಾಂಶ.—ಪ್ರಜಾಪ್ರತಿನಿಧಿಸಭೆಯಿಂದ ಚುನಾಯಿಸಲ್ಪಟ್ಟ ಇಬ್ಬರು ಮೆಂಬರುಗಳೂ ನ್ಯಾಯನಿರ್ಣಾಯಕಸಭೆಯಿಂದ ಚುನಾಯಿಸಲ್ಪಟ್ಟ ಒಬ್ಬರು ಖಾಸಗೀ ಮೆಂಬರೂ ಇಲಾಖೆ ಚಾರ್ಜಿನಲ್ಲಿರುವ ಕೌನ್ಸಿಲಿನ ಮೆಂಬರನರೂ ಸೇರಿದ ಬಂದು ರೈಲ್ವೇ ಬೋರ್ಡನ್ನು ರಚಿಸಬೇಕು.

ವಿಷಯಸಂಖ್ಯೆ 166.

(1) ಸರ್ಕಾರದವರು ತಮ್ಮ ರೈಲ್ವೆಯ ಕಾರ್ಯಕ್ರಮವನ್ನು ವಿಧಾಯಕ ಮಾಡುವುದು.

ಆರಿಕೆಯ ಸಾರಾಂಶ.—(1) ಸರ್ಕಾರದವರು ತಮ್ಮ ರೈಲ್ವೆಯ ಕಾರ್ಯಕ್ರಮವೆನ್ನು ವಿಧಾಯಕ ಮಾಡಬೇಕು.

(2) ರೈಲ್ವೆ ಬೋರ್ಡಿಗೆ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸುವುದು.
ಮಿ॥ ಈರ್ಣಿಕ ಕೃಷ್ಣಮೂರ್ತಿರಾಯರು, ಮಾಗಡಿ ತಾಲ್ಲೂಕು.

(2) ರೈಲ್ವೆಯ ಬೋರ್ಡಿಗೆ ಚುನಾಯಿಸಲ್ಪಡುವ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

ವಿಷಯಸಂಖ್ಯೆ 167.

ಸಂಸ್ಥಾನದಲ್ಲಿ ರೈಲ್ವೆಗಳನ್ನು ಬಡಾಯಿಸುವುದು.
ಮಿ॥ ಸಿ. ನರಸಿಂಹಯ್ಯನವರು, ಹಗ್ಗಡದೇವನಕೋಟೆ ತಾಲ್ಲೂಕು.
ಮತ್ತು
,, ಎಚ್. ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ ತಾಲ್ಲೂಕು.

ಅರಕೆಯ ಸಾರಾಂಶ.—ಅವಶ್ಯವಾದಲ್ಲಿ ವಿದೇಶೀಯ ಬಂಡವಾಳದ ಸಹಾಯವನ್ನು ಹೊಂದಿ ಸಂಸ್ಥಾನದಲ್ಲಿ ರೈಲ್ವೆಗಳನ್ನು ಬಡಾಯಿಸಬೇಕು.

ವಿಷಯಸಂಖ್ಯೆ 168.

ರೈಲ್ವೆ ಚಾರ್ಜುಗಳನ್ನು ಕಮ್ಮಿ ಮಾಡುವುದು.
ಮಿ॥ ಲಿಂಗೇಗೌಡರು, ನೆಲ್ಲಿಸೂರು ತಾಲ್ಲೂಕು.

ಅರಕೆಯ ಸಾರಾಂಶ.—ಪ್ರಯಾಣ ಮಾಡುವ ಜನರಿಗೆ ಆಗಾಗ್ಯೆ ರೈಲ್ವೇ ಚಾರ್ಜುಗಳನ್ನು ಹೆಚ್ಚಿಸುತ್ತಿರುವುದರಿಂದ ಬಹುಮಟ್ಟಿಗೆ ಅನಾನುಕೂಲವಾಗುತ್ತಲಿದೆ. ಅಲ್ಲದೆ ಈಂದಾಯದ ಮೇಲೆ ರೈಲ್ವೇ ಸೆಸ್ಸನ್ನೂ ದಾಖಲ್ಮಾಡಿದೆ. ಆದ್ದರಿಂದ ಮೊದಲಿದ್ದ ದರಗಳನ್ನೇ ಜಾರಿಯಲ್ಲಿ ತರಬೇಕೆಂದು ಪ್ರಾರ್ಥಿಸಲಾಗಿದೆ.

ವಿಷಯಸಂಖ್ಯೆ 169.

ಮೂರನೆ ತರಗತಿಯ ಪ್ರಯಾಣೀಕರಿಗೆ ಅನುಕೂಲ್ಯಗಳು.

(1) ಪಿಟಿ ಅಮಾವಾಸ್ಯೆ ಶೇಕಂಪ್ಪನವರು, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್

,, ಎಚ್. ವಿ. ಚಂದ್ರಶೇಖರಯ್ಯನವರು, ಬೆಂಗಳೂರು ಮ್ಯುನಿಸಿಪಾಲಿಟಿ

,, ಬಿಂದ. ವಾಗೀವಾಚಾರ್ಯರವರು, ಕಾನಕಾನಹಳ್ಳಿ ಮ್ಯುನಿ

(2) ,, ಎ. ನರಸಿಂಹಯ್ಯಂಗಾರ್ಯರು ಸಾಗರ ಟೌನ್ ಮ್ಯುನಿಸಿಪಾಲಿಟಿ.

(3) ,, ಅನಂತರಾಜಪ್ಪನವರು,

,, ಅನಂತಲಕ್ಷ್ಮೀನಾರಣಪ್ಪನವರು,

,, ವೀರಪ್ಪಗೌಡರು, ತುಮಕೂರು ತಾಲ್ಲೂಕ್

,, ಅಬ್ದುಲ್‌ನಬಿಖಾನ್‌ಸಾಹೇಬರು, ತುಮಕೂರು ಮ್ಯುನಿಸಿಪಾಲಿಟಿ.

D. G. S.

ಆಜ್ಞೆಯ ಸಾರಾಂಶ.—(1) (a) ಸಾಮಾನ್ಯ ದರ್ಜೆಯ ಜನರಿಗೆ (ಮಧ್ಯವರ್ತಿ ತರಗತಿಯವರೆಗೆ) ಚಾರ್ಜನ್ನು ಹೆಚ್ಚಿಸಿರುವುದರಿಂದ ಎರಡನೆ ತರಗತಿಯ ಗಾಡಿಯಲ್ಲಿ ಪ್ರಯಾಣಮಾಡುವುದು ಕಷ್ಟವಾಗಿದೆ. ಜನರು ಗುಂಪು ಸೇರುವುದರಿಂದಲೂ ಇತರ ಕಾರಣಗಳಿಂದಲೂ ಮೂರನೆಯ ತರಗತಿಯಲ್ಲಿ ಅವರು ಪ್ರಯಾಣ ಮಾಡುವುದಕ್ಕೆ ಹಿಂದೆಗೆಯುತ್ತಾರೆ. ಆದ್ದರಿಂದ ಇಂಟರ್‌ಮೀಡಿಯೇಟ್ ತರಗತಿಯ ಗಾಡಿಗಳನ್ನು ಜೋಗನೆ ಏರ್ಪಡಿಸಬೇಕು.

(b) ಮೂರನೇ ತರಗತಿ ಪ್ರಯಾಣೀಕರಿಗೆ ಗುಂಪು ಸೇರದಂತೆ ಸಾಕಾದಷ್ಟು ಸ್ಥಳವನ್ನು ಕಲ್ಪಿಸಬೇಕು.

(c) ಬಡಬಗ್ಗರಿಗೆ ಬಹಳ ತೊಂದರೆಯಾಗಿರುವುದರಿಂದ ಈಗ ಹೆಚ್ಚಿಸಿರುವ ಮೂರನೇ ತರಗತಿಯ ಚಾರ್ಜಿನ ದರವನ್ನು ಶೇಕಡಾ 25ರಷ್ಟು ಕಮ್ಮಿ ಮಾಡಬೇಕು.

(2) ರೈಲ್ವೇ ಚಾರ್ಜನ್ನು ಹೆಚ್ಚಿಸಿದ್ದರೂ ಮೂರನೆಯ ತರಗತಿ ಪ್ರಯಾಣೀಕರಿಗೆ ಇರುವ ಅನುಕೂಲ್ಯಗಳನ್ನು ಮೇಲ್ಪಡಿಸಿ ಇಲ್ಲ. ಅವಶ್ಯಕವಾದ ಮೇಲ್ಪಾಡುಗಳನ್ನು ಪರಿಶೀಲಿಸಿ ಈಗಣ ಸ್ಥಿತಿಯನ್ನು ಉತ್ತಮಪಡಿಸತಕ್ಕ ಬಗ್ಗೆ ಬಂದು ಕಮಿಟಿಯನ್ನು ಏರ್ಪಡಿಸಬೇಕಾಗಿ ಪ್ರಾರ್ಥನೆ.

(3) ಪ್ರಯಾಣೀಕರಿಗೆ ಸರಿಯಾದ ಅನುಕೂಲ್ಯಗಳನ್ನು ಕಲ್ಪಿಸದೆ ಬಹು ಬೇಗನೆ ರೈಲ್ವೆ ಚಾರ್ಜುಗಳನ್ನು ಹೆಚ್ಚಿಸಿದೆ. ಮೂರನೆಯ ತರಗತಿಯಲ್ಲಿ ಪ್ರಯಾಣಮಾಡುವರ ಬಾಳು ವಾಸ್ತವವಾಗಿಯೂ ಶೋಚನೀಯವಾಗಿದೆ ಹಿಂಗಣ ದರಗಳನ್ನೇ ಪುನಃ ಜಾರಿಗೆ ತಂದು ಹೆಚ್ಚಾಗಿ ಗಾಡಿಗಳನ್ನು ಜಂಟಿಸಿ ಪ್ರಯಾಣೀಕರಿಗೆ ಸಾಕಾದಷ್ಟು ಅನುಕೂಲಗಳನ್ನು ಕಲ್ಪಿಸಬೇಕೆಂದು ಕೋರಲಾಗಿದೆ.

ವಿಷಯಸಂಖ್ಯೆ 170.

ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಿಗೆ ಉಚಿತವಾಗಿ ಕೊಡುವ ಟಿಕೆಟ್ಟುಗಳನ್ನು ಕೊಡುವುದು.

ಮಿ|| ಎ. ಶ್ರೀಕಂಠಪ್ಪನವರು, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು

ವಿಷಯಸಂಖ್ಯೆ 171.

ಪ್ಲಾಟ್‌ಫಾರಂ ಟಿಕೆಟ್ಟುಗಳನ್ನು ಕೊಡುವ ಪದ್ಧತಿಯನ್ನು ರಜಾ ಮಾಡುವುದು.

ಮಿ|| ಎ. ವೆಂಕಟರಾಮಯ್ಯನವರು

,, ಪಟೇಲ್ ಶಂಕರಪ್ಪನವರು, ತರೀಕೆರೆ ತಾಲ್ಲೂಕು.

ವಿಷಯಸಂಖ್ಯೆ 172.

ಹೆಂಗುಸರ ಗಾಡಿಗಳಿಗೆ ಹೆಂಗುಸರನ್ನಾಗಲಿ ವೈದ್ಯರನ್ನಾಗಲಿ ಟಿಕೆಟ್ಟು ಕಲೆಕ್ಟರುಗಳನ್ನಾಗಿ ನೇಮಿಸುವುದು.

ಮಿ|| ಸಯ್ಯದ್ ಖಾಜಾಮುರ್ತಾಸಾಬರು, ಮುಸ್ಲಿಂ ಸಂಘ, ತರೀಕೆರೆ ಮತ್ತು

,, ಎಸ್. ನಿಲ್ಲಾರಯ್ಯನವರು, ಕಡೂರು ತಾಲ್ಲೂಕು.

ಅರಿಕೆಯ ಸಾರಾಂಶ.—ಕೆಲವು ವರ್ಷಗಳ ಹಿಂದೆ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳಿಗೆ ಎರಡನೆಯ ತರಗತಿಯ ಗಾಡಿಗಳಲ್ಲಿ ರಿಯಾಯಿತಿಯ ಟಿಕೆಟ್ಟುಗಳನ್ನು ಕೊಡುತ್ತಿದ್ದರು. ಮೆಂಬರುಗಳಿಗೆ ಸಂಚಾರ ಭತ್ಯವಾವುದೂ ಇಲ್ಲವಾಗಿ ಕನಿಷ್ಟಪಕ್ಷ ಪ್ರಜಾಪ್ರತಿನಿಧಿಸಭೆಯ ವರ್ಧಂತಿ ಮತ್ತು ವಸರಾ ಅಧಿವೇಶನಗಳಿಗಾದರೂ ಕೊಡುವಂತೆ ಇದನ್ನು ಪುನಃ ಜಾರಿಯಲ್ಲಿ ತರಬೇಕು.

ಅರಿಕೆಯ ಸಾರಾಂಶ—ಜನರಿಗೆ ಬಹುಮೆಟ್ಟಿಗೆ ತೊಂದರೆಯಾಗುವುದರಿಂದ ತರೀಕೆರೆ ಮತ್ತು ಇತರ ರೈಲ್ವೆ ಸ್ಟೇಷನ್ನುಗಳಲ್ಲಿ ಪ್ಲಾಟ್‌ಫಾರಂ ಟಿಕೆಟ್ಟುಗಳನ್ನು ಕೊಡುವ ಪದ್ಧತಿಯನ್ನು ತಪ್ಪಿಸಬೇಕು.

ಅರಿಕೆಯ ಸಾರಾಂಶ.—(a) ರೈಲ್ವೆಗಳಮೇಲೆ ಹೆಂಗುಸರ ಗಾಡಿಗಳಲ್ಲಿ ಟಿಕೆಟ್ಟುಗಳನ್ನು ತನಿಖೆಮಾಡಲು ಹೆಂಗುಸರನ್ನಾಗಲಿ ಅಥವಾ ವೈದ್ಯರನ್ನಾಗಲಿ ಟಿಕೆಟ್ಟು ಕಲೆಕ್ಟರುಗಳನ್ನಾಗಿ ನೇಮಿಸಬೇಕು.

(b) ಪ್ರತಿಯೊಂದು ರೈಲ್ವೆ ಸ್ಟೇಷನ್ನಿನಲ್ಲಿಯೂ ಪ್ಲಾಟ್‌ಫಾರಮ್ಮಿಗೆ ಹೆಂಗುಸರಿಗಾಗಿ ಮಾತ್ರವೇ ಒಂದು ಪ್ರತ್ಯೇಕ ಮಾರ್ಗವನ್ನು ಕಲ್ಪಿಸಬೇಕು ಮತ್ತು ಮೂರನೆ ತರಗತಿಯಲ್ಲಿ ಪ್ರಯಾಣಮಾಡುವ ಹೆಂಗುಸರಿಗೆ ಪ್ರತಿಯೊಂದು ರೈಲ್ವೆ ಸ್ಟೇಷನ್ನಿನಲ್ಲಿಯೂ ಒಂದು ವೆಯ್ಟಿಂಗ್ ರೂಮನ್ನು ವಿಸ್ತರಿಸಬೇಕು.

ವಿಷಯಸಂಖ್ಯೆ 173.

ಎಲ್ಲಾ ರೈಲ್ವೆ ಸ್ಟೇಷನ್ನುಗಳಲ್ಲಿಯೂ ಗೋಷಾ ಹೆಂಗುಸರ ಸಲವಾಗಿ ಪ್ರತ್ಯೇಕವಾದ ಮೂರನೆಯ ತರಗತಿ ವೆಯಿಟಿಂಗ್ ರೂಮುಗಳನ್ನು ಕಟ್ಟಿಸುವುದು.

ಮಿ|| ಎಸ್. ನಾಗಪ್ಪಯ್ಯನವರು, ಹಾಸನ ಡಿಸ್ಟ್ರಿಕ್ಟ್ ಬೋರ್ಡ್.

ಅರಿಕೆಯ ಸಾರಾಂಶ.—ಎಲ್ಲಾ ರೈಲ್ವೆ ಸ್ಟೇಷನ್ನುಗಳಲ್ಲಿಯೂ, ಗೋಷಾ ಹೆಂಗುಸರ ಸಲವಾಗಿ ಪ್ರತ್ಯೇಕವಾದ ಮೂರನೆಯ ತರಗತಿ ವೆಯಿಟಿಂಗ್ ರೂ ಮುಗಳನ್ನು ಕಟ್ಟಿಸಬೇಕೆಂದು ಪ್ರಾರ್ಥಿಸಲಾಗಿದೆ.

ವಿಷಯಸಂಖ್ಯೆ 174.

ಅರಸೀಕೆರೆ–ಮಂಗಳೂರು ರೈಲ್ವೆ ಲೈನನ್ನು ಹಾಕುವುದು.

ಮಿ|| ಬಿ. ಎ. ದೇವೇಗೌಡರು, ಅಸ್ಸಿಸ್ಟೆಂಟ್ ಮೈಸೂರು ನೇಟಿವ್ ಪ್ಲಾಂಟರುಗಳ ಸಂಘ, ಚಿಕ್ಕಮಗಳೂರು.

ಅರಿಕೆಯ ಸಾರಾಂಶ.—ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ವ್ಯಾಪಾರದ ಉದ್ದೇಶಗಳಿಗಾಗಿ ಸಂಸ್ಥಾನಕ್ಕೂ ಪಶ್ಚಿಮ ರೇವಿಗೂ ರೈಲ್ವೆ ಮೂಲಕ ಸಂಬಂಧವಿರಬೇಕಾದದ್ದು ಅತ್ಯವಶ್ಯಕವಾಗಿದೆ. ಮಂಗಳೂರು ಡಿಸ್ಟ್ರಿಕ್ಟ್ ಜೋರ್ಡಿನವರೂ ಸಹ ನಮ್ಮ ಸಂಸ್ಥಾನದೊಡನೆ ರೈಲ್ವೆ ಸಂಬಂಧವನ್ನು ಇಟ್ಟುಕೊಳ್ಳಲು ಕುತೂಹಲವುಳ್ಳವರಾಗಿ ಈ ಉದ್ದೇಶಕ್ಕಾಗಿ ರೈಲ್ವೆ ಸೆಸ್ಸನ್ನು ವಸೂಲ್ಮಾಡುತ್ತಿದ್ದಾರೆಂದು ತಿಳಿಯಬರುತ್ತಿದೆ. ಈಗ ಬಟ್ಕಲ್ ಪ್ರಾಜೆಕ್ಟನ್ನು ನಡಿಸುವುದಕ್ಕೆ ಸಾಧ್ಯವಿಲ್ಲವಾದ್ದರಿಂದ ಹಣ ಕಾಸಿನ ಸ್ಥಿತಿಯು ಮುಗ್ಗಟ್ಟು ಕಳೆದ ಒಡನೆ ಅರಸೀಕೆರೆ ಮಂಗಳೂರು ಸಂಬಂಧದ ವಿಷಯವೆನ್ನು ಪರ್ಯಾಲೋಚಿಸಬೇಕು.

ವಿಷಯಸಂಖ್ಯೆ 175.

ಚಿಕ್ಕಜಾಜೂರ್–ಚಿತ್ರದುರ್ಗ ರೈಲ್ವೆ ಲೈನನ್ನು ಹೊಳಕಾಲ್ಮುರು ವಾಗರ್ವಾಗಿ ರಾಯದುರ್ಗಕ್ಕೆ ಬಡಾಯಿಸುವುದು.

ವಿ॥ ಸುಂಕದ ರಾಘಣ್ಣನವರು, ಹೊಳಕಾಲ್ಮುರು ತಾಲ್ಲೂಕು.

ಅರಿಕೆಯ ಸಾರಾಂಶ.—ಚಿತ್ರದುರ್ಗದಿಂದ ರಾಯದುರ್ಗಕ್ಕೆ ರೈಲ್ವೆ ಲೈನನ್ನು ಬಡಾಯಿಸುವುದರಿಂದ ಪ್ರಯಾಣೀಕರಿಗೂ ವ್ಯಾಪಾರಿಗಳಿಗೂ ಬಹು ಮಟ್ಟಿಗೆ ಪ್ರಯೋಜನವಾಗುತ್ತದೆ. ಈ ಲೈನನ್ನು ಹಾಕುವುದರಿಂದ ವ್ಯಾಪಾರವು ಅಭಿವೃದ್ಧಿಗೆ ಬರುತ್ತದೆ. ಚಿತ್ರದುರ್ಗದಲ್ಲಿ ಮರ್ಚಂಟೀಫ್ ಕೋರ್ಟು ಇರುವುದೂ ಚಿಕ್ಕಜಾಜೂರಿನಲ್ಲಿ ವಾರಕ್ಕೊಂದಾವರ್ತಿ ದೊಡ್ಡ ಸಂತೆ ನಡೆಯುವುದೂ ಹೊಳಕಾಲ್ಮುರುವೂ ಮತ್ತು ರಾಯದುರ್ಗವೂ ದೊಡ್ಡ ವ್ಯಾಪಾರಸ್ಥಳಗಳಾಗಿರುವುದೂ ಈ ರೈಲ್ವೆ ಕೆಲಸಕ್ಕೆ ಕೈಹಾಕುವುದಕ್ಕೆ ಸಾಕಷ್ಟು ಕಾರಣಗಳಾಗಿವೆ. ಅಲ್ಲದೆ ಡಿಸ್ಟ್ರಿಕ್ಟ್‌ನಲ್ಲಿ ವಸೂಲಾಗುವ ರೈಲ್ವೆ ಸೆಸ್ಸು (ಸುಮಾರು ಈ ಎರಡು ವರ್ಷದಲ್ಲಿ) ಉಪಯೋಗವಾಗದೆ ಈಗ ಖರ್ಚು ಮಾಡಬೇಕಾದರೆ ಸುಮಾರು 2, ೪ ಲಕ್ಷ ರೂಪಾಯಿಗಳಷ್ಟು ಹೊಂಬಲಗು ಸಿಗುವುದಾಗಿ ಕಾಣಬರುತ್ತದೆ. ಈ ಹಣವೂ ಬರುವ ವರ್ಷಗಳಲ್ಲಿ ವಸೂಲಾಗುವ ಸೆಸ್ಸೂ ಸೇರಿ ರೈಲ್ವೆ ಲೈನನ್ನು ಹಾಕುವುದಕ್ಕೆ ಉಪಯೋಗವಾಗಬೇಕು. ವಸೂಲಾಗುವ ಮೊಬಲಗನ್ನು ನೋಡಿಕೊಂಡು ವರ್ಷವರ್ಷ ಕೆಲಸವು ಮುಂದುವರಿಯಬೇಕು. ಈ ಲೈನನ್ನು ಹಾಕುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸಬೇಕು.

ವಿಷಯಸಂಖ್ಯೆ 176.

ನರಸಿಂಹರಾಜಪುರ–ತರೀಕೆರೆ ಟ್ರಾಂವೆಯಲ್ಲಿ ಸಾಮಾನನ್ನು ಸೀದಾ ಕಳುಹಿಸುವುದು.

ವಿ॥ ಎಚ್. ಕೃಷ್ಣರಾಯರು, ಕೊಪ್ಪ ತಾಲ್ಲೂಕು.

,, ಎಚ್. ಎಸ್. ಗಣೇಶರಾಯರು, ಮಲ್ಲೇಶ್ವರ ಜವಿರ್ಚಾಪಾರರ ಸಂಘ, ಹೊಸಕೊಪ್ಪ.

ಅರಿಕೆಯ ಸಾರಾಂಶ.—ಇತರ ಲೈನುಗಳಲ್ಲಿರುವ ಸ್ಟೇಷನ್ನುಗಳಿಗೆ ಸಾಗಿಸಬೇಕಾದ ಸಾಮಾನುಗಳನ್ನೂ (ಬಾಂಗಿ) ಪಾರ್ಸಲುಗಳನ್ನೂ ನರಸಿಂಹರಾಜಪುರ–ತರೀಕೆರೆ ಟ್ರಾಂವೆ ಸ್ಟೇಷನ್ನುಗಳಲ್ಲಿ ಸೀದಾ ರವಾನಿಸುವುದಕ್ಕೆ ಏರ್ಪಾಡುಗಳನ್ನು ಮಾಡಬೇಕೆಂದು ಪ್ರಾರ್ಥಿಸಲಾಗಿದೆ.

ವಿಷಯಸಂಖ್ಯೆ 177.

ತರೀಕೆರೆ–ನರಸಿಂಹರಾಜಪುರ ಟ್ರಾಂವೆಯನ್ನು ಸರಿಪಡಿಸುವುದು.

ಮಿ|| ಎ. ವೆಂಕಟರಾಮಯ್ಯನವರು,
,, ಪಟೇಲ್ ಶಂಕರಪ್ಪನವರು,
ತರೀಕೆರೆ ತಾಲ್ಲೂಕು.

ಆರಿಕೆಯ ಸಾರಾಂಶ.—ತರೀಕೆರೆ–ನರಸಿಂಹರಾಜಪುರ ಟ್ರಾಂವೆಯು ಬಹಳ ಅಪಾಯಕರವಾದ ಸ್ಥಿತಿಯಲ್ಲಿದೆ. ಬೇಗನೆ ಅದನ್ನು ಸರಿಪಡಿಸಬೇಕು.

ವಿಷಯಸಂಖ್ಯೆ 178.

(a) ಚಿಕ್ಕಜಾಜೂರು ರೈಲ್ವೇ ಸ್ಟೇಷನಿನಲ್ಲಿ ಸಾಕಾದ ಸ್ಥಳ ವಸತಿಯನ್ನು ಉಂಟುಮಾಡುವುದು.

(b) ಬೀರೂರು ಸ್ಟೇಷನ್ನಿನಲ್ಲಿ ಗಾಡಿಯಿಂದ ಇಳಿಯುವಕಡೆ ಪ್ಲಾಟ್‌ಫಾರವನ್ನು ಹಾಕಿಸುವುದು.

ಮಿ|| ಎ. ಅನಂತಯ್ಯನವರು,
,, ಬಿ. ವೆಂಕಪ್ಪಯ್ಯನವರು,
,, ಸಿ. ಸುಬ್ಬರಾಯರು,
ಶಿವಮೊಗ್ಗ ತಾಲ್ಲೂಕು.

ಆರಿಕೆಯ ಸಾರಾಂಶ.—(a) ಸ್ಥಳ ಸಾಲದ್ದರಿಂದ ಪ್ರಯಾಣೀಕರಿಗೆ ಚಿಕ್ಕಜಾಜೂರು ರೈಲು ಸ್ಟೇಷನಿನಲ್ಲಿ ಬಹಳ ತೊಂದರೆಯುಂಟಾಗುತ್ತದೆ. ತ್ವರೆಯಲ್ಲಿ ಸಾಕಾದ ಸ್ಥಳ ವಸತಿಯನ್ನು ಕೊಡಲು ಏರ್ಪಾಡನ್ನು ಮಾಡಬೇಕು.

(b) ಬೀರೂರು ಸ್ಟೇಷನಿನಲ್ಲಿ ಈಗಿರುವ ಏರ್ಪಾಡು ಅನಾನುಕೂಲವಾಗಿರುವುದಲ್ಲದೆ ಅಪಾಯಕರವಾಗಿರುವುದರಿಂದ ಗಾಡಿಯಿಂದಿಳಿಯುವ ಕಡೆ ಸರಿಯಾದ ಛಾವಣಿ ಸಹಿತವಾದ ಪ್ಲಾಟ್‌ಫಾರಂ ಖಂಡಿತವಾಗಿಯೂ ಅವಶ್ಯಕವಾಗಿರುತ್ತದೆ.

ಸ್ಥಳೀಯ ಪ್ರಜಾಧಿಕಾರ.

(ನಂ. 179—207.)

ವಿಷಯಸಂಖ್ಯೆ 179.

ಸ್ಥಳೀಯ ಸಭೆಗಳ ಸಮ್ಮೇಳನವೊಂದನ್ನು ಮುಂದಿನ ವರುಷ ನಡೆಸುವುದು.

ಮಿ|| ಕೆ. ವೆಂಕಟಸುಬ್ಬಯ್ಯರು,
ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್.

ಆರಿಕೆಯ ಸಾರಾಂಶ.—ಸಂಸ್ಥಾನದಲ್ಲಿ ಸ್ಥಳೀಯ ಪ್ರಜಾಧಿಕಾರವು ಅಭಿವೃದ್ಧಿಗೆ ಬರುವ ನಿಮಿತ್ತ ಸ್ಥಳೀಯ ಸಭೆಗಳ ಸಮ್ಮೇಳನ ಬಂದನ್ನು ಮುಂದಿನ ವರುಷ ಸರ್ಕಾರದವರು ನಡೆಸುವ ಏರ್ಪಾಡನ್ನು ಮಾಡಬೇಕು.

ವಿಷಯಸಂಖ್ಯೆ 180.

ಮ್ಯುನಿಸಿಪಾಲಿಟಿಗಳಿಗೂ ಸ್ಥಳೀಯ ಸಭೆಗಳಿಗೂ ಸರ್ಕಾರೀ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರುಗಳು

(a) ಮಿಣಿ ಭಾರೀ ಸಣ್ಣ ತಿಪ್ಪೆಸ್ವಾಮಿಗಳು, ಪೊಳಕಾಲ್ಮುರು ಮ್ಯುನಿಸಿಪಾಲಿಟಿ.

(b) ,, ಗಿರಿಯಾಪುರಂಯನು, ಕೋಲಾರ ತಾಲ್ಲೂಕು.

(c) ,, ರಂಗಸ್ವಾಮಿಕೆಟ್ಟಿಯು, ಮಾಗಡಿ ತಾಲ್ಲೂಕು.

ಅರಿಕೆಯ ಸಾರಾಂಶ.—(a) ಸ್ಥಳೀಯ ಪ್ರಜಾಧಿಕಾರದ ವಿಸ್ತಾರ ಜಾರಿಗೆ ತಂದದು ಮೊದಲು ಸರ್ಕಾರೀ ಉದ್ಯೋಗಸ್ಥರಲ್ಲದ ವೈಸ್ ಪ್ರೆಸಿಡೆಂಟರುಗಳು ತೃಪ್ತಿಕರವಾಗಿ ಕೆಲಸ ಮಾಡಿರುವರು ಮತ್ತು ಅವರಿಗೆ ಸಾಕಾದಷ್ಟು ಮೊಹಿತಿ ಬಂದಿರುತ್ತೆ. ಆದಕಾರಣ ಅರ್ಹರಾದವರು ಸಿಗುವ ಮ್ಯುನಿಸಿಪಾಲಿಟಿಗಳಲ್ಲಿ ಸರ್ಕಾರೀ ಉದ್ಯೋಗಸ್ಥರಲ್ಲದವರನ್ನು ಪ್ರೆಸಿಡೆಂಟರನ್ನಾಗಿ ಮೊಕರರು ಮಾಡತಕ್ಕದ್ದೆಂದು ಹುಕುಂ ಆಗಬೇಕಾಗಿ ಪ್ರಾರ್ಥನೆ.

(b) ಎಲ್ಲಾ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳಿಗೂ ಮ್ಯುನಿಸಿಪಲ್ ಕೌನ್ಸಿಲುಗಳಿಗೂ ಅವುಗಳ ಮೆಂಬರುಗಳ ಪೈಕಿ ಸರ್ಕಾರೀ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರುಗಳನ್ನು ಚುನಾಯಿಸುವ ಅಧಿಕಾರವನ್ನು ಕೊಡಬೇಕು.

(c) ಸರ್ಕಾರೀ ಉದ್ಯೋಗಸ್ಥರಲ್ಲದ ವೈಸ್ ಪ್ರೆಸಿಡೆಂಟರನ್ನು ಚುನಾವಣೆಗೆ ಇಟ್ಟು ಸರ್ಕಾರೀ ಉದ್ಯೋಗಸ್ಥರಾದ ಪ್ರೆಸಿಡೆಂಟರನ್ನು ಮೊಕರರು ಮಾಡಿರುವುದರಿಂದ ತಾಲ್ಲೂಕು ಕಸಬಾ ಮ್ಯುನಿಸಿಪಾಲಿಟಿಗಳ ಕೆಲಸ ಕಾರ್ಯಗಳು ಮೇಲಾಗಿರುವುದಿಲ್ಲ. ಆದಕಾರಣ ಮ್ಯುನಿಸಿಪಲ್ ಕೌನ್ಸಿಲರುಗಳು ಉಳಿದ ಕಂದಾಯದಾತರುಗಳು ಸರ್ಕಾರೀ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರನ್ನು ಚುನಾಯಿಸುವಂತೆ ಅವಕಾಶಕೊಡಬೇಕು. ಇದು ಸಾಧ್ಯವಲ್ಲವಾದರೆ ಹಿಂದೆ ಇದ್ದಂತೆ ಡೆಪ್ಯುಟಿ ಕಮಿಷನರುಗಳನ್ನು ಪ್ರೆಸಿಡೆಂಟರನ್ನಾಗಿ ಮಾಡಿ ಸರ್ಕಾರೀ ಉದ್ಯೋಗಸ್ಥರಲ್ಲದ ವೈಸ್ ಪ್ರೆಸಿಡೆಂಟರನ್ನು ಮಾತ್ರ ಚುನಾವಣೆಗೆ ಬಿಟ್ಟು ಅಮಲ್ದಾರರನ್ನು ಸಾಧಾರಣ ಮ್ಯುನಿಸಿಪಲ್ ಕೌನ್ಸಿಲರನ್ನಾಗಿ ಮಾಡಬೇಕು.

ವಿಷಯಸಂಖ್ಯೆ 181.

ತಾಲ್ಲೂಕು ಬೋರ್ಡುಗಳಿಗೆ ಸದಸ್ಯರುಗಳ ಚುನಾವಣೆಯ ನಿಬಂಧನೆಗಳನ್ನು ತಿದ್ದುವುದು.

ವಿ|| ಸಂಪಂಗಿರಾಮಯ್ಯನವರು,
ಮಾಲೂರು ತಾಲ್ಲೂಕು.

ಆರಿಕೆಯು ಸಾರಾಂಶ.—(1) ಗ್ರಾಮ ಪಂಚಾಯತಿಗಳಿಂದ ತಾಲ್ಲೂಕು ಬೋರ್ಡುಗಳಿಗೆ ಸದಸ್ಯರುಗಳನ್ನು ಚುನಾಯಿಸುವ ಪದ್ಧತಿಯನ್ನು ತೆಗೆದು ಹಾಕಬೇಕು. ಅದೇರೀತಿ ಒಂದು ತಾಲ್ಲೂಕಿನ ಗ್ರಾಮಗಳೆಲ್ಲವನ್ನು ನಾಲ್ಕು ಸರ್ಕಲುಗಳನ್ನಾಗಿ ಕೂಡಿಸುವುದನ್ನು ವಜಾ ಮಾಡಬೇಕು. ಪ್ರತಿಯೊಂದು ಹೋಬಳಿಯನ್ನೂ ಎರಡು ಗ್ರೂಪುಗಳನ್ನಾಗಿ ವಿಂಗಡಿಸಬೇಕು.

(2) ಚುನಾಯಿಸಲ್ಪಟ್ಟ ಸದಸ್ಯರುಗಳ ಸಂಖ್ಯೆಯು ಯಾವಾಗಲೂ ಸರ್ಕಾರಿ ಮತ್ತು ನೇಮಕವಾದ ಸದಸ್ಯರುಗಳ ಸಂಖ್ಯೆಗಿಂತಲೂ ಹೆಚ್ಚಾಗಿರಬೇಕು.

ವಿಷಯಸಂಖ್ಯೆ 182.

ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ತಾಲ್ಲೂಕುಬೋರ್ಡುಗಳ ಮುಖೇನ ಸದಸ್ಯರವರನ್ನು ಕಳುಹಿಸಿಕೊಡುವುದಕ್ಕೆ ಬದಲಾಗಿ ನೇರವಾಗಿ ಚುನಾಯಿಸುವುದು.

ವಿ|| ಗಿರಿಯಪ್ಪಜೆರಾಯರು,
ಕೋಲಾರ ತಾಲ್ಲೂಕು.

ಆರಿಕೆಯು ಸಾರಾಂಶ.—ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸದಸ್ಯರುಗಳನ್ನು ತಾಲ್ಲೂಕು ಬೋರ್ಡುಗಳ ಮುಖೇನ ಚುನಾಯಿಸುವುದಕ್ಕಿಂತಲೂ ನೇರವಾಗಿಯೆ ಚುನಾಯಿಸುವಂತೆ ಮಾಡಬೇಕು.

ವಿಷಯಸಂಖ್ಯೆ 183.

ಹಿಂಗುಸರಿಗೆ ಚುನಾವಣೆಯ ಹಕ್ಕನ್ನು ಕೊಡುವುದು.

ವಿ|| ಆರ್. ಗೋಪಾಲಸ್ವಾಮಿ
ಅಯ್ಯರು,
ಬೆಂಗಳೂರು ಸಿಟಿ ಮ್ಯು||

ಆರಿಕೆಯ ಸಾರಾಂಶ.—ಎಲ್ಲಾ ಸ್ಥಳೀಯ ಸಭೆಗಳಿಗೂ ಮತ್ತು ನ್ಯಾಯವಿಧಾಯಕ ಸಭೆಗೂ ಹೆಂಗುಸರನ್ನು ನೇಮಕ ಮಾಡಬಹುದು ಮತ್ತು ಮದರಾಸಿನಲ್ಲಿರುವಂತೆ ಅವರನ್ನು ಚುನಾವಣೆಗೆ ನಿಲ್ಲಲು ಅರ್ಹರನ್ನಾಗಿ ಎಣಿಸಬಹುದು.

ವಿಷಯಸಂಖ್ಯೆ 184.

ಪ್ರತಿಯೊಂದು ಮ್ಯುನಿಸಿಪಾಲಿಟಿಗೂ ಮತ್ತು ಸ್ಥಳೀಯ ಸಭೆಗೂ ಇಬ್ಬರು ಮಹಮ್ಮದೀಯ ಮೆಂಬರುಗಳನ್ನು ನೇಮಕಮಾಡುವುದು.

ಖು|| ಎಂ. ಯೂಸಫ್‌ಖಾನರು,
ಚಿಕ್ಕಬಳ್ಳಾಪುರ ಮ್ಯುನಿಸಿಪಾಲಿಟಿ.

ಅರಿಕೆಯ ಸಾರಾಂಶ.—ಮಹಮ್ಮದೀಯರ ಪ್ರಜಾಸಂಖ್ಯೆಯು 1000ಕ್ಕೆ ಕಡಿಮೆಯಿಲ್ಲದ ಸ್ಥಳಗಳಲ್ಲಿ ಪ್ರತಿಯೊಂದು ಮ್ಯುನಿಸಿಪಾಲಿಟಿಗೂ ಸ್ಥಳೀಯ ಸಭೆಗೂ ಇಬ್ಬರು ಮಹಮ್ಮದೀಯರನ್ನು ನೇಮಕ ಮಾಡುವಂತೆ ಹುಕುಂ ಆಗಬೇಕು.

ವಿಷಯಸಂಖ್ಯೆ 185.

ತಾಲ್ಲೂಕು ಬೋರ್ಡುಗಳಿಗೆ ಮೆಂಬರುಗಳನ್ನು ಚುನಾಯಿಸುವ ಮತ್ತು ಆ ಬಗ್ಗೆ ಚುನಾವಣೆಗೆ ನಿಲ್ಲುವ ಅಧಿಕಾರವನ್ನು ಪಟೇಲರಿಗೆ ಕೊಟ್ಟಿರುವಂತೆ ಶ್ಯಾನುಭೋಗರಿಗೂ ಕೊಡುವುದು.

ಖು|| ಖಾಜಪ್ಪನವರು,
,, ಕೆ. ರಾಮಣ್ಣನವರು,
ಕಿಡ್ಲಘಟ್ಟ ತಾಲ್ಲೂಕು.

ಅರಿಕೆಯ ಸಾರಾಂಶ.—ಸರ್ಕಾರಕ್ಕೆ ಸಂಬಂಧನೆಯ ಪ್ರಮೋಣದಷ್ಟು ಕಂದಾಯವನ್ನು ಕೊಡದಿರುವ ಪಟೇಲರಿಗೆ ತಾಲ್ಲೂಕು ಬೋರ್ಡುಗಳ ಮೆಂಬರುಗಳ ಚುನಾವಣೆಯ ಮತ್ತು ಸದರಿ ಮೆಂಬರುತನಕ್ಕೆ ನಿಲ್ಲುವ ಹಕ್ಕನ್ನು ಕೊಡಲಾಗಿದೆ. ಇದೇ ವಿಧವಾದ ರಿಯಾಯತಿಯನ್ನು ಶ್ಯಾನುಭೋಗರ ವಿಷಯದಲ್ಲೂ ತೋರಿಸಬೇಕೆಂದು ಕೋರಲಾಗಿದೆ.

ವಿಷಯಸಂಖ್ಯೆ 186.

ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೂ ತಾಲ್ಲೂಕು ಬೋರ್ಡ್‌ಗಳಿಗೂ ಒಬ್ಬ ಮೆಂಬರನ್ನು ಕಳುಹಿಸುವ ಹಕ್ಕನ್ನು ಮೈನರ್ ಯಾನೆ ಸಣ್ಣ ಮ್ಯುನಿಸಿಪಾಲಿಟಿಗಳಿಗೆ ಕೊಡುವುದು.

ಮಿ|| ವಿರೂಪಾಕ್ಷಯ್ಯನವರು,
ನ್ಯಾಮತಿ ಮ್ಯುನಿಸಿಪಾಲಿಟಿ.
,, ಎಸ್. ಗುಂಡಲಿಂಗಪ್ಪನವರು,
,, ಬಸಲಿಂಗಪ್ಪನವರು,
ಹೊನ್ನಾಳಿ ತಾಲ್ಲೂಕು.

ವಿಷಯಸಂಖ್ಯೆ 187.

ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರ ಕರ್ತವ್ಯಗಳನ್ನು ಗೊತ್ತುಮಾಡುವುದು.

ಮಿ|| ಕೆ. ಎಸ್. ಗುಂಡಪ್ಪನವರು,
